## Report by the Speaker to the Assembly of His Highness the Maharaja's Address.

Mr. SPEAKER.—As required by Rule 14 (2) of the Rules of Procedure and Conduct of Business, I report that His Highness the Maharaja was pleased to address the Members of the Legislative Assembly and the Legislative Council assembled together on the 19th instant and I place a copy of the Address on the Table of the House. I hope copies of the Address have been distributed to all the Members.

Sri J. MOHAMED IMAM (Jagalur).—May I know what is the procedure adopted for the debate on the Address, whether we are going to discuss today only the motion and the amendments will be taken up tomorrow?

Mr. SPEAKER.—Since the copies of the amendments have not been received, we shall discuss the Address as such before we take up the amendments.

Sri K. PATTABHIRAMAN (Kolar).—May I just point out, Mr. Speaker, you had rightly fixed the time yesterday evening as the last hour for the receipt of amendments, but still it has caused a certain amount of inconvenience? The usual practice was, when the Speaker announced that the Address was made, it was then that the time was generally fixed for the receipt of amendments. Anyway, can you kindly consider the suggestion of fixing 3 P.M. today for the receipt of the amendments and having discussion on the amendments tomorrow?

Mr. SPEAKER.—All right. Today, we will discuss the Address itself and then tomorrow we shall discuss the amendments that will be sent. The time for sending amendments is extended till 3 o'clock today.

Sri J. MOHAMED IMAM. I want another clarification. There is the main motion and also amendments will be coming up later on. Are we to proceed on the basis that a Member will have two opportunities to speak, *i.e.*, can one speak on the Address first and then again on the amendment?

Mr. SPEAKER.—I would request the Hon'ble Members who have tabled or propose to table amendments to this Address or Motion of Thanks to abstain from speaking today so that as many other members as possible may have an opportunity to speak on the Address and the members who have tabled the amendments will have the opportunity to speak tomorrow.

---

## DEBATE ON THE MOTION OF THANKS.

ಶ್ರೀ ಎಚ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಸ್ವಾಮಿ, ರಾಜಪ್ರಮುಖರಾದ ಶ್ರೀಮನ್ ಮಹಾರಾಜರವರು ದಯಪಾಲಿಸಿದ ಭಾಷಣದ ಸಂಬಂಧವಲ್ಲಿ ಅವರಿಗೆ ಈ ಕೆಳಗೆ ಕಂಡಂತೆ ಬಿನ್ನವತ್ತಳೆಯನ್ನು ಅರ್ಪಿಸಬೇಕೆಂದು ಸೂಚಿಸುವುದಕ್ಕೆ ನಾನು ಬಹಳ ಸಂತೋಷಪಡುತ್ತೇನೆ. ಆ ಸೂಚನೆ ಈ ರೀತಿ ಇದೆ.

"ಈ ಅಧಿವೇಶನದಲ್ಲಿ ಸೇರಿರತಕ್ಕ ಮೈಸೂರು ವಿಧಾನ ಸಭೆಯ ಸದಸ್ಯರುಗಳಾದ ನಾವು, ಮೈಸೂರು ವಿಧಾನ ಸಭೆಯ ಮತ್ತು ವಿಧಾನ ಪರಿಷತ್ತಿನ ಸಂಯುಕ್ತಾಧಿವೇಶನದಲ್ಲಿ ಮಹಾಸ್ವಾಮಿಯವರಾದ ತಾವು ದಯಪಾಲಿಸಿದ ಭಾಷಣಕ್ಕಾಗಿ ನಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಸಲ್ಲಿಸಲು ಅಪ್ಪಣೆ ದಯಪಾಲಿಸಬೇಕೆಂದು ಪ್ರಾರ್ಥಿಸುತ್ತೇವೆ."

ಸ್ವಾಮಿ, ಈ ಭಾಷಣದಲ್ಲಿ ಕಂಡುಬರತಕ್ಕ ಪ್ರಾಮುಖ್ಯವಾದ ಅಂಶಗಳ ಮೇಲೆ ನನ್ನ ಅಭಿಪ್ರಾಯವನ್ನು ಸೂಚಿಸಲು ತಮ್ಮ ಅಪ್ಪಣೆ ಬೇಡುತ್ತೇನೆ. ಮೊದಲನೆಯದಾಗಿ, ರಾಜ್ಯಗಳ ಮರುವಿಂಗಡಣೆ ವಿಚಾರವನ್ನು ಆ ಭಾಷಣದಲ್ಲಿ ಪ್ರಸ್ತಾಪಿಸಿದ್ದಾರೆ. ಇಲ್ಲಿ ಬಹಳ ಪ್ರಾಮುಖ್ಯವಾದ ಒಂದು ವಾಕ್ಯ ಇರುವುದನ್ನು ಮೊದಲು ಓದುತ್ತೇನೆ.

"ಯಾವ ಪುನರ್ವ್ಯವಸ್ಥೆಯು ಏರ್ಪಾಡನ್ನೇ ಕೈಗೊಳ್ಳಲಿ, ಅದಕ್ಕೆ ಸಂಬಂಧಪಟ್ಟ ಜನಗಳ ಹಿತಸಾಧನೆಯೇ ಅದರ ಗುರಿಯಾಗಿರಬೇಕು. ಜನರ ಸುಖ ಸಂಪತ್ತುಗಳು ಹೆಚ್ಚುವಂತಿದ್ದರೆ ಮಾತ್ರವೇ ರಾಜ್ಯಗಳ ಈಗಿನ ವ್ಯವಸ್ಥಾಕ್ರಮವನ್ನು ಬದಲಾಯಿಸುವುದು ಯುಕ್ತವಾದುದು."

ಎಂಬುದಾಗಿ ಅಲ್ಲಿ ನಮೂದಿಸಿದೆ. ಸಾಮಾನ್ಯವಾಗಿ ಹಿಂದೂಸ್ಥಾನದಲ್ಲಿ ಇರತಕ್ಕಂಥ ಪ್ರಾಂತ್ಯಗಳನ್ನು ಮರುವಿಂಗಡಣೆ ಮಾಡತಕ್ಕಂಥ ಈ ಸಂದರ್ಭದಲ್ಲಿ ಅನುಸರಿಸಬೇಕಾದ ಪ್ರಾಮುಖ್ಯವಾದ ನೀತಿ ಯಾವರೀತಿಯಾಗಿರಬೇಕೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಈ ದೇಶದ ಜನರ ಸುಖಸಂಪತ್ತುಗಳನ್ನು ಈಗಿರುವುದಕ್ಕಿಂತ ಹೆಚ್ಚು ಮಾಡಬೇಕಾಗಿದ್ದರೆ ಅವರಿಗೆ ಹೆಚ್ಚು ಸೌಲಭ್ಯಗಳನ್ನು ಕಲ್ಪಿಸಬೇಕಾದರೆ ಈಗಿರುವ ರೀತಿಯಲ್ಲಿ ಪ್ರಾಂತಗಳಿದ್ದರೆ ಅದಕ್ಕೆ ಅವಕಾಶವಿದೆಯೋ ಅಥವಾ ಬದಲಾವಣೆ ಮಾಡಿದರೆ ಅವಕಾಶವಿದೆಯೋ ಎಂಬುದು ಯೋಚಿಸಬೇಕಾದ ವಿಷಯ. ಅನೇಕ ಸಂಸ್ಥಾನಗಳು ಈ ಆಡಳಿತ ವ್ಯವಸ್ಥೆಗೆ ಅನುಗುಣವಾಗಿಲ್ಲದೆ, ಕೆಲವು ಬಹಳ ವಿಶಾಲವಾಗಿರಬಹುದು, ಕೆಲವು ಬಹಳ ಚಿಕ್ಕದಾಗಿರ

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಬಹುದು. ಇವುಗಳನ್ನು ನಾವು ಚರ್ಚೆ ಮಾಡುವಾಗ ತೆಗೆದುಕೊಳ್ಳಬಹುದಾದಂಥ ಮುಖ್ಯವಾದ ಅಂಶ ಏನೆಂದರೆ, ವ್ಯವಹಾರದ ದೃಷ್ಟಿಯಿಂದ ಈ ಪ್ರಾಂತಗಳಲ್ಲಿ ಇರತಕ್ಕ ಜನಗಳಿಗೆ ಎಲ್ಲಾ ಸೌಲಭ್ಯಗಳನ್ನು ಉಂಟುಮಾಡುವುದಕ್ಕೆ ಈ ಮರುವಿಂಗಡಣೆ ಅಡ್ಡಿ ಆಗುತ್ತದೆಯೇ ಅಥವಾ ಸಹಾಯಕವಾಗುತ್ತದೆಯೇ ಎಂಬುದು. ಇದರಲ್ಲಿ ತೀರ ಚಿಕ್ಕದಾದಂಥ ಪ್ರಾಂತ್ಯಗಳು ಇದ್ದರೆ ಕೆಲಸಕಾರ್ಯಗಳು ಸುಲಲಿತವಾಗಿ ನಡೆಯುವುದಕ್ಕೆ ಮತ್ತು ಉಪಕಾರಿಯಾಗಿ ನಡೆಯುವುದಕ್ಕೆ ಬದಲಾಗಿ ಹೆಚ್ಚು ಖರ್ಚಾಗಿ ತೊಂದರೆಯಾಗುತ್ತದೆ. ಅಥವಾ ಪ್ರಾಂತ್ಯಗಳು ದೊಡ್ಡದಾಗಿದ್ದರೆ ಆಡಳಿತ ವ್ಯವಸ್ಥೆಯಿಂದ ಜನಗಳಿಗೆ ನ್ಯಾಯವು ದೊರಕುವುದಕ್ಕೆ ಮತ್ತು ಸುಲಭವಾಗಿ ಸರ್ಕಾರದೊಡನೆ ವ್ಯವಹಾರ ಮಾಡುವುದಕ್ಕೆ ಅವಕಾಶವಿಲ್ಲದೆ ತೊಂದರೆ ಬರುತ್ತದೆ. ಆ ದೃಷ್ಟಿಯಿಂದ ಇದನ್ನು ಪರಿಶೀಲನೆ ಮಾಡಬೇಕು. ಇದರಲ್ಲಿ ಯಾವ ವಿಧವಾದಂಥ ಜಾತಿ ಮತಗಳ ವಿಷಯಗಳಿಗೆ ನಾವು ಗಮನಕೊಡಬೇಕಾದ ಅವಶ್ಯಕತೆ ಇಲ್ಲ.

Sri J. MOHAMED IMAM (Jagalur) On a point of clarification. The question of States Re-organisation will be considered when the Fact-Finding Committee Report is taken up for consideration, and two days have been allotted for this purpose when the main issues can be thrashed out. That being the case, is it necessary to dilate on that point now? So far as I am concerned, I will defer my opinion on that point and deal with that matter when actually the report is taken up. When we have got other opportunities to discuss the matter, is it necessary to express our views on this matter in the course of the Debate on the Motion of Thanks?

Mr. SPEAKER.—I see the point. It is left to the individual speaker. Since a member has got another opportunity, it is better not to refer to that now But we cannot preclude a Member from making any reference since it is mentioned in the Address.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸ್ವಾಮಿ, ಎದುರುಪಕ್ಷದ ನಾಯಕರು ಹೇಳಿದ ರೀತಿಯನ್ನನುಸರಿಸಿ ಈ ವಿಷಯದಲ್ಲಿ ಸ್ಥೂಲವಾಗಿ ನನ್ನ ಅಭಿಪ್ರಾಯವನ್ನು ತಿಳಿಸುತ್ತಾ ಇದ್ದೇನೆಯೇ ಹೊರತು ವಿವರವಾಗಿ ಹೇಳಲು ಈಗ ಅವಕಾಶವನ್ನು ತೆಗೆದುಕೊಳ್ಳುವುದಿಲ್ಲ. ನಾವು ಇವನ್ನು ಪ್ರಸ್ತಾಪಮಾಡುವಾಗ ಯಾವ ವಿಧವಾದಂಥ ದ್ವೇಷಾಸೂಯೆಯನ್ನಾಗಲಿ ಅಥವಾ ನಮ್ಮ ಮನಸ್ಸಿಗೆ ತೋರಿದ ರೀತಿಯಲ್ಲಿ ಯಾವುದೋ ಅಭಿಪ್ರಾಯಗಳನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡು ಈ ದೇಶದ ಜನಗಳ ಸುಖಸಂಪತ್ತುಗಳನ್ನು ಸಾಧನೆಮಾಡುವ ಕೆಲಸಕ್ಕೂ ಅಡ್ಡಿ ಬರುವುದು ಅಷ್ಟು ಸೂಕ್ತವಲ್ಲವೆಂದು ನಾನು ಭಾವಿಸುತ್ತೇನೆ. ಮುಖ್ಯವಾಗಿ ನಾವು ಇಲ್ಲಿ ಪ್ರತಿನಿಧಿಗಳಾಗಿ ಬಂದು ಕುಳಿತು ಕೆಲಸಮಾಡುವಾಗ ಯಾರು ನಮ್ಮನ್ನು ಇಲ್ಲಿಗೆ ಕಳುಹಿಸಿದ್ದಾರೋ ಅವರ ಹಿತವನ್ನು ಸಾಧಿಸುವುದು ನಮ್ಮ ಗುರಿ. ಈ ಗುರಿಯನ್ನು ಮುಟ್ಟುವುದಾದರೆ ಮಾತ್ರ ಈ ಕೆಲಸವನ್ನು ಮಾಡಬೇಕಾಗಿದೆಯೇ ಹೊರತು ಆ ಗುರಿಗೆ ಅಡ್ಡಿಬರುವುದಾದರೆ ಆ ಕೆಲಸಕ್ಕೆ ಕೈಹಾಕುವುದು ಅಷ್ಟು ಸೂಕ್ತವಾದ ಮಾರ್ಗವಲ್ಲವೆಂದು ಮಾತ್ರ ನಾನು ಹೇಳಬಯಸುತ್ತೇನೆ.

ಮುಂದೆ ವಿದ್ಯಾಭ್ಯಾಸದ ಸುಧಾರಣೆ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದಾರೆ. ವಿದ್ಯಾಭ್ಯಾಸದ ಸುಧಾರಣೆ ವಿಷಯದಲ್ಲಿ ಯಾವುದೇ ಕಾಲದಲ್ಲಿ ಸುಧಾರಣೆಗಳು ಬರಲಿ ಅವು ಪರಿಪೂರ್ಣವಾಗಿರುತ್ತವೆ ಎಂದಾಗಲಿ ಅವು ಯಾವ ಬದಲಾವಣೆಗಳನ್ನು ಮಾಡುವುದಕ್ಕೂ ಅವಕಾಶವಿಲ್ಲದೆ ಇರುವಷ್ಟು ಬಹಳ ಪವಿತ್ರವಾಗಿರುತ್ತವೆಂದು ಹೇಳುವುದನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ. ದೇಶ ಮತ್ತು ಕಾಲದ ಪರಿಸ್ಥಿತಿಗೆ ಅನುಗುಣವಾಗಿ ಸುಧಾರಣೆಗಳನ್ನು ಯಾವ ಸರ್ಕಾರವೇ ಆಗಲಿ ಜನತೆಯೇ ಆಗಲಿ ಜಾರಿಗೆ ತರುವುದಕ್ಕೆ ಇಷ್ಟಪಡುತ್ತದೆ. ಈ ಸಂದರ್ಭದಲ್ಲಿ ದೇಶದ ಜನಸಾಮಾನ್ಯರ ಜೀವನಸ್ಥಿತಿಗೆ ಹೊಂದಿಕೊಂಡು ಹೋಗುವ ಹಾಗೆ ಸುಧಾರಣೆಗಳನ್ನು ಅಳವಡಿಸಿದ್ದಾರೆಂದು ನಾವು ಹೇಳಬಹುದು. ಸಾಮಾನ್ಯವಾಗಿ ಹಳ್ಳಿಗಳ ಕಡೆಯಲ್ಲೂ ಓದುವ ಮಕ್ಕಳು ಶೇಕಡ 50 ರಷ್ಟು ಪ್ರಾಥಮಿಕ ಶಿಕ್ಷಣ ಆದ ಮೇಲೆ ಅವರ ವೃತ್ತಿಯಲ್ಲಿ ನೆಲೆಸುವವರಾಗಿದ್ದಾರೆ. ಸಾಮಾನ್ಯವಾಗಿ 8 ವರ್ಷ ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿದ ಮೇಲೆ ಅವರು ನಡೆಸಿಕೊಂಡು ಹೋಗುತ್ತಾ ಇರತಕ್ಕಂಥ ಕಸಬುಗಳನ್ನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕೆ ಈಗಿನ ಪರಿಸ್ಥಿತಿಯಲ್ಲಿ ಅವರಿಗೆ ಯಾವ ವಿಧವಾದ ಸಹಾಯವೂ ದೊರಕುತ್ತಿಲ್ಲ. ಈಗ ಇರತಕ್ಕಂಥ ವಿದ್ಯಾಭ್ಯಾಸದ ಕ್ರಮದಲ್ಲಿ ವಿದ್ಯಾರ್ಥಿ ಮಾಡತಕ್ಕಂಥ ಕಸಬಿಗೂ ಅವನಿಗೆ ಹೇಳಿಕೊಡತಕ್ಕಂಥ ಪಾಠ ಪ್ರವಚನಗಳಿಗೂ ಕೂಡ ಯಾವ ಸಂಬಂಧವೂ ಇಲ್ಲದಹಾಗೆ ಆಗಿವೆ. ಹಳ್ಳಿಗಾಡಿನಲ್ಲಿ ನೆಲಸತಕ್ಕಂಥ ಮಕ್ಕಳು ಪಶುವೈದ್ಯದಲ್ಲಾಗಲಿ ವ್ಯವಸಾಯದಲ್ಲಾಗಲಿ, ಮರಗೆಲಸ, ಕಬ್ಬಿಣದ ಕೆಲಸ, ಮುಂತಾದ ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಅನುಭವಪಡೆಯಬೇಕಾದರೆ ಅವರ ಪ್ರಾಥಮಿಕ ವಿದ್ಯಾಭ್ಯಾಸವನ್ನು ನಿಲ್ಲಿಸಿದ ಮೇಲೆಯೇ ಆ ರೀತಿಯಾದ ಅನುಭವಪಡೆದು ತಮ್ಮ ಜೀವನವನ್ನು ನಡೆಸಿಕೊಂಡು ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಅವನು ಓದತಕ್ಕಂಥ ಎಂಟು ವರ್ಷದ ಅವಧಿಯಲ್ಲಿಯೇ ಆತನ ಜೀವನಕ್ಕೆ ಸಹಾಯಕವಾದಂಥ ಈ ಸಣ್ಣ ಸಣ್ಣ ಕೈಗಾರಿಕೆಗಳಲ್ಲಿ ಮತ್ತು ಇತರ ವಿಚಾರಗಳಲ್ಲಿ ಸ್ವಲ್ಪಮಟ್ಟಿಗಾದರೂ ಮಾಹಿತಿ ಬರುವಹಾಗೆ ಏರ್ಪಾಡು ಮಾಡಿದರೆ ಅದರಿಂದ ಅವನಿಗೆ ಅನುಕೂಲವಾಗುತ್ತದೆ.

ಅವನು ಎಂಟು ವರ್ಷದ ಅವಧಿಯನ್ನು ಉಪಯುಕ್ತವಾಗಿ ಕಳೆದ ಹಾಗಾಗುತ್ತದೆ. ಅವನು ಮಾಡಿದ ವೆಚ್ಚ ಸಾರ್ಥಕವಾಗುತ್ತದೆ. ಈ ದೃಷ್ಟಿಯಿಂದ ನಾವು ನೋಡುವುದಾದರೆ, ಈ ಹೊಸ ಸುಧಾರಣೆಗಳಲ್ಲಿ ನಿರೂಪಿತವಾಗಿರತಕ್ಕ ಅಂಶಗಳು ಅವನಿಗೆ ಬೇಕಾದ ವೃತ್ತಿ ಶಿಕ್ಷಣವನ್ನು ಸ್ವಲ್ಪಮಟ್ಟಿಗೆ ಕೊಟ್ಟು, ಅವನು ಕಲಿತಂಥ ವಿದ್ಯೆ ಸಾರ್ಥಕವಾಗುವುದಕ್ಕೆ ಸಹಾಯಕವಾಗಿವೆಯೆಂದು ಹೇಳಬಹುದು.

ಇನ್ನು, ಈ ಸುಧಾರಣೆಯಲ್ಲಿ ಅಡಕವಾಗಿರುವ ಪ್ರಾಮುಖ್ಯವಾದ ಅಂಶವೆಂದರೆ, ಮಹಾತ್ಮಾಗಾಂಧಿಯವರು, ವಿದ್ಯಾಭ್ಯಾಸವು ಮುಂದೆ ಸ್ವತಂತ್ರ ಭಾರತದಲ್ಲಿ ಯಾವರೀತಿಯಿರಬೇಕೆಂದು ಹೇಳಿದ್ದನ್ನು ಒಳಗೊಂಡಿರುವುದು. ಯಾವನೊಬ್ಬ ಮನುಷ್ಯನೂ ಈ ಪ್ರಪಂಚದಲ್ಲಿ ಶೋಷಣರಹಿತವಾದ ಜೀವನವನ್ನು ನಡೆಸ

ಬೇಕಾದರೆ, ತಾನು ಕಷ್ಟಪಟ್ಟು ಕೆಲಸ ಮಾಡುವವನಾಗಿರಬೇಕು ; ತನ್ನ ಜೀವನಕ್ಕೆ ಸ್ವಲ್ಪವಾಟ್ಟಿಗಾದರೂ ಸಂಪಾದನೆ ಮಾಡಿಕೊಳ್ಳುವ ಶಕ್ತಿ ಪಡೆದವನಾಗಿರಬೇಕು ; ಇತರರ ದುಡಿಮೆಯಿಂದ ಜೀವನ ನಡೆಸಲು ಪ್ರಯತ್ನಮಾಡದೆ, ತನ್ನ ಜೀವನಕ್ಕೆ, ತನ್ನ ಸಂಸಾರದ ಜೀವನಕ್ಕೆ ಸಂಪಾದನೆಮಾಡಿಕೊಳ್ಳುವ ಶಕ್ತಿ ಹೊಂದಿದವನಾಗಿರಬೇಕು ; ಇದಕ್ಕೆ ಬೇಕಾದ ಸಲಕರಣೆ, ಸಿದ್ಧತೆಗಳು ಅವನಲ್ಲಿರಬೇಕೆಂಬುದು ಮುಖ್ಯವಾದ ವಿಷಯ.

ಈ ದೃಷ್ಟಿಯಿಂದ ನೋಡುವುದಾದರೆ, ವಿದ್ಯಾರ್ಥಿಗಳು ಓದತಕ್ಕ ಕಾಲದಲ್ಲೇ ಕಸಬುಗಳನ್ನು ಕಲಿತು, ಮುಂದೆ ಇತರರಮೇಲೆ ಅವಲಂಬಿಸದೆ ಸ್ವತಂತ್ರ ಜೀವನ ನಡೆಸುವುದಕ್ಕೆ ಅವಕಾಶ ಕಲ್ಪಿಸಿಕೊಡುವುದು ಬಹಳ ಅಗತ್ಯ. ಇದಕ್ಕಾಗಿ ಒಂದು ಸಮಗ್ರವಾದ ವ್ಯವಸ್ಥೆಯನ್ನು ಜಾರಿಗೆ ತರಬೇಕಾದರೆ ಬಹಳಕಾಲ ಹಿಡಿಯುತ್ತದೆ. ಈ ಅಂಶವನ್ನೂ ಕೂಡ ಈ ಭಾಷಣದಲ್ಲಿ ತೋರಿಸಿದ್ದಾರೆ. ಇದಕ್ಕೆ ಸುಮಾರು ಹತ್ತು ವರುಷಗಳು ಬೇಕಾಗುವುವೆಂದು ನಾನು ಕೇಳಿ ತಿಳಿದಿದ್ದೇನೆ. ರಷ್ಯಾದೇಶದಲ್ಲಿ ಕ್ರಾಂತಿಯಾದಮೇಲೆ ಹಿಂದಿದ್ದ ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಿ, ಹೊಸ ಪದ್ಧತಿಯನ್ನು ಜಾರಿಗೆತರುವ ಹತ್ತುವರುಷಗಳ ಕಾಲದಲ್ಲಿ ಬಹಳ ಗೊಂದಲವಾಯಿತೆಂದು ಕೇಳಿದ್ದೇನೆ. ಹಾಗೆ ಗೊಂದಲಕ್ಕೆ ಅವಕಾಶವಿಲ್ಲದೆ ಇರತಕ್ಕ ಪರಿಸ್ಥಿತಿಗೆ ಹೊಸದಾಗಿ ತರತಕ್ಕದ್ದನ್ನು ಸಮನ್ವಯಗೊಳಿಸಿ ಅದರಮೇಲೆ ಏನೇನು ಬದಲಾವಣೆಗಳನ್ನು ಮಾಡಬೇಕೋ ಅದನ್ನು ಮಾಡುವಂಥ ಒಂದು ವ್ಯವಸ್ಥೆ ಈಗ ಏರ್ಪಟ್ಟಿದೆಯೆಂದು ಹೇಳಬಹುದು. ಇರತಕ್ಕ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದುಹಾಕಿ, ಮಧ್ಯವರ್ತಿ ಕಾಲದಲ್ಲಿ ಗೊಂದಲಕ್ಕೆ ಅವಕಾಶವಿಲ್ಲದ ಹಾಗೆ ಮಾಡಬೇಕಾದುದರ ಅವಶ್ಯಕತೆಯನ್ನು ಒತ್ತಿ ಹೇಳಬೇಕಾಗಿಲ್ಲ. ಈ ದೃಷ್ಟಿಯಿಂದ ನೋಡಿದರೆ ಈಗಿರತಕ್ಕ ನಾಲ್ಕುವರ್ಷದ ಪ್ರೈಮರಿ ವಿದ್ಯಾಭ್ಯಾಸ ಮತ್ತು ನಾಲ್ಕುವರ್ಷದ ಮಾಧ್ಯಮಿಕ ವಿದ್ಯಾಭ್ಯಾಸ—ಇವೆರಡನ್ನೂ ಒಂದುಗೂಡಿಸಿ ಎಂಟು ವರ್ಷದ ಪ್ರೈಮರಿ ವಿದ್ಯಾಭ್ಯಾಸವೆಂದು ಗೊತ್ತುಮಾಡಿರುವುದು ಸೂಕ್ತವಾಗಿದೆ. ಈ ರೀತಿಯಾಗಿ ವಿದ್ಯಾಭ್ಯಾಸ ಕ್ರಮವನ್ನು, ಜನಜೀವನ ಸ್ಥಿತಿಗೆ ಹೊಂದಿಕೊಂಡು ಹೋಗುವಹಾಗೆ, ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣ ಕೊಡುವಹಾಗೆ, ಅವನಿಗೆ ತಾನು ಮಾಡತಕ್ಕ ಕೆಲಸಕ್ಕೆ—ಅದು ಯಾವುದೇ ಕೆಲಸವಾಗಲಿ—ಅದಕ್ಕೆ ಪ್ರಾಮುಖ್ಯತೆ ಕೊಡುವ (dignity of labour) ಮನನ್ನುಂಟುಮಾಡುವಹಾಗೆ ಮಾಡುವುದಕ್ಕೆ ಈ ಸುಧಾರಣೆಗಳು ಸಹಾಯಕವಾಗಿವೆಯೆಂದು ಧಾರಾಳವಾಗಿ ಹೇಳಬಹುದು. ಈ ಅಂಶವನ್ನೂ ಈ ಭಾಷಣದಲ್ಲಿ ತಿಳಿಸಿದ್ದಾರೆ. ಅಲ್ಲದೆ, ನಾನು ಪ್ರಾರಂಭದಲ್ಲೇ ಹೇಳಿದ ಹಾಗೆ, ಈ ವಿದ್ಯಾಭ್ಯಾಸ ಸುಧಾರಣೆಗಳು ಪರಿಪೂರ್ಣವಾಗಿವೆಯೆಂದು ಹೇಳುವುದಕ್ಕೆ ಸರ್ಕಾರದವರಿಗೂ ಕೂಡ ಅಷ್ಟು ಧೈರ್ಯವಾಗಿಲ್ಲವೆಂಬ ಅಂಶವನ್ನು ಇಲ್ಲಿ ವ್ಯಕ್ತಪಡಿಸಿದ್ದಾರೆ. ಏಕೆಂದರೆ, ಅನೇಕ ಲೋಪದೋಷಗಳು ಕಂಡುಬರಬಹುದು. ಜನಜೀವನಸ್ಥಿತಿಗೆ ಹೊಂದಿಸಿಕೊಂಡು ಹೋಗುವುದರಲ್ಲಿ ಅಲ್ಲಲ್ಲಿ ತೊಂದರೆಗಳುಂಟಾಗಬಹುದು. ಅದಕ್ಕೆ ಸರಿಯಾಗಿ ಹೊಂದಿಸಿಕೊಂಡು ಹೋಗುವುದಕ್ಕೆ ಸಾಕಾದಷ್ಟು ಅವಕಾಶ, ಎಚ್ಚರಿಕೆಗಳನ್ನಿಟ್ಟುಕೊಳ್ಳುವುದಕ್ಕೆ ಇದರಲ್ಲಿ ಅವಕಾಶ ಮಾಡಿದೆ. ಇದು ಬಹಳ ಸಾಧುವಾಗಿದೆಯೆಂದು ಕಾಣುತ್ತದೆ.

ಇನ್ನು, ಕೋಲಾರದ ಚಿನ್ನದಗಣಿಗಳ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಮುಂಚೆ, ಆ ರಿಪೋರ್ಟನ್ನು ನೋಡಿ ಮಾತನಾಡುವುದು ಸೂಕ್ತವೆಂದು ಕಾಣುತ್ತದೆ. ಅದಿಲ್ಲದೆ ಈಗೇನು ಮಾತನಾಡ ಹೊರಟರೂ ಅದು, ಎದುರುಪಕ್ಷದ ನಾಯಕರು ಹೇಳಿದಹಾಗೆ, ಕೇವಲ ಸ್ಥೂಲವಾಗಿ ಮಾತ್ರ ಆಗಿರುತ್ತದೆ, ಅಷ್ಟೇ.

Sri H. SIDDAVEERAPPA (Minister for Home and Industries).—Government have allotted a day for discussion of that Report.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಸಂಬಂಧದಲ್ಲಿ ಏರ್ಪಟ್ಟಿದ್ದ ಕಮಿಟಿಗೆ ಇತ್ತಿದ್ದ Terms of referenceನಲ್ಲಿ, ಹಿಂದೆ ಆಗಿದ್ದ ಒಪ್ಪಂದ ಯಾವರೀತಿ ನಡೆಯುತ್ತಿದೆ, ಸರ್ಕಾರಕ್ಕೆ ವರಮಾನ ಸರಿಯಾಗಿ ಬರುತ್ತಿದೆಯೇ, ಎಂಬುದನ್ನೆಲ್ಲಾ ಪರಿಶೀಲಿಸಬೇಕೆಂದು ಹೇಳಿದ್ದರು. ಕಳೆದವರ್ಷ ಸಭಾನಾಯಕರು ತಮ್ಮ ಬಡ್ಜೆಟ್ ಭಾಷಣದಲ್ಲಿ ನಮೂದಿಸಿದ್ದಹಾಗೆ, 1940ನೆಯ ಇಸವಿಯ ಒಪ್ಪಂದದವಾದಮೇಲೆ, ಸರ್ಕಾರಕ್ಕೆ ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಆದಾಯ ಬರುವಂತಾಗಿತ್ತು ; 1949ನೆಯ ಇಸವಿಯಲ್ಲಿ ಒಪ್ಪಂದ ರದ್ದುಮಾಡಿದಾಗಲೂ ಕೂಡ ವರ್ಷಕ್ಕೆ ಸುಮಾರು ಇಪ್ಪತ್ತು ಲಕ್ಷ ರೂಪಾಯಿಗಳ net surplus ಆದಾಯ ಬರಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಈ ಎರಡು ವರ್ಷಗಳಿಂದ ನೋಡಿದ್ದರಲ್ಲಿ ಒಂದು ಕಾಸುಕೂಡ ಅಲ್ಲಿಂದ ಬರುತ್ತಿಲ್ಲ. ಸಾಮಾನ್ಯವಾಗಿ ಮೊದಲಿನಿಂದ ಬರುತ್ತಿದ್ದ ರಾಜಾದಾಯವನ್ನು ಬಿಟ್ಟರೆ ಇನ್ನಾವ ಉತ್ಪತ್ತಿಯೂ ಅಲ್ಲಿಂದ ಬರುತ್ತಿಲ್ಲ. ಈ ಅಂಶವನ್ನೆಲ್ಲಾ ಸಮಿತಿಯವರು ಚೆನ್ನಾಗಿ ಪರಿಶೀಲಿಸಿದ್ದಾರೆಂದು ಧಾರಾಳವಾಗಿ ಹೇಳಬಹುದು. ಅಲ್ಲದೆ, ಅಲ್ಲಲ್ಲೆ ವರ್ತಮಾನಗಳು ಕೂಡ ಕೇಳಿಬರುತ್ತಿವೆ, ಕಂಪೆನಿಯ ಮಾಲೀಕರೂ ಕೂಡ ಈ ಒಪ್ಪಂದವನ್ನು ರದ್ದು ಮಾಡುವುದಕ್ಕೆ ಸಿದ್ಧವಾಗಿದ್ದಾರೆ ಎಂದು. ಇದನ್ನು ಗಮನಿಸಿದರೆ, ಈ ಒಪ್ಪಂದ ಎಷ್ಟರಮಟ್ಟಿಗೆ ನಡೆಯುತ್ತಿದೆಯೆಂದು ವೇದ್ಯವಾಗುತ್ತದೆ. ಕಂಪೆನಿಯವರಿಗೇ ಆಗಲಿ, ಅದಕ್ಕಿಂತ ಹೆಚ್ಚಾಗಿ ಸರ್ಕಾರಕ್ಕೇ ಆಗಲಿ ಇದರಿಂದ ಪ್ರಯೋಜನವಾಗಿಲ್ಲವೆಂದು ಧಾರಾಳವಾಗಿ ಹೇಳಬಹುದು. ಕಂಪೆನಿಯವರಿಗೂ ಈ ಒಪ್ಪಂದದಿಂದ ಕೆಲವು ತೊಡಕುಗಳು ಉಂಟಾಗಿವೆಯೆಂದು ತೋರುತ್ತದೆ. ಆದ್ದರಿಂದ ಉಭಯತ್ರರ ದೃಷ್ಟಿಯಿಂದಲೂ ಈ ಒಪ್ಪಂದವನ್ನು ರದ್ದುಮಾಡಿ ಮುಂದೆ ಯಾವರೀತಿ ವ್ಯವಸ್ಥೆ ಮಾಡಬೇಕು ಸರ್ಕಾರಕ್ಕೆ ಹೆಚ್ಚಿಗೆ ರಾಜಾದಾಯ ಬರುವಂತೆ ಮಾಡಬೇಕಾದರೆ ಏನು ಮಾಡಬೇಕು ಎಂಬುದನ್ನು ಚರ್ಚೆ ಮಾಡುವುದಕ್ಕೆ ಒಂದು ದಿವಸ ಅವಕಾಶ ಮಾಡಿಕೊಟ್ಟಿದೆ. ಆದ್ದರಿಂದ ಅದನ್ನೀಗ ಹೆಚ್ಚು ಪ್ರಸ್ತಾಪಿಸಲಿಚ್ಛಿಸುವುದಿಲ್ಲ.

ಇನ್ನು ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ತಾಲ್ಲೂಕು ಬೋರ್ಡ್‌ಗಳ ವಿಷಯವನ್ನು ಈ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಸ್ವಾಮಿ, ಈ ಡಿಸ್ಟ್ರಿಕ್ಟ್ ಬೋರ್ಡ್‌ಮತ್ತು ತಾಲ್ಲೂಕು ಬೋರ್ಡ್‌ಗಳ ರಚನೆಯ ವಿಷಯ ಬಹಳ ಕಾಲದಿಂದಲೂ ತೀರ್ಮಾನವಾಗದೆ ಹಾಗೆಯೇ ಉಳಿದಿದೆ. ಈಗಲಾದರೋ, ಶ್ರೀವಾರ್. ಚಂದ್ರಶೇಖರಯ್ಯನವರ ಸಮಿತಿಯ ವರದಿಯ ಆಧಾರದ ಮೇಲೆ ಡಿಸ್ಟ್ರಿಕ್ಟ್ ಬೋರ್ಡುಗಳು ನೇರವಾದ ಚುನಾವಣೆಯಿಂದ ರಚನೆಯಾಗಬೇಕೆಂದು ಹೇಳಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ವೆಂಕಟಪ್ಪ ಕಮಿಟಿಯವರೂ ಅದೇ ತಾನೇ ಹೇಳಿದ್ದು !

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಆಮೇಲೆ, ತಾಲ್ಲೂಕು ಬೋರ್ಡ್‌ಗಳನ್ನು ಸರ್ಕಾರದವರ ನಾಮಕರಣದಿಂದ ಭರ್ತಿ ಮಾಡಬೇಕೆಂದು ಒಂದು ಅಭಿಪ್ರಾಯವಿದೆ. ಈ ಬಿಲ್ಲನ್ನು ನಾವು ಪ್ರಸ್ತಾಪ ಮಾಡುವಾಗ, ಈ ಅಂಶವನ್ನು ತೆಗೆದುಕೊಂಡು ತಾಲ್ಲೂಕು ಬೋರ್ಡ್‌ಗಳನ್ನು ನೇರವಾದ ಚುನಾವಣೆಯ ಮುಖಾಂತರ ರಚಿಸಬೇಕೇ ಅಥವಾ ನಾಮಕರಣದ ಮುಖಾಂತರ ರಚಿಸಬೇಕೇ ಎಂಬುದನ್ನು ಇತ್ಯರ್ಥ ಮಾಡಬಹುದು.

ಶ್ರೀ ಜೆ. ಮಹಮ್ಮದ್ ಇಮಾಂ.—ಪಿ.ಎಸ್.ಪಿ. ಸರ್ಕಾರ ಬಂದರೇನೇ ಈ ಸಮಸ್ಯೆ ಬಗೆ ಹರಿಯುವುದು!

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಸಾಮಾನ್ಯವಾಗಿ ಎಲ್ಲಾ ಕಡೆಯೂ ಪ್ರಾಂತಗಳ ಮಟ್ಟದ ಚುನಾವಣೆ, ಡಿಸ್ಟ್ರಿಕ್ಟ್ ಮಟ್ಟದ ಚುನಾವಣೆ, ಈ ಅಸೆಂಬ್ಲಿ ಚುನಾವಣೆ ನೇರವಾಗಿ ನಡೆಯುತ್ತವೆ. ಅದೇರೀತಿ ತಾಲ್ಲೂಕ್ ಲೆವಲ್‌ನಲ್ಲಿಯೂ ನೇರವಾಗಿ ಚುನಾವಣೆ ನಡೆಯಬೇಕೆಂದರೆ ಎಷ್ಟು ಗೊಂದಲವಾಗುತ್ತದೆಂಬುದು ಪಂಚಾಯಿತಿ ಮತ್ತು ಇತರ ಚುನಾವಣೆಗಳಲ್ಲಿ ಭಾಗ ವಹಿಸಿದ ಜನರಿಗೇ ಗೊತ್ತು. ತಾಲ್ಲೂಕು ಚುನಾವಣೆಗಳನ್ನು ನಡೆಸಲು ಹೋಬಳಿವಾರು ಕ್ಷೇತ್ರ ವಿಭಜನೆ ಮಾಡುವುದರ ಮುಖಾಂತರವೇ ಆಗಲಿ ಮಲ್ಟಿ-ಮೆಂಬರು ಕಾನ್‌ಸ್ಟಿಟ್ಯುಯನ್ಸಿ ಏರ್ಪಡಿಸುವ ಮುಖಾಂತರವೇ ಆಗಲಿ, ಏನೇ ಮಾಡಿದರೂ ಅನೇಕ ವಿರಸಗಳು ಉಂಟಾಗುವುದಕ್ಕೆ ಅವಕಾಶವಿತ್ತು.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—Indirect ಚುನಾವಣೆಯಿಂದ ಇದು ಹೋಗುತ್ತದೆಯೇ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ನೇರವಾದ ಚುನಾವಣೆಯಿಂದ ಇಂಥ ವಿರಸ ಹೆಚ್ಚುವುದಕ್ಕೆ ಅವಕಾಶವಿದೆಯೆಂದು ಹೇಳುತ್ತೇನೆ. ಪಂಚವಾರ್ಷಿಕ ಯೋಜನೆಯನ್ನೇ ಆಗಲಿ, ಇತರ ಯಾವುದೇ ಗ್ರಾಮಾಭಿವೃದ್ಧಿ ಕಾರ್ಯಗಳನ್ನೇ ಆಗಲಿ ತಾಲ್ಲೂಕು ಮಟ್ಟದಲ್ಲಿ ಯಾವರೀತಿ ನಡೆಸಬಹುದು ಎಂಬುದು ಗೊತ್ತೇಇದೆ. ಸರ್ಕಾರದವರು ಈ ಮಾನ್ಯ ಸಭೆಯ ಸದಸ್ಯರು ಒಪ್ಪಿರತಕ್ಕ ಒಂದು ತತ್ವದ ಆಧಾರದಮೇಲೆ ಈ ಕೆಲಸ ಕಾರ್ಯಗಳು ನಡೆಯುತ್ತಿವೆಯೇ ಎಂಬುದನ್ನು ಸೂಕ್ಷ್ಮವಾಗಿ ನೋಡುವುದಕ್ಕೆ ಅವಕಾಶವಿದೆ. ನೇರವಾಗಿ ಚುನಾವಣೆಯಲ್ಲಿ ಭಾಗವಹಿಸಿ ಬಂದ ಜನರಿಗಿಂತ ಈ ರೀತಿ ಬಂದ ಸದಸ್ಯರು ಜನರೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡು ಕೆಲಸ ಕಾರ್ಯಗಳನ್ನು ನಡೆಸುವುದಕ್ಕೆ ಅವಕಾಶವಿದೆ. ಅಷ್ಟೇ ಅಲ್ಲ, ಗ್ರಾಮಾಭಿವೃದ್ಧಿ ಕೆಲಸಗಳು ಹೆಚ್ಚಾಗಿ ಜನ ಸಾಮಾನ್ಯರ ಬೆಂಬಲದ ಮೇಲೆ ನಡೆಯಬೇಕಾದ ಕೆಲಸ. ಅವರ ಸಹಕಾರ ವಿಲ್ಲದಿದ್ದರೆ ಸರ್ಕಾರದವರು ಮಂಜೂರು ಮಾಡಿರತಕ್ಕ ಕೆಲಸ ಕಾರ್ಯಗಳನ್ನೇನೋ ನಡೆಸುವುದಕ್ಕೆ ಸಾಧ್ಯವಾಗಬಹುದಾದರೂ, ಅವರ ಸಹಕಾರದಿಂದ ಅದಕ್ಕೆ ಒಂದಕ್ಕೆ ನಾಲ್ಕರಷ್ಟು ಮಾಡುವುದಕ್ಕೆ ಅನುಕೂಲವಿರುವಾಗ ಇಂಥ ಯಾವವಿಧವಾದ ವಿರಸಗಳಿಗೂ ಅವಕಾಶವಿಲ್ಲದ ಹಾಗೆ ಮಾಡುವುದು ಸೂಕ್ತ. ಇದರಿಂದ ತಾಲ್ಲೂಕು ಮಟ್ಟದಲ್ಲಿ ಹೆಚ್ಚಿಗೆ ಕೆಲಸ ಕಾರ್ಯಗಳು ನಡೆಯುವುದಕ್ಕೆ ಅವಕಾಶವಾಗುತ್ತದೆಂದು ನಾನು ಭಾವಿಸುತ್ತೇನೆ.

Sri Mulka GOVINDA REDDY (Chitaldrug).—How are they different from Mariyappa Committee?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಇದರ ವಿಚಾರದಲ್ಲಿ ಕೆಲವರೇನೋ ಭಿನ್ನಾಭಿಪ್ರಾಯವನ್ನು ಸೂಚಿಸಬಹುದು. ರಾಜಕೀಯ ಪಕ್ಷಗಳನ್ನು ಬೆಳಸಿಕೊಂಡು ಬರುವುದಕ್ಕೆ ಈ ಕಮಿಟಿಗಳು ಸಹಾಯಕವಾಗಬಹುದೆಂದು ಹೇಳಬಹುದು. ನಾವೀಗ ಪ್ರಜಾಸರ್ಕಾರದಲ್ಲಿದ್ದೇವೆ. ಬಹುಮತ ಬೆಂಬಲ ಪಡೆದಿರತಕ್ಕ ಸರ್ಕಾರ ಯಾವ ಕಾರ್ಯಕ್ರಮವನ್ನು ಹಾಕಿಕೊಂಡು ದೇಶದಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕೋ ಅವುಗಳನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರಬೇಕಾದರೆ, ಈ ಕಮಿಟಿಗಳನ್ನು ಬಿಟ್ಟರೆ ಇನ್ನಾವ ರೀತಿಯಲ್ಲೂ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಹುದು. ದೇಶದಲ್ಲಿ ಇಂಥ ಕಮಿಟಿಗಳು ಏರ್ಪಟ್ಟಲ್ಲಿ ಅವುಗಳು ಚೆನ್ನಾಗಿ ನಡೆದು ಅಭಿವೃದ್ಧಿ ಕಾರ್ಯಗಳು ಚೆನ್ನಾಗಿ ನಡೆಯಲು ಅನುಕೂಲವಾಗುತ್ತದೆಯೆಂದು ಧಾರಾಳವಾಗಿ ಹೇಳಬಹುದು.

ಆ ಮೇಲೆ, ಪಂಚವಾರ್ಷಿಕ ಯೋಜನೆಯ ವಿಷಯದಲ್ಲಿ ಇಲ್ಲಿ ಶ್ರೀಮನ್ಮಹಾರಾಜರವರು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿದ್ದಂಥ ಕಾರ್ಯಕ್ರಮ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆಯೆಂಬುದನ್ನು ತಾವೇ ನೋಡಬಹುದು. ಈ ವಿಷಯವನ್ನು ನಾವು ಪ್ರಸ್ತಾಪಮಾಡುವಾಗ ಈ ಯೋಜನೆಯ ಪ್ರಕಾರ ಎಷ್ಟು ಕೆಲಸ ನಡೆದಿದೆ, ಅದು ಇನ್ನೂ ಉಳಿದಿರುವ ಅವಧಿಯಲ್ಲಿ ಯಶಸ್ವಿಯಾಗಿ ಪೂರೈಸಬಲ್ಲದೇ ಎಂಬುದನ್ನು ನಾವು ಗಮನದಲ್ಲಿಡಬೇಕು. ಮೈಸೂರು ದೇಶಕ್ಕೆ ಸಂಬಂಧಪಟ್ಟ ಹಾಗೆ ಮೊಟ್ಟಮೊದಲು 36 ಕೋಟಿ ರೂಪಾಯಿಗಳ ಒಂದು ಯೋಜನೆ ಹಾಕಿತ್ತು. ಅದಾದಮೇಲೆ ಭದ್ರಾ ಜಲಾಶಯ, ನುಗು ಜಲಾಶಯ ಕಾಮಗಾರಿಗಳಿಗಾಗಿ ಮತ್ತು ಪೋರ್ಸ್‌ಲೈನ್ ಫ್ಯಾಕ್ಟರಿ ಅಭಿವೃದ್ಧಿಗಾಗಿ ಎಂದು ಮುಂತಾಗಿ ಕೆಲ ಕೆಲವು ಪ್ರಾಮುಖ್ಯವಾದ ಯೋಜನೆಗಳಿಗೆ ಅದು 47 ಕೋಟಿ 99 ಲಕ್ಷ ರೂಪಾಯಿಗಳಿಗೆ ಪರಿವರ್ತನೆಯಾಯಿತು. ಈಗ ಕೆಲಸಕಾರ್ಯಗಳನ್ನು ಮಾಡಿರುವುದರಲ್ಲಿ ಪ್ರಾಮುಖ್ಯವಾದ ಕೆಲವು ಅಂಶಗಳು ಎಂದರೆ, ವ್ಯವಸಾಯದ ಅಭಿವೃದ್ಧಿ. ಈ ಪಂಚವಾರ್ಷಿಕ ಯೋಜನೆಯ ಗುರಿಯಾದರೂ ವ್ಯವಸಾಯ ಮತ್ತು ನೀರಾವರೀ ಕಾಮಗಾರಿಗಳ ಅಭಿವೃದ್ಧಿ, ವಿದ್ಯುಚ್ಛಕ್ತಿಯ ಸರಬರಾಯಿಯನ್ನು ಹೆಚ್ಚು ಮಾಡುವುದು, ಕೆರೆಕಟ್ಟೆಗಳನ್ನು ಸರಿಪಡಿಸುವುದು—ಎಂಬವೇ ಎಂಬುದನ್ನು ನಾವು ಗಮನದಲ್ಲಿಡಬೇಕು. ವ್ಯವಸಾಯದ ಅಭಿವೃದ್ಧಿಗಾಗಿ ಸುಮಾರು 4 ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಅಳವಡಿಸಲಾಗಿತ್ತು. ಈ ನಾಲ್ಕು ಕೋಟಿ ರೂಪಾಯಿಗಳಲ್ಲಿ ಮೊದಲನೆಯ ಮೂರು ವರ್ಷಕ್ಕೆ ಸುಮಾರು 2 ಕೋಟಿ 66 ಲಕ್ಷ ರೂಪಾಯಿಗಳು ಖರ್ಚಾಗಿವೆ. ಚಾಲ್ತಿ ಸಾಲಿನಲ್ಲಿ 68 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು.

1-30 P.M.

ವ್ಯವಸಾಯ ಕ್ಷೇತ್ರದಲ್ಲಿ ಇವರೆಗೆ ಮೂರು ಕೋಟಿ ಮುವತ್ತೈದು ಲಕ್ಷ ರೂಪಾಯಿಗಳು ಖರ್ಚಾದಂತಾಗುತ್ತದೆ. ಹೀಗೆ ಖರ್ಚಾಗಿರುವುದರ ಜೊತೆಗೆ ಮುಂದಿನ ವರ್ಷ ಸುಮಾರು 75 ಲಕ್ಷ ರೂಪಾಯಿಗಳನ್ನು ಒದಗಿಸಿದರೆ ಮಾತ್ರವೇ ಈ ಯೋಜನೆಯು ಪರಿಪೂರ್ಣವಾಗಿ ಕಾರ್ಯರೂಪಕ್ಕೆ ಬಂದಂತಾಗುತ್ತದೆ.

ಇನ್ನು ರೂರಲ್ ಡೆವಲಪ್‌ಮೆಂಟ್ ಬಾಬಿಗೋಸ್ಕರವಾಗಿ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ 54 ಲಕ್ಷದ 67 ಸಾವಿರ ರೂಪಾಯಿಗಳ ಅಂದಾಜಿತ್ತು. ಆ ಪೈಕಿ ಮೊದಲನೆಯ ಮೂರು ವರ್ಷಗಳಲ್ಲಿ 38 ಲಕ್ಷ ರೂಪಾಯಿಗಳು ಖರ್ಚಾಗಿವೆ. ಇನ್ನು 16 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಮುಂದಿನ ವರ್ಷದಲ್ಲಿ ಒದ

ಗಿಸಿದರೆ ಆಗ ಈ ಬಾಬನ್ನು ಸಂಪೂರ್ಣವಾಗಿ, ಕಾರ್ಯರೂಪಕ್ಕೆ ತಂದಹಾಗೆ ಆಗುತ್ತದೆ.

ನೀರಾವರಿ ಯೋಜನೆಗಳ ಪ್ರಕಾರ 11 ಕೋಟಿ 69 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಆದರೆ ಇಲ್ಲಿಯವರೆಗೆ ಖರ್ಚಾಗಿರುವುದು 6 ಕೋಟಿ 85 ಲಕ್ಷ ಮಾತ್ರ; ಇದರಲ್ಲಿ ಈ ವರ್ಷ ಒದಗಿಸಿರುವ ದುಡ್ಡು ಸಹ ಸೇರಿರುತ್ತದೆ. ಆದರೆ ನಾವು ಈ ಬಾಬಿಗೆ ಇನ್ನೂ 4 ಕೋಟಿ 83 ಲಕ್ಷ ರೂಪಾಯಿಗಳನ್ನು ಒದಗಿಸಬೇಕಾಗಿದೆ. ಹಾಗೆ ಈ ಮೊಬಲಗನ್ನು ಒದಗಿಸಿದರೆ ಮಾತ್ರವೇ ಈ ಕೆಲಸ ಪೂರ್ತಿಯಾಗಲು ಸಾಧ್ಯವಾಗುತ್ತದೆ. ಆದುದರಿಂದಲೇ, ಈ ಪಾಂಚವಾರ್ಷಿಕ ಯೋಜನೆಯ ಕೆಲಸ ಕಾರ್ಯಗಳು ಪರಿಪೂರ್ಣಗೊಳ್ಳಬೇಕಾಗಿದ್ದರೆ ಹಣವನ್ನು ಯಾವ ಯಾವ ರೀತಿಯಲ್ಲಿ ಒದಗಿಸಲು ಸಾಧ್ಯವಿದೆ ಎಂಬುದನ್ನು ನಾವೆಲ್ಲರೂ ಆಲೋಚನೆ ಮಾಡಬೇಕಾಗಿದೆ.

ಪವರ್ ಪ್ರಾಜೆಕ್ಟುಗಳ ಬಗ್ಗೆ ನಾವಿನ್ನೂ 13 ಕೋಟಿ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಇಲ್ಲಿಯವರೆಗೆ ಸುಮಾರು 9 ಕೋಟಿ ರೂಪಾಯಿಗಳವರೆಗೂ ಖರ್ಚಾಗಿದೆ. ಇನ್ನುಳಿದ 4 ಕೋಟಿ ರೂಪಾಯಿಗಳನ್ನು ಒದಗಿಸಿ ಇದನ್ನು ತೃಪ್ತಿಕರವಾದ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕಾಗಿದೆ. ಆದರೆ ಈ ಎಲ್ಲಾ ಯೋಜನೆಗಳೂ ಪರಿಪೂರ್ಣಗೊಳ್ಳಬೇಕಾಗಿದ್ದರೆ ಮುಂದಿನ ವರ್ಷಗಳಲ್ಲಿ ಇವುಗಳಿಗಾಗಿ ಎಷ್ಟು ದುಡ್ಡನ್ನು ಒದಗಿಸಬೇಕಾಗಿರುತ್ತದೆ, ಎಷ್ಟು ದುಡ್ಡನ್ನೊದಗಿಸಲು ಸಾಧ್ಯವಿದೆ ಎಂಬುದನ್ನೆಲ್ಲಾ ನಮ್ಮ ಸರ್ಕಾರದವರು ಮನಗಂಡಿದ್ದಾರೆ. ಹೀಗೆ ಸಾಧನೆ ಮಾಡಬೇಕಾಗಿರತಕ್ಕಂಥ ಎಷ್ಟು ಅಭಿವೃದ್ಧಿ ಕ್ಷೇತ್ರಗಳಿರುತ್ತವೆಯೋ ಅವುಗಳೆಲ್ಲವನ್ನೂ ಪರಿಪೂರ್ಣಗೊಳಿಸುವುದಕ್ಕೆ ಇವರಿಗೆ ಸಾಧ್ಯವಿದೆ. ನಮ್ಮ ನಿರೀಕ್ಷೆಯೂ ಸಹ ಹಾಗೇ ಇದೆ. ಅಂತೂ ಇಲ್ಲಿಯತನಕ ಸಾಗಿರತಕ್ಕಂಥ ಕೆಲಸಕಾರ್ಯಗಳನ್ನು ನೋಡಿದರೆ ಈ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡಿರತಕ್ಕಂಥ ಎಲ್ಲ ಕೆಲಸಗಳೂ (ನೀರಾವರಿ ಮತ್ತು ಪವರ್ ಪ್ರಾಜೆಕ್ಟು ಬಿಟ್ಟು) ಸಂಪೂರ್ಣವಾಗಿ ಈ ಅವಧಿಯಲ್ಲೇ ಜಯಪ್ರದವಾಗುತ್ತವೆಂದು ನಾವು ಧಾರಾಳವಾಗಿ ಹೇಳಬಹುದು. ಈ ಬಗ್ಗೆ ನಾನು ಒಂದೆರಡು ಮುಖ್ಯವಾದ ವಿಷಯಗಳನ್ನು ಸಭೆಯ ಗಮನಕ್ಕೆ ತರಲು ತಮ್ಮ ಅಪ್ಪಣೆ ಬೇಡುತ್ತೇನೆ.

ಈ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡಿರತಕ್ಕ 35 ಯೋಜನೆಗಳ ಪೈಕಿ 50 ಲಕ್ಷಕ್ಕೆ ಮೇಲ್ಪಟ್ಟು ಖರ್ಚಾಗುವ ನಾಲ್ಕು ಮೇಜರ್ ಇರಿಗೇಷನ್ ಬಾಬುಗಳಿರುತ್ತವೆ. ಇವುಗಳಿಗೆ 50 ಲಕ್ಷ ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ. ಈ ಯೋಜನೆಗಳಿಗೆಲ್ಲಾ ಆಗಲೇ ಅಂದಾಜಾಗಿರತಕ್ಕ ಪ್ರಕಾರ 7 ಕೋಟಿ 16 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ನಾಲ್ಕು ಮೇಜರ್ ಇರಿಗೇಷನ್ ಬಾಬುಗಳು ಯಾವವೆಂದರೆ, ಭದ್ರಾ, ನುಗು, ತುಂಗ ಅಣೆ ಮತ್ತು ಅಂಬ್ಲಿಗೊಳ.

ಭದ್ರಾ ಜಲಾಶಯದ ಯೋಜನೆಯ ಬಗ್ಗೆ ಒಟ್ಟು 17 ಕೋಟಿ 75 ಲಕ್ಷ ರೂಪಾಯಿಗಳ ಒಂದು ಅಂದಾಜ ತಯಾರಾಗಿತ್ತು. ಇದರಿಂದ 2 ಲಕ್ಷ 24 ಸಾವಿರದ 200 ಎಕರೆ ಜಮೀನು ವ್ಯವಸಾಯಕ್ಕೆ ಬರುತ್ತದೆ ಮತ್ತು 17,500 K. W. ವಿದ್ಯುಚ್ಛಕ್ತಿ ಉತ್ಪತ್ತಿಯಾಗುತ್ತದೆ. ಈ ಯೋಜನೆ ಪೂರ್ಣವಾಗಬೇಕಾಗಿದ್ದರೆ ಇನ್ನೂ ಹನ್ನೊಂದು ಕೋಟಿ ರೂಪಾಯಿಗಳು ಬೇಕಾಗುತ್ತದೆ.

ಈಗಿನ ಪಾಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಖರ್ಚಾಗಬಹುದಾದ ಮೊಬಲಗು 10 ಕೋಟಿ 86 ಲಕ್ಷ ರೂಪಾಯಿಗಳೆಂದು ಹೇಳಬಹುದು. ಇನ್ನು ಈ ಮೊದಲನೆಯ ಯೋಜನೆಯಲ್ಲಿ ಉಳಿದಿರುವ ಕೆಲಸಗಳನ್ನು ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡು ಇವುಗಳನ್ನೆಲ್ಲವನ್ನೂ ಪರಿಪೂರ್ಣಗೊಳಿಸಬೇಕಾಗಿದೆ. ಇದಕ್ಕಾಗಿ 11 ಕೋಟಿ 69 ಲಕ್ಷ ರೂಪಾಯಿಗಳನ್ನೊದಗಿಸಬೇಕಾಗಿದೆ. ಇಲ್ಲಿಯವರೆಗೆ ಇದರ ಬಗ್ಗೆ ಖರ್ಚಾಗಿರುವುದು 5 ಕೋಟಿ 86 ಲಕ್ಷ ಮಾತ್ರ. ಇದರಿಂದ 1956ನೆಯ ಇಸವಿ ಜೂನ್ ಹೊತ್ತಿಗೆ 20 ಸಾವಿರ ಎಕರೆ ಸಾಗುವಳಿಗೆ ಬರಬಹುದೆಂದು ತೋರುತ್ತದೆ.

ತುಂಗಾ ಅಣೆಕಟ್ಟಿನ ಕೆಲಸ ಎರಡನೆಯ ಮೇಜರ್ ನೀರಾವರಿ ಕಾಂಗಾರಿ. ಈಗಾಗಲೇ ಎಡಭಾಗದಲ್ಲಿ 25 ಮೈಲಿಗಳತನಕ ನಾಲೆ ಕೆಲಸ ನಡೆದಿದೆ. ಬಲಗಡೆ ನಾಲೆ 5 ಮೈಲಿಗಳವರೆಗೆ ಸಾಗಿದೆ. ಇಷ್ಟಕ್ಕೆ ಇಲ್ಲಿಯತನಕ ಒಂದು ಕೋಟಿ ಖರ್ಚಾಗಿದೆ. ಇದಕ್ಕೆ 2 ಕೋಟಿ 32 ಲಕ್ಷ ರೂಪಾಯಿಗಳ ಅಂದಾಜಾಗಿದೆ. ಹೀಗೆ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡ ಬಹುಭಾಗದ ಕೆಲಸ ಪೂರೈಸುತ್ತಾ ಬಂದಿದೆ. ಈಗಾಗಲೇ ಇದರಿಂದ 7 ಸಾವಿರ ಎಕರೆಗೆ ನೀರನ್ನು ಕೊಟ್ಟಿದ್ದಾರೆ. 55-56ನೇ ಸಾಲಿನ ಅಂತ್ಯದಲ್ಲಿ ಇನ್ನೂ 10,000 ಎಕರೆ ಜಮೀನು ಸಾಗುವಳಿಗೆ ಬರುವಂಥ ನಿರೀಕ್ಷಣೆಯಿದೆ.

ಇದರಂತೆಯೇ ಸರ್ಕಾರದವರು ಈ ನುಗು ಜಲಾಶಯದ ಕೆಲಸವನ್ನೂ ಸಹ ಬೇಗ ಪರಿಪೂರ್ಣಗೊಳಿಸುವ ನಿರೀಕ್ಷಣೆಯಿದೆ. ಇದಕ್ಕೆ 2 ಕೋಟಿ 43 ಲಕ್ಷ ರೂಪಾಯಿಗಳ ಅಂದಾಜಾಗಿದೆ. ಈಗ ಖರ್ಚಾಗಿರುವುದು ಒಂದು ಕೋಟಿ 56 ಲಕ್ಷ ಮಾತ್ರ. ಇದಕ್ಕೆ ಮುಂದಿನ ವರ್ಷ 50 ಲಕ್ಷ ರೂಪಾಯಿಗಳನ್ನೊದಗಿಸಿದರೆ ಈ ಕೆಲಸ ಪರಿಪೂರ್ಣವಾಗುತ್ತದೆ. ಈ ಕೆಲಸವನ್ನು ಜಾಗ್ರತೆ ಮುಗಿಸಲು ಇಂಡಿಯಾ ಸರ್ಕಾರದವರು 50 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದರ ಫಲವಾಗಿ 1955ನೆ ಜೂನ್ ತಿಂಗಳಲ್ಲೇ 4 ಸಾವಿರ ಎಕರೆ ಜಮೀನನ್ನು ಸಾಗುವಳಿಗೆ ತರುವಂಥ ನಿರೀಕ್ಷಣೆಯಿದೆ.

ಅಂಬಲಿಗೊಳದ ಜಲಾಶಯವನ್ನು ಪ್ರಾರಂಭಿಸಿದ್ದು 53-54ನೆಯ ಸಾಲಿನಲ್ಲಿ 56 ಲಕ್ಷ ರೂಪಾಯಿಗಳಿಗೆ ಅಂದಾಜು ತಯಾರಿಸಲಾಗಿತ್ತು. ಇದರ ಬಗ್ಗೆ ಈಗಾಗಲೇ 23 ಲಕ್ಷದ 83 ಸಾವಿರ ರೂಪಾಯಿಗಳು ಖರ್ಚಾಗಿವೆ. ಆದುದರಿಂದ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ ಸ್ವಲ್ಪಮಟ್ಟಿಗೆ ದುಡ್ಡನ್ನು ಒದಗಿಸಿ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಬೇಕಾಗಿದೆ.

ಇದೇ ರೀತಿ ಬಳ್ಳಾರಿ ಜಿಲ್ಲೆಯಲ್ಲಿ ಲಕ್ಷಾಂತರ ಎಕರೆ ಸಾಗುವಳಿಗೆ ಅನುಕೂಲವಾಗತಕ್ಕಂಥ ತುಂಗಭದ್ರಾ ಪ್ರಾಜೆಕ್ಟನ್ನು ನಿರ್ಮಿಸಲಾಗಿದೆ. ಈ ಯೋಜನೆಯಿಂದ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಮೈಸೂರು ಸಂಸ್ಥಾನಕ್ಕೆ ಸೇರಿರತಕ್ಕ ಪ್ರದೇಶದಲ್ಲಿ 93 ಸಾವಿರ ಎಕರೆಗಳಷ್ಟು ಪ್ರದೇಶವನ್ನು ವ್ಯವಸಾಯಕ್ಕೆ ತರಲು ಅವಕಾಶವಾಗಿದೆ. ಬಳ್ಳಾರಿ ಮೈಸೂರಿಗೆ ಸೇರಿದ ಮೇಲೆ $11\frac{1}{2}$ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ 30,000 ಎಕರೆಗೆ ನೀರು ಒದಗಿಸಲು ಏರ್ಪಾಡಾಗಿದೆ. ಉಳಿದ 63,000 ಎಕರೆ ಪ್ರದೇಶವೂ ಸಹ ಯೋಜನೆಯ ಅವಧಿಯೊಳಗೆ ಸಾಗುವಳಿಗೆ ಬರುವ ನಿರೀಕ್ಷೆಯಿದೆ. ಹೀಗೆ ಒಟ್ಟಿನಲ್ಲಿ ನೀರಾವರಿ ಕಾಂಗಾರಿಗಳಿಗೋಸ್ಕರವಾಗಿ ಮೊದಲನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಅಂದರೆ 1954-55ರ ಅಕ್ಟೋಬರ್‌ವರೆಗೆ ಒದಗಿಸಿರುವ ದುಡ್ಡಿನಲ್ಲಿ ಸುಮಾರು 11 ಕೋಟಿಗಳಷ್ಟು

(ಶ್ರೀ ಎಚ್. ಹುಚ್ಚಮಾಸ್ತಿಗೌಡ.)

ಹಣ ಖರ್ಚಾಗಿದೆ. ಇದರಿಂದ ಮೈಸೂರು ದೇಶಕ್ಕೆ ಆಗಿರುವ ಪ್ರಯೋಜನವೇನೆಂದರೆ 13,709 ಎಕರೆಗಳಷ್ಟು ಜಮೀನು ಹೊಸದಾಗಿ ನೀರಾವರಿಗೆ ಬಂದಿದೆ ಮತ್ತು 4,000 ಎಕರೆ ಇರುವ ತರಿ ಜಮೀನಿಗೆ ಯಾವ ತೊಂದರೆಯೂ ಇಲ್ಲದಂತೆ ನೀರನ್ನೊದಗಿಸಲು ಸುಗಮವಾದ ವ್ಯವಸ್ಥೆಗಳನ್ನು ಏರ್ಪಡಿಸಲಾಗಿದೆ.

ಹೀಗೆ ದೇಶದಲ್ಲಿ ನೀರಾವರಿ ಅಭಿವೃದ್ಧಿ ಕೆಲಸಕಾರ್ಯಗಳೇ ಅಲ್ಲದೆ ಇತರ ಅಭಿವೃದ್ಧಿ ಕೆಲಸ ಕಾರ್ಯಗಳ ಕ್ಷೇತ್ರದಲ್ಲಿಯೂ ಸಹ ಬಹಳ ಯಶಸ್ವಿಯಾಗಿ ಕೆಲಸ ನಡೆದಿದೆ. ಇವುಗಳೆಲ್ಲವೂ ಪರಿಪೂರ್ಣ ಹೊಂದಲು ಅವಕಾಶವಿದೆಯೆಂದು ಹೇಳಬಹುದು.

ಆದರೆ ಇನ್ನೂ ದ್ವಿತೀಯ ಪಾಂಚವಾರ್ಷಿಕ ಯೋಜನೆಯ ಅಂಕಿ ಅಂಶಗಳು ನಮ್ಮ ಮುಂದೆ ಇಲ್ಲ. ಅಂತೂ ದೇಶದಲ್ಲಿ ನೀರಾವರಿ ಕಾಂಗಾರಿಗಳೂ, ವಿದ್ಯುಚ್ಛಕ್ತಿ ಉತ್ಪನ್ನ ಇತ್ಯಾದಿಗಳೆಲ್ಲವೂ ಆಗಿ—ಇವುಗಳಿಂದ ದೇಶದಲ್ಲಿ ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಕಾರ್ಯಗಳೂ, ಹಳ್ಳಿಯವರ ಹಿತಸಾಧನೆಗಳೂ ಪ್ರತಿಯೊಂದು ಗ್ರಾಮದ ಮತ್ತು ತಾಲ್ಲೂಕಿನ ಮಟ್ಟದಲ್ಲಿ ನಡೆಯಬೇಕಾಗಿದೆ. ಈ ಕಾರ್ಯವನ್ನು ಇನ್ನು ಎರಡು ವರ್ಷಗಳಲ್ಲಿ ಈ ಪಾಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡರೆ ಈ ಕಾರ್ಯಗಳೆಲ್ಲ ನೆರವೇರಬಹುದೆಂದು ನಾವು ನಿರೀಕ್ಷಣೆ ಮಾಡಬಹುದು. ಇದಕ್ಕೋಸ್ಕರವಾಗಿಯೇ ಈಗ ದ್ವಿತೀಯ ಪಾಂಚವಾರ್ಷಿಕ ಯೋಜನೆಗಾಗಿ ಮೊದಲು ಒದಗಿಸಿದ್ದರ ಎರಡರಷ್ಟು ದುಡ್ಡನ್ನು ಇದಕ್ಕೆ ಒದಗಿಸಿದ್ದಾರೆ.

ಶ್ರೀ ಜೆ. ಮಹಮ್ಮದ್ ಇಮಾಂ.—ಎಲ್ಲಿಂದ ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—'ಎಲ್ಲಿಂದ' ಅನ್ನುವುದೇ ಈಗಿನ ಬಹಳ ಮುಖ್ಯವಾದ ಪ್ರಶ್ನೆ. ಈ ಪಾಂಚವಾರ್ಷಿಕ ಯೋಜನೆಯ ಒಂದು ಅಂಗವಾಗಿ ತಾಲ್ಲೂಕ್ ಡೆವಲಪ್‌ಮೆಂಟ್ ಕಮಿಟಿಗಳೂ, ವಿದ್ಯಾಸುಧಾರಣೆಗಳೂ ಇತ್ಯಾದಿಗಳನ್ನೆಲ್ಲ ಜಾರಿಗೆ ತಂದು ರಾಜ್ಯವನ್ನು ಸುಖೀ ರಾಜ್ಯವನ್ನಾಗಿಮಾಡಲು ನಾವು ಎಷ್ಟು ದೂರ ಖರ್ಚುಮಾಡಲು ಹೋಗಬಲ್ಲೆವು ಅನ್ನುವುದು ಬಹು ಮುಖ್ಯವಾದ ವಿಷಯ.

ಗ್ರಾಮ ಗ್ರಾಮಗಳಿಗೆ ಹೆಚ್ಚಿನ ಸಂಬಂಧವುಂಟಾಗಿ ಗ್ರಾಮದಲ್ಲಿ ವಾಸಿಸತಕ್ಕ ಜನರೆಲ್ಲರೂ ಬಹಳ ನಿಕಟ ಸಂಬಂಧವನ್ನಿಟ್ಟುಕೊಂಡು ಮುಂದುವರಿಯಬೇಕಾಗಿದ್ದರೆ ಆ ಗ್ರಾಮಾಂತರ ಪ್ರದೇಶಗಳಿಗೇನೇನು ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿವೆಯೋ ಅವುಗಳನ್ನೆಲ್ಲಾ ಈ ಪಾಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡು — ಅವುಗಳೆಲ್ಲಾ ಯಶಸ್ವಿಯಾಗಿ ಮುಂದುವರಿದು ಆ ಮೂಲಕ ಜನರು ತಮ್ಮ ತಮ್ಮ ಕೆಲಸಗಳಲ್ಲಿ ಕಾರ್ಯೋನ್ಮುಖರಾಗುವಂತೆ ಮಾಡಲು ಅವರಿಗೆ ತಕ್ಕಂಥ ವಿದ್ಯಾ ಸುಧಾರಣೆಗಳನ್ನೂ ಕೂಡ ಮಾಡಲಾಗಿದೆ, ಇದಕ್ಕೆಲ್ಲ ದುಡ್ಡು ಬಹಳ ಮುಖ್ಯ. ಮೊದಲು ನಾವು ಈ ಬಾಬುಗಳಿಗಾಗಿ 9 ಕೋಟಿ ರೂಪಾಯಿಗಳನ್ನು ಸಾಲ ಎತ್ತುವುದರ ಮೂಲಕವೂ, ಎಂಟು ಕೋಟಿ ರೂಪಾಯಿಗಳನ್ನು ತೆರಿಗೆ ಹಾಕುವುದರ ಮೂಲಕವೂ ಮತ್ತು ಇದರ ಜೊತೆಗೆ ಕೇಂದ್ರದಿಂದ ಬರತಕ್ಕಂಥ ಧನ ಸಹಾಯವನ್ನು ಒಟ್ಟುಗೂಡಿಸಿಯೂ ಈ ಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಆಲೋಚನೆ ಮಾಡಿ, ಅಂದಿನ ಪರಿಸ್ಥಿತಿಯಲ್ಲಿ ನಮ್ಮ ಸರ್ಕಾರದವರು ಈ ಸಂಬಂಧವಾಗಿ ಅವರು ಎಲ್ಲಿಯವರೆಗೂ ಹೋಗಿ ದುಡ್ಡನ್ನು ಒದಗಿಸಬಹುದಾಗಿತ್ತೋ ಅಷ್ಟನ್ನೂ ಒದಗಿಸಿದ್ದಾರೆ. ಅದು $6\frac{1}{2}$ ಕೋಟಿ ಮಾತ್ರವಾಯಿತು. ಹೀಗಾದದ್ದನ್ನು ನೋಡಿ ನಮ್ಮಲ್ಲಿ ಅನೇಕರಿಗೆ ಮನಸ್ಸಿನಲ್ಲಿ ಈ ಮೊದಲನೆಯ ಪಾಂಚವಾರ್ಷಿಕ ಯೋಜನೆ ಪರಿಪೂರ್ಣವಾಗಿ ಯಶಸ್ವಿಯಾಗಲು ಸಾಧ್ಯವಿಲ್ಲ ಅನ್ನುವಂಥ ಪರಿಸ್ಥಿತಿ ಕಂಡುಬಂದಿರಬಹುದು. ಸಾಲ ಎತ್ತಿದ ಮೇಲೆ ತೆರಿಗೆ ವಿಧಿಸತಕ್ಕಂಥ ಆವಶ್ಯಕತೆ ಕಂಡುಬಂದೇ ಬರುತ್ತದೆ. ಆದರೆ ಹಾಗೆ ಜನರಮೇಲೆ ತೆರಿಗೆ ಹಾಕುವುದರ ಬಗ್ಗೆ ಅಡ್ಡಿ ಅಡಚಣೆಗಳಿರುವುದು ಸ್ವಾಭಾವಿಕ. ಆದರೆ ಹೀಗೆ ತೆರಿಗೆಗಳನ್ನು ವಿಧಾಯಕ ಮಾಡುವಾಗ ನಾವು ಹಳ್ಳಿಗಾಡಿನ ಜನರಾದಿಯಾಗಿ ಧನ ಸಂಪತ್ತು ಯಾರಲ್ಲಿ ಹೆಚ್ಚಾಗಿರುತ್ತದೆಯೋ ಅಂಥವರ ವಿಷಯವನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಈ ತೆರಿಗೆಗಳನ್ನು ಜಾರಿಗೆ ತರುವಾಗ ಯಾರು ಯಾರಿಗೆ ಎಷ್ಟೆಷ್ಟು ಕೊಡಲು ಸಾಧ್ಯವಿದೆಯೆಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡುವುದು ತುಂಬ ಅವಶ್ಯಕ. ಆದರೆ ಇಂಥಿಂಥ ಅಭಿವೃದ್ಧಿ ಕೆಲಸಕಾರ್ಯಗಳಾಗಬೇಕಾಗಿದ್ದರೆ ದುಡ್ಡು ಹೆಚ್ಚಾಗಿ ಬೇಕು. ಇದಕ್ಕೆಲ್ಲಾ ತೆರಿಗೆಗಳನ್ನು ವಿಧಿಸದೆ ವಿದ್ಯಾರಣ್ಯರು ಹೊನ್ನಿನ ಮಳೆಯನ್ನು ಸುರಿಸಿದಂತೆ ದುಡ್ಡನ್ನೊದಗಿಸಲು ಸಾಧ್ಯವಿಲ್ಲ. ಜನರು ಕೊಡತಕ್ಕಂಥ ತೆರಿಗೆ, ಕಂದಾಯ ಮತ್ತು ಸುಂಕ ಇತ್ಯಾದಿಗಳಿಂದಲೇ ಸರ್ಕಾರಕ್ಕೆ ದುಡ್ಡು ಬರಬೇಕಾಗಿದೆ. ಆದರೆ ಸರ್ಕಾರದವರು ಇಷ್ಟೆಲ್ಲವನ್ನೂ ಮಾಡದೆ ಹೋದರೆ ಜನಜೀವನದ ಮಟ್ಟ ಹೆಚ್ಚುವುದಿಲ್ಲ ; ನಾವು ಕೈಗೊಂಡ ಕಾರ್ಯ ಯಶಸ್ವಿಯೂ ಆಗುವುದಿಲ್ಲ. ಕೈಗೊಂಡಿರುವ ಕೆಲಸಕಾರ್ಯಗಳು ಯಶಸ್ವಿಯಾಗದ ವಿನಾ ಜನರ ಜೀವನ ಮಟ್ಟ ಹೆಚ್ಚುವುದಿಲ್ಲ. ಜನರ ಜೀವನ ಮಟ್ಟ ಹೆಚ್ಚದೇ ಹೋದರೆ ಅವರಿಂದ ಆದಾಯ ಬರುವುದೂ ಸಾಮಾನ್ಯ. ಅಂದರೆ ಈ ಸಮಸ್ಯೆ "ಮದುವೆಯಾಗದ ಹೊರತು ಹುಚ್ಚು ಬಿಡದು—ಹುಚ್ಚು ಬಿಡದ ಹೊರತು ಮದುವೆಯಾಗದು" ಎಂಬ ಹಾಗಿದೆ. ನಾವು ಹೀಗೆ ಜನರಿಗೆ ಅನುಕೂಲಗಳನ್ನು ಕಲ್ಪಿಸದೆ ಹೋದರೆ ಅವರಿಗೆ ಹೆಚ್ಚು ಸಂಪಾದನೆಮಾಡಲು ಮಾರ್ಗಗಳಿರುವುದಿಲ್ಲ. ಆದರೆ ಅವರು ಹೆಚ್ಚು ಹೆಚ್ಚಾಗಿ ಸಂಪಾದನೆ ಮಾಡುವಂತೆ ನಾವು ಮಾಡಬೇಕಾಗಿದ್ದರೆ—ಈ ಬಗ್ಗೆ ಹೆಚ್ಚು ಹಣವನ್ನು ಖರ್ಚುಮಾಡಬೇಕಾಗಿದೆ. ಈ ಅಂಶಗಳನ್ನೆಲ್ಲಾ ಜನರು ತಮ್ಮ ಮನಸ್ಸಿಗೆ ತೆಗೆದುಕೊಂಡರೆ ಈ ಬಾಬುಗಳಿಗಾಗಿ ಯಾರೂ ಸಹಾಯ ಮಾಡುವುದಕ್ಕಾಗುವುದಿಲ್ಲವೆಂದು ಖಂಡಿತ ಹೇಳಲಾರರು. ನಮಗೆ ಎಷ್ಟರ ಮಟ್ಟಿಗೆ ಕೊಡಲು ಶಕ್ತಿಯಿದೆಯೋ ಅಷ್ಟನ್ನಾದರೂ ಕೊಡಲೇಬೇಕು. ಇಂಥ ಕಾರ್ಯಗಳಿಗೆ ಹಣ ಒದಗಿಸತಕ್ಕ ಬಗ್ಗೆ ಎಲ್ಲರೂ ಮನಸ್ಸು ಮಾಡಬೇಕಾಗಿದೆ.

ಆದರೆ ಈಗಾಗಲೇ ಸಭೆಯ ಮುಂದೆ ರೈತನ ದುಸ್ಥಿತಿಯ ಬಗ್ಗೆ ಚರ್ಚೆಗಳಾಗುತ್ತಿವೆ. ಧಾರಣೆವಾಸಿಗಳು ಇಳಿದುಹೋಗುತ್ತಿವೆ. ಇದರಿಂದ ರೈತನಿಗೆ ಬರುವ ಉತ್ಪತ್ತಿ ದಿನೇ ದಿನೇ ಕಡಮೆಯಾಗುತ್ತಿದೆ. ಆದರೆ ಆತನು ಕೊಳ್ಳತಕ್ಕ ಸಾಮಾನುಗಳ ಬೆಲೆ ಮಾತ್ರ ಇಳಿದಿಲ್ಲ. ಇದರಿಂದ ಆತನಿಗೆ ತೆರಿಗೆ ಕೊಡಲು ಶಕ್ತಿ ಇದೆಯೇ ಎಂಬುದು ಚರ್ಚಾಸ್ಪದವಾದ ವಿಷಯ. ಏನೇ ಆಗಲಿ, ತೆರಿಗೆಗಳನ್ನು ಹಾಕುವುದು ಮತ್ತು ಸಾಲವನ್ನು ಎತ್ತುವುದು ಇದು ಹೊರತು ಯಾವ ಯೋಜನೆಯನ್ನೂ ಯಶಸ್ವಿಯಾಗಿ ಮಾಡುವುದಕ್ಕಾಗುವುದಿಲ್ಲವೆಂಬುದು ಖಂಡಿತ. ಎದುರು ಪಕ್ಷದ ನಾಯಕರೂ ಮಾನ್ಯ ಸದಸ್ಯರೂ ಕೂಡ ತೆರಿಗೆಗಳನ್ನು ಹಾಕುವುದಕ್ಕೂ, ಸಾಲ ಎತ್ತುವುದಕ್ಕೂ ಮನಸ್ಸು ಮಾಡಿ, ನಮ್ಮ ಯೋಜನೆಗಳು ಯಶಸ್ವಿಯಾಗುವುದಕ್ಕೆ ಸಹಾಯ ಮಾಡುತ್ತಾರೆಂದು ನಾನು ಭಾವಿಸುತ್ತೇನೆ.

ಶ್ರೀ ಜೆ. ಮಹಮ್ಮದ್ ಇಮಾಂ.—ತೆರಿಗೆಗಳನ್ನು ಹಾಕಬೇಕೆಂದು ತಮ್ಮ ವಾದವೆ ?

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುವ ಭಾಷಣದಲ್ಲಿನ ಪ್ರಾಮುಖ್ಯವಾದ ಕೆಲವು ವಿಷಯಗಳನ್ನು ಪರಿಶೀಲನೆ ಮಾಡಿ ನಿವೇದಿಸಿಕೊಂಡಿದ್ದೇನೆ.

ಅವರ ಭಾಷಣದಲ್ಲಿ, ಈ ಸಾರಿ ಯಾವ ಯಾವ ಮಸೂದಾ ಕಾನೂನುಗಳು ಸಭೆಯ ಮುಂದೆ ಬರುತ್ತವೆಂಬುದು ನಮೂದಾಗಿದೆ. ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುವ ಭಾಷಣದ ವಿಚಾರದಲ್ಲಿ ನಾನು ಈಗಾಗಲೇ ನಿವೇದಿಸಿದ ಹಾಗೆ, ಅವರು ದೇಶದ ಜನರ ಸುಖಸಂಪತ್ತುಗಳನ್ನು ಸಾಧಿಸಬೇಕಾದರೆ, ಜನಜೀವನದ ಮಟ್ಟವನ್ನು ಹೆಚ್ಚಿಸಬೇಕಾದರೆ ಏನು ಮಾಡಬೇಕೆಂಬ ಬಗ್ಗೆ ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಇದಕ್ಕಾಗಿ ಶ್ರೀಮನ್ಮಹಾರಾಜರವರನ್ನು ಹೃತ್ಪೂರ್ವಕವಾಗಿ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Motion Moved :

> " May it please Your Highness, We, the members of the Mysore Legislative Assembly assembled in this Session, beg leave to thank Your Highness for the Address delivered to the members of both Houses of the Legislature."

Sri S. SRINIVASA IYENGAR (T.-Narsipur).—Mr. Speaker, I beg to oppose the Motion of Thanks. As has been already pointed out, His Highness the Rajpramukh has delivered this Address in exercise of the privilege conferred on him in the Constitution. My idea in opposing it is to impress on the Government that the Address should have been more exhaustive and realistic. The Address as it is delivered will serve no purpose. Presently, I will place before this House my views to substantiate what I have said.

The privilege of addressing the joint session of the Legislature has been, of course, copied from the Constitution of the British Isles. There, Royalty is still maintained ; they have so many problems. Foreign Affairs is in their control and there is some meaning in that. Here, either the Address should be in the nature of a review of the doings of the Government in the previous year or it should confine itself to the policies of the Government in the coming year. The Address, as it is, does not fulfil any of these principles or uses. My own feeling is that the Address should have been more exhaustive. Coming to the details of the Address, I would at once go to the question of the States Reorganization mentioned in the Address. Since a day has been allotted for the discussion of the Facts Finding Committee Report, I will not deal with that subject at length at the present moment. But I would very much like to place before this House that His Highness the Rajpramukh, while delivering his inaugural Address in 1954, extended a warm welcome to the inclusion within the borders of the State all the seven predominantly Kannada speaking taluks of the Bellary District knowing full well that economically such a step was not beneficial to the State of Mysore. Today, we know well that, on account of the inclusion of these seven taluks, there is a deficit of about 50 lakhs of rupees and the people of Mysore are shouldering that. In 1955, while delivering the Address, His Highness the Rajpramukh has been pleased to state as follows :

> " There is naturally a great deal of difference of opinion, whether the State should remain as it is or should take in adjoining territories whose inhabitants wish to be united with the people of Mysore State."

I would like to know what are the factors that necessitated this statement. What are the factors that were impressed on His Highness the Maharaja to make a statement like this, when very recently in 1954, he had extended a very warm welcome for the inclusion of the seven taluks ? Further, the other thing that intrigued me was about the principle that His Highness the Maharaja was pleased to enunciate. He said that " increased prosperity and well-being are the only justifications for disturbing the *status quo*." What is the *status quo* ? Is the *status quo* as it is today, or as it was before, before the inclusion of the seven taluks of Bellary? If the *status quo* is as it is, we stand to lose. So it is not for the increased prosperity . . .

(*Interruption*)

So, I would like to know—increased prosperity for whom ? Is it for the people that are going to join us or is it for the people of Mysore State . . .

(SRI S. SRINIVASA IYENGAR.)

(*Interruption : Both*)

. . . Very good. Whether it would be in the interests of both, I would certainly deal with at the time of discussing the Facts Finding Committee's Report. Sir, suffice it to say that the proposal of unification of all the Kannada speaking regions and other areas are brought for the purpose of ensuring increased prosperity in all those areas. That is why the Fazl Ali Commission is there.

The next important point is the Educational Reforms. It is true that His Highness the Maharaja has laid stress on the auspicious day on which the Educational Reforms have been inaugurated in the State. But I would like to know whether the Government has placed before His Highness the implications and the commitments of the people of the State so far as educational reforms are concerned. I feel that the full implications of implementing the educational reforms have not been brought before the public. Sir, as it is, the educational reforms would cost in the first year 5.41 crores and in the tenth year 9.22 crores. I would like to place before this House that the Government of Mysore are already spending 17 per cent of their budgetary provision on Education, and Mysore State is the fifth in India, the first being Bombay. They are spending 20.3 per cent, Madras 16.6 per cent ; Travancore-Cochin 17 per cent; Hyderabad 16 per cent; and Mysore 17 per cent. The present expenditure is 3.75 crores. As a result of introducing these educational reforms, the Government would have to provide 5·41 crores in the first year and 9·22 crores in the tenth year. I believe, it would amount to half the revenues of the State. I submit that the people of the State are not in a position to shoulder that responsibility. It is true that in the report of the Educational Reforms Committee there is a proposal to introduce fresh taxes. Regarding the revenue anticipated by enforcing the various taxation measures, the Education Reforms Committee feel that they can have a revenue of 1·17 crores annually ; but, it is inclusive of the Central assistance of 90 lakhs. Virtually, the revenue accrued by the taxation measures would be negligible compared to the total amount of money that the Government of Mysore will have to spend on the educational reforms.

I submit that the Government would have been well advised if they had introduced these reforms stage by stage. I submit, Sir, that the Education Minister had made a statement in the House last year that the educational reforms would be introduced in the State at the Primary Stage. I believe, Sir, that system would have been more beneficial and the commitments of the Government would have been lesser. By the action of the Government, we find that in all the institutions promotions have been made in the month of January, and the promoted candidates have no place to sit in classes to which they have been promoted. The promoted candidates have no text-books to read and the promoted candidates will have to idle away their time for another five months,—because text-books would be made available in June or somewhere then. But the point is—printed text-books are not available. That being so, I am questioning the utility of the Reforms. Further, granting that the Government of Mysore had undertaken to introduce the educational reforms stage by stage and introduced at the primary stage, what would be the commitment on the Government? That is an important question. As it is, in the State of Mysore we have 10,474 primary schools, and we need, according to the latest Census, nearly 6,000 primary schools. I read in the papers today that the Government of Madras have made an announcement that, by the end of 1957, they would be in a position to provide a school in every village. . . .

A MEMBER.—A well also.

Sri S. SRINIVASA IYENGAR.—Yes. A well also. Are we in a position to say that ? We have to provide six thousand primary schools. That is our need. As it is, our budgetary provision for primary education is 1·5 crores. In the educational budget of 3·75

crores the expenditure towards primary education—as it is incurred today—is 1·5 crores. Supposing we introduce this compulsory primary education to every village in the State, at least in one or two years, two crores will have to be provided. The total expenditure on primary education will be three crores of rupees, if we provide a school for every village in the State. That being the state of affairs, I do not know how Government agreed to shoulder this very heavy responsibility of implementing the educational reforms. The introduction of compulsory primary education is one of the duties of the State. Therefore it would have been better if the Government had limited themselves to the introduction of reforms at the primary stage.

2 P.M.

The Reforms Committee had also made an observation that no untrained teacher should be entertained. That is a principle enunciated by the Reforms Committee. Now, have the Education Department got all trained teachers ? Out of about 33,000 primary teachers, not more than 30 per cent are trained, that is, only 9,000 are trained and the remaining teachers have yet to be trained. That being the case, I really do not understand why the Government introduced these Reforms without getting the teachers trained ? I would have certainly appreciated the action of the Government if they had established centres for training teachers as recommended by the Reforms Committee themselves. The Reforms Committee had stated that the Government should establish 60 centres to train teachers at the rate of 50 at each centre, so that at the end of the year, the Government would have had 3,000 trained teachers to implement the educational reforms. I consider, Sir, that the introduction of the educational reforms has not been done after due consideration but has been done perhaps with the purpose of having a name of having introduced these Reforms.

Sir, the last subject I would like to deal with is about the land reforms. I feel, Sir, the land reforms, in the way in which they have been placed before this House, are not necessary in Mysore State. I am substantiating that by quoting the following statistics. Sir, we have 13 lakhs of holdings in Mysore State for an acreage of 81 lakhs, and amongst these 13 lakhs of holdings, 98·8 per cent of the holdings refer to holders who have less than 50 acres. These statistics are taken from the Report of Sri Gundappa Gowda Committee. 1·2 per cent of these 13 lakhs of holders are in possession of 15.8 per cent of the total acreage of the State. That means that holders holding lands more than 50 acres are so small in number that the fixation of the upper limit is not the problem. The problem is the prevention of fragmentation. I am going to substantiate that statement. Sir, Punjab is also an agricultural country. It has its land problem. From the survey of the Punjab State, it is noted that 80·6 per cent of the holders have 20·3 per cent of the entire acreage of Punjab. Let us see how it is in Mysore State. In Mysore State 86 per cent of the holders hold 46.4 per cent of the entire acreage. These holders refer to holdings less than 10 acres. That means, a large number of holders have less than 10 acres and the acreage is almost half of the total acreage. So, fragmentation is on the increase. That fragmentation should be checked and then only we can have intensive cultivation, mechanised cultivation and improved production. So, the problem of the State is not one of fixing an upper limit but it is the fixing of the lower limit. Therefore, I find, Sir, that the land reforms as referred to by His Highness the Maharaja is not the one that is wanted here.

Next, Sir, as regards the District Board and Taluk Development Committees, I wish to make one or two references. In the year 1953, His Highness the Rajpramukh in his Address has said : "My Government feel that the system of indirect election recommended by the Venkatappa Committee should be given a fair trial." The declaration of the Rajpramukh remained as such on paper. The Government did not implement it. In the year 1954, when this point was

brought to lime-light, and was raised on the floor of the House, His Highness the Rajpramukh was pleased to observe in his Address as follows :—"There was also some difference regarding the method of election to the Boards." And therefore he declared that the District Boards are going to be abolished and Advisory Committees would be appointed. The former part of the Address was implemented and the latter part had been ignored. And in the year 1955, His Highness the Rajpramukh has been pleased to state that now that the Committee's Report has been received and also the opinions of the Members of the Legislature have been obtained informally, the Government have decided to allow the District Boards to remain and the elections should be by direct elections. I would like to place before this House that the Chandrasekharaiya Committee never recommended that there should be direct elections. On the other hand, the Chandrasekharaiya Committee stated that Taluk Boards should be constituted and in regard to the membership of the Taluk Boards, two-thirds of the membership should be returned by election and one-third by nomination and the members of the Taluk Boards should elect the members of the District Board. That was the proposal. The Venkatappa Committee's proposal was that there should be direct election to the village panchayets and the members of the village panchayets should elect the members of the District Board. Therefore, Sir, I do not know how the Government felt that Chandrasekharaiya Committee had recommended direct election to the District Boards.

Sri H. M. CHANNABASAPPA (Periyapatna).—It has not been said like that.

Sri S. SRINIVASA IYENGAR.—The Committee's report is there. Suppose the statement of the Rajpramukh is to be accepted, then we go back to the period prior to the coming into force of the Village Panchayets and District Boards Act, 1952; there was direct election before also and there is thus absolutely no difference. If the Government really thought of enforcing the provisions of the Act that existed prior to the enforcement of the Village Panchayets and District Boards Act, 1952, then I do not know why there was so much delay. In fact, Chandrasekharaiya Committee has stated that direct election should not be resorted to because it has been pointed out by them that party spirit and other things would prevail in the State and it would not be healthy to conduct direct elections. As regards the constitution of Rural Development Committees even, Chandrasekharaiya's Committee have observed that the experience of such Committees should not be forgotten. They said that there were Committees in existence but they did not function properly because they were not statutory bodies. Chandrasekharaiya Committee was therefore against the constitution of Rural Development Committees; but the decision of the Government is absolutely against the Report of the Chandrasekharaiya Committee. Therefore, I fail to understand why the Government have acted in the manner in which the Rajpramukh has said that the Government desire to do it.

Sir, the next question is about the Five-Year Plan. The plan period is 1951-1956. The plan amount is Rs. 47·99 crores. Up to the end of 1955, that is between 1951-1955, the outlay of the plan amounts to Rs. 27·76 crores. They have spent a good lot of money and the amount that remains to be spent is about Rs. 20 crores in one year. I feel, Sir, the Government of Mysore would be unable to complete the programme under the Five-Year Plan as it stands today. For financing the Five-Year Plan, the Planning Commission had pointed out certain sources. It is my duty now to place before this House how far the Government have been able to implement those decisions. For financing of the Five-Year Plan, they have suggested several items out of which one is surplus revenue over expenditure. It was suggested that Rs. 3·9 crores is to be saved in the plan period and spent for the schemes. Till today, we have not heard of a surplus and therefore the financing of the Five-Year Plan

under this Head is out of question. The responsibility rests entirely on the Government for not providing this fund and not saving money in the Budgets. The second item is the Loans from open markets. Out of Rs. 9 crores of loans that the Mysore Government have to raise, they have already raised 4·87 crores. In the open market they have realised Rs. 3·37 crores and from the Government of India they have got transferred Rs. 1·5 crores out of the National Development Loan. So, in all, the Government of Mysore are in receipt of 4·87 crores under the loan account. They have only about Rs. 5 crores to be raised in the open market in the coming year. I feel, Sir, that now in the present context when we are having fall in agricultural price and when it is quite probable that many people will have to sell their holdings to maintain themselves, when it is quite probable that the agricultural produce might not pay and result in a change over to money crops, the raising of a loan would be absolutely hazardous. The third item is 'Income from Deposits'. In the plan period, it was suggested that from the deposit account, the Government of Mysore would have Rs. 5 crores. By Deposit Account, I mean Savings Bank Deposits and other kinds of deposits. Sir, I would like to place before this House that ever since the plan period till this day, there has been a continuous out-flow. But what was suggested was an inflow to the tune of Rs. 5 crores during the plan period. People have withdrawn more than what they had put in the Treasury. So, even that source has been closed to the Government of Mysore for implementing the Five-Year Programme. The next item is economy in sxpenditure. The Government spent Rs. 6·1 crores towards establishment in 1951-52 and in 1954-55 they are spending Rs. 8·17 crores, that is, Rs. 2 crores more than what they were spending on establishment in the year 1951-52. How could there be any economy in expenditure? In fact, it has increased. How could they find any money for spending on the Five-Year Plan under this head as anticipated in the Five-Year Programme? So, even on this account, the Government have failed.

Sir, the next most important thing is additional taxation. They were pleased to say that we are taxed very little. His Highness the Rajpramukh has been pleased to say in the Address of 1954, two years have passed without any additional taxation, so the Government had implemented the provisions of the Five-Year Programme without additional taxation for a period of two years. So, in one year alone, they have levied certain taxes. That was their plea. But my contension is otherwise. From the year 1951-52, the Government of Mysore have introduced nearly nine types of additional taxation and their realisation has been to the tune of 5 crores. The target in the Five-Year Plan is 8·8 crores. We have yet one more year of the plan period and all the taxation measures in full operation. I feel the target under this item will be reached and additional taxation is unwarranted. The following are the new measures that have been imposed on us for the last four years:—

| | | |
|---|---|---|
| Health Cess | ... | 1951-52 |
| Cinematograph Tax | ... | 1951-52 |
| Prize Competition Tax | ... | 1951-52 |
| Sales Tax and Petrol Tax | | 1949 |

Electricity surchange twice—(10 per-cent once and 10 per cent last year).
Tax on Motor Vehicles (twice.)
Increase in Stamp and Registration charges.
Enhancement of Court Fee Stamp.
Sales Tax on Cigarettes.

Nearly on 9 items we are paying more taxes than what we used to pay prior to 1951-52.

SRI H. SIDDAVEERAPPA (Minister for Home and Industries).—That is how you should contribute to the successful working of the Five-Year Plan.

SRI S. SRINIVASA IYENGAR.—So, I feel, Sir, that we have been taxed very heavily and the people are not in a position to shoulder the additional taxation and the Government have no justification to impose additional taxes, because they will have reached the target of 8·8 crores. And therefore, I

(SRI S. SRINIVASA IYENGAR.)

feel that additional taxation as promised by the Rajpramukh will not be welcomed by the people.

Sir, to complete the First Five-Year Plan, we have to provide 20 crores in 1955-56 and that can never be done by the resources of the State. It is my point that the Government should press the Government of India to extend relief and financial assistance. It is true the Government of India's quota or the Central Assistance quota is almost issued. We have received till today 11.6 crores of rupees towards Central Assistance. The Central Assistance was only planned to remain at 8 crores of rupees but it has been enhanced on account of Bhadra Project and other irrigation projects by about 3·5 crores and we have 11.6 crores from the Central Government towards the implementation of the Five-Year Plan. And I feel, Sir, even though the Centre might have supplied the finance as contemplated in full, but still they have to give us additional funds, because we have shouldered the responsibility of implementing the plan in Bellary and other parts, and that we have proved that we have taxed ourselves to the ourselves to the utmost, and that there is absolute sincerity on our part to provide funds from the State resources.

Sir, I would like to place before this House one or two things about which His Highness the Rajpramukh has not made mention in his Address. In his Address of 1952, he had promised this House that better provisions would be made for efficient management of the industries in the State and till to-day, we have not heard what has happened to that suggestion.

Sri H. SIDDAVEERAPPA.—Better management is there . . . .

Sri S. SRINIVASA IYENGAR.—I thank you very much for the reply, because I would have failed to point out why the so-called better management has not been introduced. The better provisions for the management of industries as declared by the Rajpramukh was to ensure quick action and initiative in industries. I will be glad if the Home Minister assures me that there has been quick action, drive and initiative in the management of the industries to-day.

In 1953, His Highness has stated that Raw Film Industries would be started in Mysore State. We are in the year 1955 and the Address contains no mention of that ; we have not yet known whether there has been any attempt to start the Raw Film Industries.

The most important omission by His Highness the Rajpramukh is about the position of the food prices in Mysore. The Government of India are watching the situation. It really pained me when I saw that the Government of Mysore did not even make a mention about it in the Address by His Highness the Rajpramukh of Mysore. Mr. Ajit Prasad Jain (Minister for Food and Agriculture, Government of India) in his speech at Bhopal, when questioned about the falling prices, assured that the Government of India would take every measure to check it. He even said that the Government of India would explore the possibility of enlarging the market.

Sri H. SIDDAVEERAPPA.—Even as it is, the situation is not alarming.

Sri S. SRINIVASA IYENGAR.—Well Sir, I consider this as alarming for this simple reason. The agriculturist is getting to-day about Rs. 10 lesser per palla than what he was getting in previous year, while the cost of production has not gone down in the same proportion. The cost of production is still on the original margin while his products fetch lesser value. And therefore, I said it is quite alarming and it becomes really alarming if the Government of Mysore do not take effective measures to check it. They must carefully watch the position. They must get in touch with the prices and have schemes to combat the fall in prices when it becomes really alarming.

Sir, Sri Benegal Rama Rau, in his address at Bombay has made an important announcement and that is about the rural credit. He has said, the Credit Society that advances money to the farmer, will get it

repaid by the Marketting Co-perative Societies which undertake to sell the products produced by the farmers. The cost of manures, seedlings and implements supplied by the Marketing Society to the grower will be paid off by the Rural Credit Society. So, that is the type of co-operation that I have in view. If that system is adopted in Mysore State, I believe, it will be a boom to the agricuturists. And I think Sir, His Highness the Rajpramukh should have made mention about this rural credit.

The other thing I wanted to know is this : His Highness the Rajpramukh in the year 1953 had stated in respect of Cultural Development Programme as follows :—

> "... The Cultural Development Programme is meant to achieve a double purpose. It will not only result in the normal regeneration of the people but also the development of a literary taste and an aesthetic appreciation of all that is noble in our national life . . . ."

I wanted to know after having spent Rs. 5 lakhs, how far these ideals have been achieved and where we are. Thank you very much.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಅಧ್ಯಕ್ಷರೇ, ನಮ್ಮ ರಾಜಪ್ರಮುಖರು ಮೊನ್ನೆ ಮಾಡಿದ ಭಾಷಣದಲ್ಲಿ, ಇಂದು ನಾವು ಸೇರಿರತಕ್ಕ ಈ ಅಧಿವೇಶನದ ಅವಧಿಯಲ್ಲಿ ಬಹುಮುಖ್ಯವಾಗಿ ಚರ್ಚಿಸಿ ತೀರ್ಮಾನಕ್ಕೆ ಬರಬೇಕಾದಂಥ ನಾಲ್ಕಾರು ಸಮಸ್ಯೆಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಈ ವಿಷಯಗಳಲ್ಲಿ ಬಹು ಮುಖ್ಯವಾದದ್ದೆಂದರೆ, ನಮ್ಮ ಸಂಸ್ಥಾನದ ಆಗುಹೋಗುಗಳನ್ನೇ ಇತ್ಯರ್ಥ ಮಾಡತಕ್ಕಂಥ ವಿಚಾರವಾದ ಸಂಸ್ಥಾನದ ಪುನರ್ವಿಂಗಡಣೆಯ ವಿಚಾರ. ನಮ್ಮ ರಾಜಪ್ರಮುಖರು ಈ ವಿಚಾರವನ್ನು ಪ್ರಸ್ತಾಪಿಸುತ್ತಾ, ಈ ವಿಚಾರವು ಬಹಳ ದೀರ್ಘವಾಗಿ ಆಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕಾದ ವಿಚಾರವೆಂದು ಹೇಳಿದ್ದಾರೆ. ಅವರು ಹಾಗೆ ಹೇಳುವಲ್ಲಿ ಒಂದು ಮಹತ್ತರವಾದ ಅಂಶವನ್ನು ಎತ್ತಿ ಹಿಡಿದಿದ್ದಾರೆ. ಅದೇನೆಂದರೆ, 'ಹೀಗೆ ಪುನರ್ವಿಂಗಡಣೆಯಾಗುವ ಸಂದರ್ಭದಲ್ಲಿ, ಪುನರ್ವಿಂಗಡಣೆಯಿಂದ ನಮ್ಮ ಸಂಸ್ಥಾನಕ್ಕೆ ಹೆಚ್ಚಿನ ಉನ್ನತಿಗೆ ಅವಕಾಶವಿದ್ದರೆ ಮಾತ್ರ ನಾವು ಅದಕ್ಕೆ ಮನ್ನಣೆ ಕೊಡಬಹುದಾಗಿದೆ, ಇಲ್ಲದಿದ್ದ ಪಕ್ಷಕ್ಕೆ ನಾವು ಯಾವ ರೀತಿಯ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂಬುದನ್ನು ಒತ್ತಿ ಹೇಳಿದ್ದಾರೆ. ಇದು ಗಮನಾರ್ಹವಾದ ವಿಚಾರ. ನಮ್ಮೆಲ್ಲರ ಆಶಯವೂ ಹಾಗೂ ಸ್ಟೇಟ್ಸ್ ರಿ-ಆರ್ಗನೈಸೇಷನ್ ಕಮಿಟಿಯನ್ನು ಸ್ಥಾಪನೆ ಮಾಡಿರುವವರ ಆಶಯವೂ ಕೂಡ ಈ ರೀತಿಯಾಗಿ ಪುನರ್ವಿಂಗಡಣೆಯಾಗುವ ಸಂದರ್ಭದಲ್ಲಿ ಆ ಪುನರ್ವಿಂಗಡಣೆ ಸಂಸ್ಥಾನದ ಪ್ರಗತಿಯನ್ನು ಸಾಧಿಸುವುದಕ್ಕೆ ಸಹಾಯಕವಾಗಿದ್ದರೆ ಮಾತ್ರ ಒಪ್ಪಿಕೊಳ್ಳತಕ್ಕುದಾಗಿದೆಯೆಂದು ಆಗಿದೆ. ಈ ದೃಷ್ಟಿಯಿಂದ ನಾವಿದನ್ನು ಬಹಳ ದೀರ್ಘವಾಗಿ ಆಲೋಚನೆ ಮಾಡಬೇಕಾಗಿದೆಯೆಂದು ನಾನು ಹೇಳುತ್ತೇನೆ. ಅದಕ್ಕೆ ಸರಿಯಾಗಿ ನಮ್ಮ ಸಂಸ್ಥಾನದ ಸರ್ಕಾರದವರೂ ಸಹ ದೂರದೃಷ್ಟಿಯಿಂದಲೇ, ಇದರ ಬಗ್ಗೆ ನಮಗೆ ಅವಶ್ಯಕವಾದ ಅಂಕಿ ಅಂಶಗಳು ನಮ್ಮ ಮುಂದಿಲ್ಲದೆ ನಾವು ಯಾವುದೊಂದು ತೀರ್ಮಾನಕ್ಕೂ ಬರುವುದು ಸೂಕ್ತವಲ್ಲವೆಂದು ತಿಳಿದು, ಅಂಕಿ ಅಂಶಗಳನ್ನು ನೋಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳುವುದು ಉತ್ತಮವೆಂಬ ಧ್ಯೇಯದಿಂದ ಒಂದು Fact Finding Committee ಯನ್ನು ನಿರ್ಮಿಸಿದರು. ಆ ಕಮಿಟಿಯವರು ಕೂಡ ಶೀಘ್ರವಾಗಿ 3-4 ತಿಂಗಳುಗಳಲ್ಲೇ ಹೆಚ್ಚಿನ ಗಮನಕೊಟ್ಟು ತಮ್ಮ ವರದಿಯನ್ನು ಒಪ್ಪಿಸಿರುವುದು ನಮ್ಮೆಲ್ಲರಿಗೂ ಗೊತ್ತಿದೆ. ಈ ರಿಪೋರ್ಟಿನಲ್ಲಿರುವುದೇನು, ಇರತಕ್ಕ ವಿದ್ಯಮಾನಗಳೇನು ಎಂಬುದನ್ನೆಲ್ಲಾ ಪರಿಶೀಲಿಸಿ ತಾವು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಇದಕ್ಕಾಗಿ ಸರ್ಕಾರದವರು ಎರಡು ದಿವಸ ಚರ್ಚೆಮಾಡುವುದಕ್ಕೆ ಅವಕಾಶಕೊಟ್ಟಿದೆ. ಆ ಸಂದರ್ಭದಲ್ಲಿ ಸುದೀರ್ಘವಾಗಿ ಚರ್ಚೆಮಾಡಿ ದೇಶಕ್ಕೆ ಒಳ್ಳೆಯದಾಗುವ ನಿರ್ಧಾರವನ್ನು ತೆಗೆದುಕೊಳ್ಳೋಣ ಎಂದು ಮಾತ್ರ ಹೇಳಿ ಮುಂದಿನ ವಿಷಯಕ್ಕೆ ಹೋಗುತ್ತೇನೆ.

2-30 P.M.

ಇನ್ನು ಎರಡನೆಯದಾಗಿ ಬಹಳ ಮುಖ್ಯವಾದಂಥ ವಿಚಾರವೆಂದರೆ—ಜಮೀನು ಸುಧಾರಣೆಗಳ ವಿಚಾರ. ಶ್ರೀಮನ್ಮಹಾರಾಜರವರು ಇದರ ಬಗ್ಗೆ ಸಹ ಪ್ರಸ್ತಾಪ ಮಾಡಿದ್ದಾರೆ.

ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಒಬ್ಬ ದೊಡ್ಡ ಜಮೀನ್ದಾರರು. ಈ ಬಗ್ಗೆ ಅವರೇ ಒಂದು ರೀತಿಯಲ್ಲಿ ವಾದ ಹೂಡಿದ್ದರೂ, ದೇಶದಲ್ಲಿರತಕ್ಕಂಥ ಜನರ ಪ್ರಾತಿನಿಧ್ಯವನ್ನು ಪಡೆದುಕೊಂಡು ಬಂದಿರತಕ್ಕಂಥ ಜನರ ವಾದ ಈ ಬಗ್ಗೆ ಇನ್ನೊಂದು ರೀತಿಯದಾಗಿದೆ. ಆ ವಿಚಾರವನ್ನು ಇಲ್ಲಿ ನಮ್ಮ ರಾಜಪ್ರಮುಖರು ಪ್ರಸ್ತಾಪಮಾಡಿದ್ದಾರೆ. ಅದೇನೆಂದರೆ—"To make the tiller as far as possible the owner of the land." ಈ ತತ್ವವನ್ನು ನಮ್ಮ ಶ್ರೀನಿವಾಸಯ್ಯಂಗಾರ್ ಅವರಾಗಲಿ ಅಥವಾ ಇತರೆ ಯಾರೇ ಆಗಲಿ ಮರೆಯುವುದಕ್ಕಾಗುವುದಿಲ್ಲ. ಶ್ರೀಮಾನ್ ಶ್ರೀನಿವಾಸಯ್ಯಂಗಾರ್ ಅವರು ಮಾತನಾಡುತ್ತ, 'ನಮ್ಮ ದೇಶದಲ್ಲಿ ಯಾರೂ ಅಂಥ ದೊಡ್ಡ ದೊಡ್ಡ ಜಮೀನ್ದಾರರಿರುವುದಿಲ್ಲ—ಆದುದರಿಂದ ಈ ಬದಲಾವಣೆಗಳು ಅನವಶ್ಯಕ' ಎಂದು ತಿಳಿಸಿದರು. ಆದರೆ ಹಾಗೆ ಅವರು ಹೇಳಿರತಕ್ಕಂಥ ವಾದವೂ ಕೂಡ ಒಂದು ರೀತಿ ನ್ಯಾಯವಾಗಿರುವಂತೆ ಕಂಡುಬಂದಾಗ್ಯೂ, ಈ ಬದಲಾವಣೆಗಳನ್ನು ಮಾತ್ರ ನಾವೆಲ್ಲರೂ ಕಾರ್ಯತಃ ತರಬೇಕಾದುದು ಅಗತ್ಯ ಮತ್ತು ಇದು ನಮ್ಮೆಲ್ಲರ ಕರ್ತವ್ಯ. ಯಾರು ಭೂಮಿಯನ್ನು ಉಳುತ್ತಾನೋ ಆತನೇ ಭೂಮಿಗೆ ಒಡೆಯನಾಗಿರಬೇಕೆಂದೂ, ಆತನಿಗೇ ಈ ಭೂಮಿಯ ಒಡೆತನ ಬರಬೇಕೆಂದು ಹೇಳುವುದು ಸ್ವಾಭಾವಿಕ, ಮತ್ತು ಇದು ನಿರ್ವಿವಾದವಾದ ಅಂಶ. ಆದರೆ ಈ ಬದಲಾವಣೆಗಳಿಂದ ಸ್ವಲ್ಪ ಜನರಿಗೆ ಅನಾನುಕೂಲವಾದರೂ ಪರವಾಗಿಲ್ಲ, ಇದನ್ನು ಕಾರ್ಯರೂಪಕ್ಕೆ ತರುವುದು ನಮ್ಮೆ

(ಶ್ರೀ ಕೆ. ಲಕ್ಕಪ್ಪ.)

ಲ್ಲರ ಆದ್ಯಕರ್ತವ್ಯವಾಗಿದೆ. ಆದರೆ ಶ್ರೀವರ್ಾ ಶ್ರೀನಿವಾಸಯ್ಯಂಗಾರ್ ಅವರು ಹೇಳಿರತಕ್ಕಂಥ ವಿಚಾರಗಳಲ್ಲಿ ಕೆಲವು ವಿಷಯಗಳನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗಿದೆ. ನಮ್ಮಲ್ಲಿರತಕ್ಕ ಜಮೀನುಗಳೆಲ್ಲ ಸಣ್ಣಸಣ್ಣ ಹಿಡುವಳಿಗಳಾಗಿ ವ್ಯವಸಾಯ ನಡೆಸುವುದಕ್ಕೆ ಆಗಲಿ ಅಥವಾ ರೈತರು ಒಂದು ಸುಖವಾದ ಜೀವನ ನಡೆಸುವುದಕ್ಕಾಗಲಿ ಆಗುವುದಿಲ್ಲ. ಜನರಿಗೆ ಒಂದು ತೃಪ್ತಿಕರವಾದ ರೀತಿಯಲ್ಲಿ ಜೀವನ ನಡೆಸುವುದಕ್ಕೆ ಅನುಕೂಲವಾಗಿರುವಂತೆಯೂ ಮತ್ತು ಅದರಿಂದ ಸಾಕಷ್ಟು ಆದಾಯ ಅವರಿಗೆ ಬರುವಂತೆಯೂ ಈ ಜಮೀನುಗಳು ಅವರಿಗೆ ಇರುವಹಾಗೆ ಮಾಡಬೇಕೆಂಬ ಅಂಶವನ್ನೂ ಸಹ ನಾವು ಗಮನದಲ್ಲಿಟ್ಟುಕೊಂಡು ಈ ವಿಷಯವನ್ನು ಆಲೋಚನೆ ಮಾಡಬೇಕಾಗಿದೆ. ಇದರ ಬಗ್ಗೆ ಈ ಸಭೆಯ ಮುಂದೆ ಒಂದು ಮಸೂದೆಯೇ ಬರುವುದರಲ್ಲಿದೆ. ಆದುದರಿಂದ ನಾನೀಗ ಇದರ ಪ್ರಸ್ತಾಪಕ್ಕೆ ಕೈ ಹಾಕುವುದಿಲ್ಲ.

ಅವರು ಇನ್ನೂ ಒಂದು ಬಹಳ ಮುಖ್ಯವಾದ ವಿಚಾರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈಗ ಪ್ರತಿವರ್ಷವೂ ನಮ್ಮ ಬಡ್ಜೆಟ್ ಖೋತಾ ಆಗುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಸಂಸ್ಥಾನದ ರಾಜಾದಾಯವನ್ನು ಹೆಚ್ಚುಮಾಡಿಕೊಳ್ಳುವುದರ ಸಲುವಾಗಿಯೇ ಈ ಕೋಲಾರ ಚಿನ್ನದ ಗಣಿ ಪ್ರದೇಶಗಳ ಕಂಪೆನಿಗಳ ವಿಚಾರವನ್ನು ಅವರು ಇಲ್ಲಿ ಪ್ರಸ್ತಾಪಿಸಿರುತ್ತಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ, ನಮ್ಮ ಸಂಸ್ಥಾನದ ಆದಾಯ ಬಹಳ ಕಡಮೆಯಾಗುತ್ತಿದೆ. ಮೊದಲು ಈ ಬಾಬಿನಿಂದ ನಮ್ಮ ಸರ್ಕಾರಕ್ಕೆ ಬಹಳ ಆದಾಯ ಬರುತ್ತಿತ್ತು. ಆದರೆ ಈಗ ಇದು ಕಮ್ಮಿ ಆಗಿದೆ. ಆದರೆ ನಮಗೆ ವರ್ಷ ವರ್ಷವೂ ಖೋತಾ ಬೀಳತಕ್ಕಂಥ ಮೊಬಲಗನ್ನು ಸರಿತೂಗಿಸಬೇಕಾಗಿದ್ದರೆ ನಾವು ಯಾವುದಾದರೂ ರೀತಿಯಲ್ಲಿ ಸರ್ಕಾರಕ್ಕೆ ಹೆಚ್ಚು ವರಮಾನ ಬರುವಂಥ ಮಾರ್ಗಗಳನ್ನು ಕಂಡುಹಿಡಿಯಲೇ ಬೇಕಾಗಿದೆ. ಆದರೆ ಈ ಕಂಪೆನಿಯಲ್ಲಿ—ಕಂಪೆನಿಯ ಮಾಲೀಕರಿಗಿಂತಲೂ ಹೆಚ್ಚಾಗಿ, ಅಲ್ಲಿ ದೊಡ್ಡ ಕೆಲಸದಲ್ಲಿರತಕ್ಕಂಥ ನಮ್ಮವರೇ ಆದ ಒಬ್ಬರು ಅಧಿಕಾರಿಗಳು ಆ ಕಂಪೆನಿಗಳಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ಬರುವಂಥ ಆದಾಯದ ಬಗ್ಗೆ ತುಂಬಾ ಅಡ್ಡಿಪಡಿಸುತ್ತಿದ್ದಾರೆಂಬುದನ್ನು ಕೇಳಿ ನಾನು ಪೂರಾ ವಿಷಾದವನ್ನೂ ವ್ಯಕ್ತಪಡಿಸಬೇಕಾಗಿದೆ. ಅವರಿಗೆ ಈ ದೇಶದ ಅಭ್ಯುದಯಕ್ಕಿಂತ ಮುಖ್ಯವಾದ ವಿಷಯ ಮತ್ತೊಂದಿಲ್ಲ. ಅವರು ಈ ಬಗ್ಗೆ ತಮ್ಮ ಸಹಕಾರ ನೀಡಿ ಸರ್ಕಾರದ ಆದಾಯವನ್ನು ಹೆಚ್ಚಿಸಿದ್ದಲ್ಲಿ ಅವರನ್ನು ನಾನು ಶ್ಲಾಘನೆ ಮಾಡುತ್ತಿದ್ದೆನು. ನಮ್ಮ ದೇಶದಲ್ಲಿ ರಾ ಫಿಲಮ್ಸ್ ಇಂಡಸ್ಟ್ರಿ ಬಗ್ಗೆ ಬಹಳ ದಿನಗಳಿಂದಲೂ ಪ್ರಯತ್ನ ನಡೆಯುತ್ತಿದೆ. ಆದರೆ ಆ ಪ್ರಶ್ನೆ ಇನ್ನೂ ಇತ್ಯರ್ಥಕ್ಕೆ ಬಂದಿಲ್ಲ. ಇದಕ್ಕೂ ಅದೇ ರೀತಿ ಒಬ್ಬ ಆ ಮಹನೀಯರು ಅಡ್ಡಿಪಡಿಸುತ್ತಿದ್ದಾರೆಂದು ಕೇಳುತ್ತಿದ್ದೇನೆ. ಆದರೆ ಅವರು ಹೀಗೆ ದೇಶದ ಅಭಿವೃದ್ಧಿ ವಿಷಯದಲ್ಲಿ ತಮ್ಮ ಗಮನ ಕೊಡದೆ ಅಡ್ಡಿಪಡಿಸುತ್ತಿರುವುದರ ಬಗ್ಗೆ ನಾನು ತುಂಬ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ.

ಇನ್ನು ಮೂರನೆಯದಾಗಿ ಜಿಲ್ಲಾ ಬೋರ್ಡುಗಳ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳ ಪರವಾಗಿ ಪ್ರಸ್ತಾಪ ಮಾಡಿದ್ದಾರೆ. ಈ ಹಿಂದೆ ಯಾವುದರ ಬಗ್ಗೆ ಒಂದು ದೊಡ್ಡ ಚರ್ಚೆಯೇ ಇಲ್ಲಿ ನಡೆದು ಹೋಗಿತ್ತೋ ಅದು ಈಗ ಕಾರ್ಯರೂಪಕ್ಕೆ ಬರುವ ಸನ್ನಿವೇಶ ಬಂದಿದೆ. ಜಿಲ್ಲಾ ಬೋರ್ಡುಗಳು ಬೇಗ ಕಾರ್ಯರೂಪಕ್ಕೆ ಬಂದು, ಕೆಲಸನಡೆಸುವಂತೆ ಮಾಡತಕ್ಕ ಬಗ್ಗೆ ದೇಶದಲ್ಲಿ ಚುನಾವಣೆಗಳು ನಡೆಯುವುದರ ಸಂಬಂಧವಾಗಿ ಒಂದು ಬಿಲ್ಲನ್ನು ಸರ್ಕಾರದವರು ಕ್ಷಿಪ್ರದಲ್ಲೇ ಈ ಸಭೆಯ ಮುಂದೆ ಇಟ್ಟು ಮಂಡಿಸತಕ್ಕವರಿದ್ದಾರೆ. ಈ ತಾಲ್ಲೂಕು ಡೆವಲಪ್‌ಮೆಂಟ್ ಸಮಿತಿಗಳನ್ನು ಮಾಡುವ ವಿಚಾರದಲ್ಲಿ ಕೆಲವರಿಂದ ಮಾತ್ರ ಆಕ್ಷೇಪಣೆಗಳಿರಬಹುದು ; ಆದರೆ ಅಂಥ ಆಕ್ಷೇಪಣೆಗಳಿರುವುದಕ್ಕೇನೂ ಅವಕಾಶವೇ ಇಲ್ಲವೆಂದು ಹೇಳುತ್ತೇನೆ. ಈ ಒಂದು ಏರ್ಪಾಡನ್ನು ಮಾಡದೇನೆ ಸರ್ಕಾರದವರು ಈ ವಿಚಾರವನ್ನು ಇಲ್ಲಿಯತನಕ ಮುಂದಕ್ಕೆ ತಳ್ಳಿಹಾಕುತ್ತಾ ಬಂದುದರ ಬಗ್ಗೆ ನನಗಂತೂ ತುಂಬಾ ವಿಷಾದವಿತ್ತು. ಆದರೆ ಈ ದಿವಸ ಅವರೇ ಮುಂದೆಬಂದು ಈ ಕೆಲಸವನ್ನು ಕೈಗೊಂಡಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಇದೊಂದು ಬಹಳ ಒಳ್ಳೆಯ ಯೋಜನೆ. ಇದರಿಂದ ಜನರ ಹಿತ ಸಾಧನೆಯಾಗಲು ತುಂಬ ಸಹಾಯಕವಾಗುತ್ತದೆ. ಇಲ್ಲಿಯವರೆಗೂ ತಾಲ್ಲೂಕಾ ಮಳಿಗೆಗಳಲ್ಲಿ ಅಲ್ಲಿನ ಕೆಲಸ ಕಾರ್ಯಗಳು ಸರಿಯಾಗಿ ಆಗುತ್ತಿರಲಿಲ್ಲ. ಅದಕ್ಕಾಗಿ ನಾನೀಗ ಒಂದು ನಿರ್ದಿಷ್ಟವಾದ ಮಾರ್ಗವನ್ನು ಅನುಸರಿಸಬೇಕಾಗಿದೆ. ಇದೊಂದು ಸ್ಟ್ಯಾಟ್ಯೂಟರಿ ಬಾಡಿ ಆಗಬೇಕಿತ್ತು. ಇದಕ್ಕೆ ಚುನಾವಣೆಗಳು ಆಗಲೇಬೇಕಾಗಿತ್ತು. ಆದರೆ ನಾಮಿನೇಷನ್ ಮೂಲಕ ಜನರನ್ನು ಚುನಾಯಿಸುವುದೇ ಸೂಕ್ತವೆಂದು ಕೆಲವರಿಂದ ಭಾವಿಸಲಾಗಿದೆ. ಚುನಾವಣೆಗಳಿಗೆ ವಿಶೇಷವಾದ ಖರ್ಚುವೆಚ್ಚಗಳು ಬಂದು ಹಣದ ಕೊರತೆ ಇನ್ನೂ ಅಧಿಕವಾಗತಕ್ಕಂಥ ಸಂಭವಗಳಿದ್ದುದರಿಂದ ಹೀಗೆ ಮಾಡಲಾಗಿದೆ. ಆ ಕಾರಣದಿಂದ ಈ ಬಗ್ಗೆ ಯಾರೂ ಏನೂ ಆಕ್ಷೇಪಣೆಗಳನ್ನೆತ್ತಬೇಕಾಗಿಲ್ಲ. ಆಫೀಸರುಗಳ ಸಮಿತಿಗಳನ್ನು ಏರ್ಪಾಡುಮಾಡಿ ಅವುಗಳಿಗೆ ಸೂಕ್ತ ದ್ರವ್ಯ ಸಹಾಯ ನೀಡಿದಲ್ಲಿ ಅವುಗಳ ಕೆಲಸ ಸುಗಮವಾಗಿ ನಡೆಯುವುದು. ಹೀಗೆ ಮಾಡಿದ್ದರಿಂದ ಆ ಕೆಲಸಗಳೆಲ್ಲಾ ಬಹಳ ಯಶಸ್ವಿಯಾಗಿ ನಡೆದು, ಆ ಪ್ರದೇಶಗಳು ಬೇಗ ಮುಂದೆ ಬರಲು ಇದರಿಂದ ಅವಕಾಶವಾಗುತ್ತದೆಯೆಂದು ಹೇಳಬಹುದು. ಇಂಥ ಒಂದು ದೊಡ್ಡ ಆಸೆಯನ್ನಿಟ್ಟುಕೊಂಡೇ ಸರ್ಕಾರದವರು ಹೀಗೆ ಗ್ರಾಮಾಂತರಗಳ ಅಭಿವೃದ್ಧಿಗಳ ವಿಷಯದಲ್ಲಿ ಸಮಿತಿಗಳನ್ನು ರಚನೆ ಮಾಡಬೇಕೆಂದು ಹೇಳಿದ್ದಾರೆ. ಹೀಗೆ ಸಮಿತಿಗಳ ರಚನೆಯ ವಿಷಯವಾಗಿ ತಿಳಿಸುತ್ತಾ ಅವರು ಮುಂದೆ ಮತ್ತೊಂದು ಅಭಿಪ್ರಾಯವನ್ನು ಹೊರಚಿಮ್ಮಿಸುವ ಶಬ್ದಗಳನ್ನು ಹೇಳಿದ್ದಾರೆ. ಅದೇನೆಂದರೆ : '' to all interests concerned '' ಎಂದು ಹೇಳಿದ್ದಾರೆ. ಹೀಗೆ ಅವರು ಅಪ್ಪಣೆ ಕೊಡಿಸಿರುವುದರಿಂದ ಇದರಲ್ಲಿ ಎಲ್ಲಾ ಪಂಗಡಗಳವರಿಗೂ ಸಾಕಷ್ಟು ಅವಕಾಶ ಸಿಕ್ಕುವಂತಾಗುವುದಲ್ಲದೆ, ಇದರಲ್ಲಿ ಯಾರೂ ಏನೂ ಆಕ್ಷೇಪಣೆ ಎತ್ತಲು ಅವಕಾಶವೇ ಇರುವುದಿಲ್ಲವೆಂದು ಸೂಚಿಸುತ್ತೇನೆ.

ಇನ್ನು ಕೊನೆಯದಾಗಿ, ಹೊಸತೆರಿಗೆಗಳನ್ನು ಹಾಕತಕ್ಕಂಥ ಅವಶ್ಯಕತೆಯಿದೆಯೆಂದು ಪ್ರಸ್ತಾಪ ಮಾಡಿದ್ದಾರೆ. ನಾವು ಒಂದು ಸುಖೀರಾಜ್ಯವನ್ನು ನಿರ್ಮಾಣ ಮಾಡಬೇಕೆಂದು ಸಂಕಲ್ಪ ಮಾಡಿಕೊಂಡಿರುವಾಗ ನಾವು ನಮ್ಮ ಹಣ ಕಾಸಿನ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಳ್ಳಲೇಬೇಕಾಗಿದೆ. ಹಾಗೆ ಉತ್ತಮಪಡಿಸಿಕೊಳ್ಳದೆ ಹೋದರೆ ನಾವು ಒಂದು ಬಲಯುತ ರಾಜ್ಯವನ್ನು ಕಟ್ಟುವುದಕ್ಕಾಗುವುದಿಲ್ಲವೆಂಬುದು ನಿರ್ವಿವಾದವಾದ ವಿಚಾರ. ಆದರೆ ಹಾಗೆ ತೆರಿಗೆ ವಿಧಿಸುವಾಗ ಯಾವ ರೂಪವಾಗಿ ಯಾರು ಯಾರಿಗೆ ಎಷ್ಟೆಷ್ಟು ತೆರಿಗೆ

ಹಾಕಬಹುದು ಎಂಬುದನ್ನೆಲ್ಲಾ ಪರಿಶೀಲನೆ ಮಾಡಬೇಕಾಗುತ್ತದೆ. ಅಷ್ಟು ಶಿವಾಯಿ ಹೊಸತೆರಿಗೆಗಳನ್ನು ಹಾಕುವುದೇ ಬೇಡ ಎಂದು ಹೇಳುವುದು ಸರಿಯಲ್ಲ. ಆದರೆ ಈ ತೆರಿಗೆಗಳನ್ನು ಹಾಕತಕ್ಕ ವಿಚಾರದಲ್ಲಿ ಅವಿದ್ಯಾವಂತರಾಗಿ ಜೀವನೋಪಾಯಕ್ಕಾಗಿ ಒದ್ದಾಡುತ್ತಿರುವ ಬಡರೈತನ ಮೇಲೆ ಸರ್ಕಾರ ಕಣ್ಣಿಡದೆ ದಿನೇ ದಿನೇ ಹಣವನ್ನು ಗಳಿಸಿ ಶ್ರೀಮಂತರಾಗತಕ್ಕವರ ಮೇಲೆ ಕೈ ಹಾಕಿ; ಆ ಬಡರೈತರ ಮೇಲೆ ಕೈಹಾಕಬೇಡಿ ಎಂದು ಹೇಳುತ್ತೇನೆ. ನಮ್ಮ ಮುಖ್ಯ ಉದ್ದೇಶವಾದರೋ ಆ ಬಡರೈತನ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಬೇಕು ಎನ್ನತಕ್ಕದ್ದೇ ಆಗಿರುವಾಗ, ಅವರನ್ನು ಇನ್ನೂ ಹೆಚ್ಚಿನ ತೆರಿಗೆಗೆ ಗುರಿಮಾಡಿ, ಅವರನ್ನು ಇನ್ನೂ ಹೆಚ್ಚಿನ ತೊಂದರೆಗೆ ಗುರಿಪಡಿಸುವುದು ಸರಿಯಲ್ಲ. ಇದಕ್ಕೇ ಬೇಕಾಗಿದ್ದರೆ ಸರ್ಕಾರ ಒಂದು ಟ್ಯಾಕ್ಸ್ ಸಮಿತಿ ಎಂದು ಒಂದು ಸಮಿತಿಯನ್ನು ಏರ್ಪಾಡು ಮಾಡಲಿ. ಅವರು ಈ ಬಗ್ಗೆ ಯಾವುದು ಸಾಧಕ ಯಾವುದು ಬಾಧಕ ಎಂಬುದನ್ನೆಲ್ಲಾ ಕಂಡುಹಿಡಿದು ಸೂಕ್ತ ದಾರಿಗಳನ್ನು ಮಾಡಲಿ. ಹೀಗೆ ಮಾಡಿದರೆ ರೈತನಿಗೂ ಮತ್ತು ದೇಶಕ್ಕೂ ಒಳ್ಳೆಯದಾಗುತ್ತದೆಯೆಂಬುದಾಗಿ ನಾನು ಈ ಒಂದು ಸೂಚನೆಯನ್ನು ಸರ್ಕಾರದವರಿಗೆ ಕೊಟ್ಟು ನನಗೆ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರತಕ್ಕಂಥ ವಿಚಾರಗಳ ಬಗ್ಗೆ ಇಷ್ಟು ಹೊತ್ತು ಚರ್ಚೆ ಮಾಡುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲು ಪೇಟೆ-ಹೆಗ್ಗಡದೇವನಕೋಟೆ).—ಸ್ವಾಮಿ . . .

ಶ್ರೀ ಜೆ. ಮಹಮ್ಮದ್ ಇಮಾಂ.—ಸ್ವಾಮಿ, ಈಗ ಮಾತನಾಡಲು ನಿಂತಿರುವಂಥ ಸದಸ್ಯರು ಯಾವ ಪಾರ್ಟಿಗೆ ಸೇರಿದ್ದಾರೆ?

**Sri K. HANUMANTHAIYA** (Chief Minister).—Sir, the popularity of the Congress Party is growing at the expense of the Leader of the Opposition. (*Laughter.*)

**Sri J. MOHAMED IMAM.**—I feel that my adherents are totally abducted (*Laughter.*)

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸ್ವಾಮಿ, ನಮ್ಮ ಮಹಾಸ್ವಾಮಿಯವರು 19ನೆಯ ತಾರೀಖು ನಮ್ಮ ವಿಧಾನ ಸಭೆಯ ಹಾಗೂ ವಿಧಾನ ಪರಿಷತ್ತಿನ ಜಂಟಿ ಸಭೆಗಳನ್ನುದ್ದೇಶಿಸಿ ಅಪ್ಪಣೆ ಕೊಡಿಸಿರತಕ್ಕ ಅವರ ಭಾಷಣದ ವಿಚಾರದಲ್ಲಿ ಈ ದಿವಸ ನಮ್ಮ ಪಕ್ಷದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಇಟ್ಟಿರುವ ಅಭಿನಂದನಾ ನಿರ್ಣಯದ ಬಗ್ಗೆ ನನ್ನ ಹೃತ್ಪೂರ್ವಕ ಬೆಂಬಲನೀಡುತ್ತಾ ನಾನು ಕೆಲವು ವಿಷಯಗಳನ್ನು ಸೂಚಿಸಬಯಸುತ್ತೇನೆ.

ಅವರು ಮೊದಲನೆಯದಾಗಿ ತಮ್ಮ ಭಾಷಣದಲ್ಲಿ ರಾಜ್ಯಗಳ ಪುನರ್ವಿಂಗಡಣೆಯ ಮಹತ್ವದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ರಾಜ್ಯಗಳ ಪುನರ್ವಿಂಗಡನೆ ಅಗತ್ಯ ಇದೆಯೇ ಅಥವಾ ಇಲ್ಲವೇ ಅನ್ನುವ ವಿಚಾರದಲ್ಲಿ ಶ್ರೀಮನ್ಮಹಾರಾಜರವರು ಕೇವಲ ನಮ್ಮ ದೇಶ ಒಂದನ್ನೇ ಅಲ್ಲದೆ ಹೊರಗಡೆಯ ವಿಚಾರಗಳನ್ನೂ ಸಹ ತಮ್ಮ ಗಣನೆಗೆ ತೆಗೆದುಕೊಂಡು ಇದನ್ನು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ನಾನು ಮತ್ತೊಂದು ಅಂಶವನ್ನು ಹೇಳುವುದಾದರೆ—ನಮ್ಮ ಮೈಸೂರು ಕಾಂಗ್ರೆಸ್ಸಿನ ಒಂದು ಅಂಗ ರಚನೆಯ ಮೂಲದಲ್ಲೇ-ದೇಶದಲ್ಲಿ ನಡೆದ ಕಳೆದ ಮಹಾ ಚುನಾವಣೆಗಳ ಕಾಲದಲ್ಲಿ ಜನರಿಂದ ಚುನಾಯಿಸಲ್ಪಟ್ಟು ಬರಬೇಕಾಗಿದ್ದಂಥ ಕಾಲದಲ್ಲಿ ಇವರು ತಮ್ಮ ಚುನಾವಣೆಗಳ ಉದ್ದೇಶಗಳಲ್ಲಿ ಈ ಅಖಂಡ ಕರ್ಣಾಟಕ ರಾಜ್ಯ ನಿರ್ಮಾಣದ ವಿಷಯವನ್ನೂ ಸಹ ಪ್ರತಿಪಾದನೆ ಮಾಡಿದ್ದಾರೆ. ಹಾಗೆ ನಡೆದ ಚುನಾವಣೆಗಳಲ್ಲಿ ಜನರು ಈ ಅಭಿಪ್ರಾಯಕ್ಕೆ ಮನ್ನಣೆ ಇತ್ತುದರಿಂದಲೇ ಅವರು ಚುನಾವಣೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಸ್ಪರ್ಧಿಸಿ ಜಯಶೀಲರಾಗಿ ಬರಲು ಅವಕಾಶವಾಯಿತೆಂದು ಹೇಳುವಾಗ, ಇನ್ನು ಜನತೆಯ ಅಭಿಪ್ರಾಯ ಈ ಬಗ್ಗೆ ಯಾವ ರೀತಿಯಿದೆ ಎಂಬುದನ್ನು ತಿಳಿಸುವುದು ಅನವಶ್ಯಕ. ಇದರ ಅವಶ್ಯಕತೆಯನ್ನು ಎಲ್ಲರೂ ಒಪ್ಪಿಕೊಂಡೇ ಇದ್ದಾರೆ. ಆದರೆ ಇದೇ ವಿಚಾರವಾಗಿ ಚರ್ಚೆನಡೆಸಲು ಈ ಸಭೆಯು ಮುಂದೆ ಒಂದು ಗೊತ್ತಾದ ಕಾಲಾವಕಾಶವನ್ನು ನಿರ್ಧರಿಸಿರುವುದರಿಂದ ಆಗ ನಾನು ಇದರ ಅಗತ್ಯವೇನು, ಮತ್ತು ಇದರ ಸೂಕ್ತಾ ಸೂಕ್ತತೆಗಳೇನೆಂಬ ಬಗ್ಗೆ ನನ್ನ ಅಭಿಪ್ರಾಯಗಳನ್ನು ಸೂಚಿಸಬಯಸುತ್ತೇನೆ.

ಇನ್ನು ವಿದ್ಯಾಭ್ಯಾಸ ಸುಧಾರಣೆಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಹಿಂದಿನ ವಿದ್ಯಾಭ್ಯಾಸ ಪದ್ಧತಿ ನಮ್ಮ ದೇಶದ ಅಭಿವೃದ್ಧಿಗೆ ಸಾಧಕವಾಗಿಲ್ಲವೆಂಬುದನ್ನು ಮನಗಂಡು ಬೇರೆ ಹೊಸ ವಿದ್ಯಾಭ್ಯಾಸ ಕ್ರಮವನ್ನು ಅಳವಡಿಸಬೇಕು, ಅನುಷ್ಠಾನಕ್ಕೆ ತರಬೇಕು ಎಂದು ನಮ್ಮ ಸರ್ಕಾರದವರು ಮೊನ್ನೆ ಸರ್ವೋದಯದ ದಿನ ವಿದ್ಯಾ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ. ಹೀಗೆ ಜಾರಿಗೆ ತರುವಾಗ, ಇದು ಈಗಿನ ಸ್ಥಿತಿಯಲ್ಲಿ ಎಷ್ಟು ಮಟ್ಟಿಗೆ ಸಾಧುವಾಗಿದೆ ಎಂಬುದನ್ನು ವಿಮರ್ಶೆಮಾಡುವುದು ಸೂಕ್ತವೆಂದು ಭಾವಿಸುತ್ತೇನೆ. ಈಗ ಪ್ರೈಮರಿ ವಿದ್ಯಾಭ್ಯಾಸ ಎಂಟು ವರ್ಷ, ಸೆಕೆಂಡರಿ ವಿದ್ಯಾಭ್ಯಾಸ ನಾಲ್ಕು ವರ್ಷ ಮತ್ತು ಕಾಲೇಜು ವಿದ್ಯಾಭ್ಯಾಸ ಮೂರು ವರ್ಷವೆಂದು ವಿಂಗಡಣೆ ಮಾಡಿದ್ದಾರೆ. ಹಿಂದೆ ಎಸ್. ಎಸ್. ಎಲ್. ಸಿ. ಪಾಸುಮಾಡಬೇಕಾದರೆ ಹನ್ನೊಂದು ವರ್ಷಕಾಲ ಮಾತ್ರ ವ್ಯಾಸಂಗ ಮಾಡಬೇಕಾಗಿತ್ತು. ಈಗಿನ ಕ್ರಮದ ಪ್ರಕಾರ ಇದು ಒಂದು ವರ್ಷ ಜಾಸ್ತಿಯಾಗಿ ಹನ್ನೆರಡು ವರ್ಷ ಓದಬೇಕಾಗಿದೆ. ವಿದ್ಯಾಭ್ಯಾಸದ ಕ್ರಮವನ್ನು ಬದಲಾವಣೆ ಮಾಡಿ ವಿದ್ಯಾರ್ಥಿದೆಶೆಯಲ್ಲಿಯೇ ವಿದ್ಯಾರ್ಥಿಯು ತನ್ನ ಮುಂದಿನ ಜೀವನವನ್ನು ರೂಪಿಸಿಕೊಳ್ಳಲು ಸಾಧಕವಾಗುವ ರೀತಿಯಲ್ಲಿ, ವಿದ್ಯಾಭ್ಯಾಸ ಕ್ರಮವನ್ನು ರೂಪಿಸಬೇಕೆಂಬ ತತ್ವವನ್ನು ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ಅಳವಡಿಸಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳುವ ಹಾಗೆ, ವಿದ್ಯಾರ್ಥಿಯು ತನ್ನ ಜೀವನವನ್ನು ರೂಪಿಸಿಕೊಳ್ಳುವ ಕಾಲದಲ್ಲಿ, ಎಂದರೆ, ಸೆಕೆಂಡರಿ ವಿದ್ಯಾಭ್ಯಾಸದ ಕಾಲದಲ್ಲಿ, ಅವನಿಗೆ ಸರಿಯಾದ ಶಿಕ್ಷಣವನ್ನು ಕೊಡಬೇಕೆಂದು ಹೇಳುತ್ತಾರೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ, ಅಂಥಾ ಒಂದು ಕ್ರಮವನ್ನು ದೇಶಾದ್ಯಂತ ಆಚರಣೆಗೆ ತರುವುದಕ್ಕೆ ಸಾಧ್ಯವೆ ಎಂಬ ಪ್ರಶ್ನೆ ಬರುತ್ತದೆ. ಮತ್ತು ಬೇರೆ ಬೇರೆ ಕಡೆಗಳಲ್ಲಿರುವ ಸನ್ನಿವೇಶಗಳನ್ನು ಉಪಯೋಗಿಸಿಕೊಂಡು ಕೆಲಸ ಮಾಡುವುದು ಸಾಧ್ಯವೆ ಎಂಬುದು ನನ್ನ ಮನಸ್ಸಿನಲ್ಲಿದೆ. ಅಲ್ಲದೆ ಇದಕ್ಕೆ ಬೇಕಾದ ಹಣವನ್ನೊದಗಿಸುವುದು ಸಾಧ್ಯವೆ ಎಂಬುದನ್ನೂ ಪರಿಶೀಲಿಸಬೇಕು. ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಹೇಳಿದ ಹಾಗೆ, ಇದಕ್ಕೆ ಅಗತ್ಯವಾದ ಪುಸ್ತಕಗಳನ್ನು ಇನ್ನೂ ಪ್ರಕಟಣೆ ಮಾಡಿಲ್ಲ. ಹಳೆಯ ಪುಸ್ತಕಗಳನ್ನೇ ಕೊಂಡುಕೊಳ್ಳಬೇಕೆ ಬೇಡವೆ ಎಂಬು

(ಶ್ರೀ ಎಚ್. ಕೆ. ಶಿವರುದ್ರಪ್ಪ.)

ಪ್ರಶ್ನೆಯೂ ವಿದ್ಯಾರ್ಥಿಗಳಲ್ಲಿ ಬಂದಿದೆ. ಆದ್ದರಿಂದ ಅಗತ್ಯವಾದ ಸಲಕರಣೆಗಳನ್ನು ಸರ್ಕಾರದವರು ಒದಗಿಸಿಕೊಟ್ಟು ಬೇಗ ಈ ತೊಂದರೆಯನ್ನು ತಪ್ಪಿಸುವುದು ಕರ್ತವ್ಯವೆಂದು ಭಾವಿಸುತ್ತೇನೆ.

ಜಮೀನು ಸುಧಾರಣೆಯ ಕಾರ್ಯದಲ್ಲಿ ನಾವು ತೊಡಗಿದ್ದೇವೆ. ಸ್ವಾಮಿ, ಜಮೀನು ಸುಧಾರಣೆ ಎನ್ನುವಾಗ, ಒಂದು ceiling limit ಗೊತ್ತುಮಾಡಬೇಕೆಂಬ ವಾದವಿದೆ. ಉಳುವವರೇ ಮಾಲೀಕರಾಗಬೇಕೆಂಬ ವಾದವನ್ನು ಮಹಾಸ್ವಾಮಿಯವರು ಹೇಳಿದ್ದಾರೆ. ಉಳುವವನು ಮಾಲೀಕನಾಗಬೇಕೆಂದು ಹೇಳಿದ ಮಾತ್ರಕ್ಕೇ ಜಮೀನನ್ನು ಹಂಚಬೇಕೆಂಬ ವಾದ ಮಹಾಸ್ವಾಮಿಯವರ ಭಾಷಣದಲ್ಲಿಲ್ಲವೆಂಬುದು ನನ್ನ ಅಭಿಪ್ರಾಯ. ಯಾರು ಉಳುವುದಕ್ಕೆ ಅಸಮರ್ಥನಾಗುತ್ತಾನೋ ಅಂಥವನಿಂದ ಜಮೀನನ್ನು ಕಿತ್ತು ಬೇರೆಯವರಿಗೆ, ಉಳುವವನಿಗೆ ಕೊಡಬೇಕೆಂದು ಕಾನೂನು ಇರುವಾಗ, ನಮ್ಮಲ್ಲಿ ಜಮೀನುಳ್ಳವರಿಂದ ಕಿತ್ತು ಇತರರಿಗೆ ಕೊಡುವುದು ಮಹಾಸ್ವಾಮಿಯವರ ಅಭಿಪ್ರಾಯವಲ್ಲವೆಂದು ನನ್ನ ಭಾವನೆ. ಆ ರೀತಿ ಜಮೀನನ್ನು ಹಂಚಿಕೊಡಬೇಕೆಂಬ ವಾದವಿದ್ದರೂ, ಇದನ್ನು ನಮ್ಮಲ್ಲಿ ಮಾಡತಕ್ಕ ಕಾಲ ಇದಲ್ಲ. ಏಕೆಂದರೆ, ಸರ್ಕಾರದಲ್ಲೇ ಬೇಕಾದಷ್ಟು ಜಮೀನಿದೆ. ಈ ಜಮೀನುಗಳನ್ನು ರೈತರಿಗೆ ಹಂಚಿಕೊಟ್ಟು, ಇದೂ ಸಾಲದೆ ಬಂದಾಗ ಯಾರಲ್ಲಿ ಹೆಚ್ಚು ಜಮೀನಿದೆಯೋ ಅವರಿಂದ ಕಿತ್ತುಕೊಳ್ಳಬಹುದು. ಹಾಗಿಲ್ಲದೆ ಈಗ ಸರ್ಕಾರದ ವಶದಲ್ಲಿರುವ ಜಮೀನನ್ನು ಹಾಗೆಯೇ ಉಳಿಸಿಕೊಂಡು, ಜಮೀನಿರುವವನಿಂದ ಜಮೀನನ್ನು ಕಿತ್ತು ಬೇರೆಯವರಿಗೆ ಕೊಡುವುದು ನ್ಯಾಯವಲ್ಲ. ಸರ್ಕಾರದಲ್ಲಿರುವ ಜಮೀನನ್ನು ಹಂಚಿ, ಸಾಲದೆ ಬಂದರೆ ಆ ಮೇಲೆ ಈ ರೀತಿ ಮಾಡಲಿ, ಅದರಲ್ಲಿ ನನ್ನ ಭಿನ್ನಾಭಿಪ್ರಾಯವಿಲ್ಲ. ಈದಿನ ಭೂಸುಧಾರಣೆ ಎಂದರೆ ನಾನು ಅಥವಾ ನನ್ನ ತಂದೆ ಸ್ವಲ್ಪ ಜಮೀನನ್ನು ಸಂಪಾದನೆ ಮಾಡಿಟ್ಟಿರಬಹುದು. ಅವರು ವಿದ್ಯಾವಂತರಲ್ಲ, ಆದರೂ ಸ್ವಶಕ್ತಿಯಿಂದ ಜಮೀನನ್ನು ಸಂಪಾದನೆ ಮಾಡಿದ್ದಾರೆ. ಇನ್ನೊಬ್ಬನಿಗೆ ಜಮೀನಿಲ್ಲ, ಬೇರೆ ವಿದ್ಯಾಭ್ಯಾಸದಿಂದ ಅಥವಾ ಬೇರೆ ಕಸಬಿನಿಂದ ಬೇಕಾದಷ್ಟು ಹಣ ಸಂಪಾದಿಸಿದ್ದಾನೆ. ಹೀಗಿರುವಾಗ, ನಮ್ಮ ತಂದೆ ಜಮೀನು ಸಂಪಾದನೆ ಮಾಡಿದ್ದು ಮಾತ್ರ ತಪ್ಪೆ! ಎಂಬುದನ್ನು ಯೋಚನೆಮಾಡಬೇಕು. ಹಾಗೊಂದು ವೇಳೆ ಹಂಚಬೇಕಾದರೆ, ಎಲ್ಲಾ ಮೂಲೆಗಳನ್ನೂ ಶೋಧಿಸಿ, ಜಮೀನೊಂದೇ ಅಲ್ಲ, ಬ್ಯಾಂಕುಗಳಲ್ಲಿಟ್ಟಿರುವ ಹಣ, ಇತರ ಆಸ್ತಿಪಾಸ್ತಿ ಎಲ್ಲವನ್ನೂ ಎಲ್ಲರಿಗೂ ಸಮನಾಗಿ ಹಂಚಿಕೊಡುವುದಾದರೆ, ಯಾವ ಜಮೀನ್ದಾರನೂ ಅದಕ್ಕೆ ಅಡ್ಡಿ ಬರುವುದಿಲ್ಲ. ಬೇರೆಯವರನ್ನೆಲ್ಲಾ ಹಾಗೆಯೇ ಬಿಟ್ಟು ಈ ಹೊತ್ತು ಜಮೀನುಳ್ಳ ರೈತನ ಮೇಲೆ ಇಂಥ ಗದಾ ಪ್ರಹಾರವನ್ನು ಹಾಕುವುದಾದರೆ, ಇದರಿಂದ ದೇಶದಲ್ಲಿ ಶಾಂತಿ ಇರುವುದಿಲ್ಲ, ಕ್ರಾಂತಿಯಾಗಬಹುದೆಂದು ನನ್ನ ಅಭಿಪ್ರಾಯ. ಅಂದ ಮಾತ್ರಕ್ಕೇ ಬಡವರು ಉದ್ಧಾರವಾಗಬಾರದೆಂದು ನನ್ನ ಅಭಿಪ್ರಾಯವಲ್ಲ. ಮಾಡುವುದಾದರೆ, ಎಲ್ಲವನ್ನೂ ಒಂದೇ ಸಮನಾಗಿ, ಒಂದೇ ಕಾಲದಲ್ಲಿ ಮಾಡಿದರೆ, ಆಗ ಸ್ವಾಗತಿಸುತ್ತೇವೆ; ಈ ವಿಚಾರದಲ್ಲಿ. ಭಿನ್ನಾಭಿಪ್ರಾಯ ಬರಲಾರದೆಂದು ನಾನು ಭಾವಿಸುತ್ತೇನೆ

ಮಹಾಸ್ವಾಮಿಯವರು ತಮ್ಮ ಭಾಷಣದಲ್ಲಿ ಜಿಲ್ಲಾ ಬೋರ್ಡುಗಳ ಮತ್ತು ತಾಲ್ಲೂಕು ಅಭಿವೃದ್ಧಿ ಸಮಿತಿಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಹಿಂದೆ ಜಿಲ್ಲಾ ಬೋರ್ಡುಗಳು ಕೆಲಸ ಮಾಡಿಕೊಂಡು ಬರುತ್ತಿದ್ದವು. ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಬಾರದೆಂದು ಅನೇಕರು ಹೇಳಿದರು. ಆದರೂ ಇದನ್ನು ಪರಿಶೀಲಿಸಲು ಒಂದು ತಜ್ಞರ ಸಮಿತಿಯನ್ನು ನೇಮಕ ಮಾಡಿದರು. ಕೊನೆಗೆ ಜಿಲ್ಲಾ ಬೋರ್ಡುಗಳಿರಬೇಕೆಂದು ಅಭಿಪ್ರಾಯಪಟ್ಟು ಮತ್ತೆ ಅವುಗಳನ್ನು ಸ್ಥಾಪನೆ ಮಾಡುವುದಕ್ಕೆ ಸರ್ಕಾರದವರು ತೊಡಗಿದ್ದಾರೆ. ಶ್ರೀ ವರ್ಮಾ ಲಕ್ಕಪ್ಪನವರು ಹೇಳಿದ ಹಾಗೆ, ಈ ಸಂಸ್ಥೆಗಳನ್ನು ಪುನಃ ಸ್ಥಾಪನೆ ಮಾಡಬೇಕೆಂದು ಮಾಡಿದುದಕ್ಕಾಗಿ ಸರ್ಕಾರದವರು ನಿಜವಾಗಿ ಅಭಿನಂದನೆಗೆ ಅರ್ಹರು. ಈಗಾಗಲೇ ಜಿಲ್ಲಾ ಬೋರ್ಡುಗಳನ್ನು ರದ್ದುಮಾಡಿದ್ದರಿಂದ ಅನೇಕ ಕೆಲಸಕಾರ್ಯಗಳು ನಡೆಯದೆ ನಿಂತುಹೋಗಿವೆ. ಕೂಡಲೇ ಜಿಲ್ಲಾ ಬೋರ್ಡುಗಳನ್ನು ಜಾರಿಗೆ ತಂದು ಹಿಂದಿನಂತೆ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ತಾಲ್ಲೂಕು ಬೋರ್ಡುಗಳು ಅಥವಾ ಸಮಿತಿಗಳನ್ನು ಕೆಲವರು ಬೇಕೆಂದೂ ಮತ್ತೆ ಕೆಲವರು ಬೇಡವೆಂದೂ ಹೇಳುತ್ತಾರೆ. ಒಂದು ವೇಳೆ ಮಾಡಿದರೂ ನಾಮಿನೇಷನ್ ಪದ್ಧತಿ ಬೇಡವೆಂದು ಹೇಳುತ್ತಾರೆ. ತಾಲ್ಲೂಕು ಬೋರ್ಡಾಗಲಿ ಜಿಲ್ಲಾ ಬೋರ್ಡಾಗಲಿ ಈಗಿನ ಪ್ರಜಾಪ್ರಭುತ್ವದಲ್ಲಿ, ರಾಜಸೂತ್ರಗಳನ್ನು ಜನರೇ ವಹಿಸಿಕೊಂಡು ಆಡಳಿತ ನಡೆಸುವ ಪದ್ಧತಿ ಇರುವಾಗ ಈ ಸ್ಥಳೀಯ ಸಂಸ್ಥೆಗಳ ಮೂಲಕ ತರಪೇತು ಹೊಂದಲು ಇವು ಸಾಧನವಾಗಿವೆ. ಇಂಥ ಸಂಸ್ಥೆಗಳಲ್ಲಿ ಜನರನ್ನು ತಂದು, ದೇಶ ಸೇವೆ ಮಾಡುವುದಕ್ಕೆ ಅವಕಾಶ ಮಾಡುವುದು ಸೂಕ್ತ. ಈ ಸಂಸ್ಥೆಗಳು ಜನರನ್ನು ರಾಜ್ಯಭಾರ ಮಾಡುವುದಕ್ಕೆ ಆಗತ್ಯವಾದ ಶಿಕ್ಷಣ ಕೊಡತಕ್ಕ ಕೇಂದ್ರಗಳು. ಆದಕಾರಣ ಇವುಗಳನ್ನು ಜಾಗ್ರತೆ ರಚನೆ ಮಾಡಬೇಕೆಂದು ಸರ್ಕಾರದಲ್ಲಿ ನಿವೇದಿಸುತ್ತೇನೆ.

ಪಾಂಚವಾರ್ಷಿಕ ಯೋಜನೆಯ ಸಂಬಂಧದಲ್ಲಿ ತೆರಿಗೆಗಳನ್ನು ಹಾಕಬೇಕೆಂದು ಮಹಾಸ್ವಾಮಿಯವರು ತಮ್ಮ ಭಾಷಣದಲ್ಲಿ ಅಪ್ಪಣೆ ಕೊಡಿಸಿದ್ದಾರೆ. ಹೆಚ್ಚು ಸೌಲಭ್ಯಗಳನ್ನು ಹೊಂದಬೇಕಾದರೆ ಜನರು ಹೆಚ್ಚಿನ ಹಣವನ್ನು ಸರ್ಕಾರಕ್ಕೆ ಕೊಡುವುದಕ್ಕೆ ಸಿದ್ಧರಾಗಿರಬೇಕು. ಹಣಕೊಡದೆ ಪ್ರಗತಿಯಾಗಬೇಕು, ಹೆಚ್ಚು ಅನುಕೂಲ ಕೊಡಬೇಕು ಎಂದು ಕೇಳುವುದು ಸರಿಯಲ್ಲ. ಆದರೆ ಕಂದಾಯ ಹಾಕಬೇಕೆಂದು ಹೇಳಿದ ಮಾತ್ರಕ್ಕೇ, ಸುಮ್ಮನೆ ಯಾವ ಒಂದು ಯೋಜನೆಯನ್ನೂ ಮಾಡದೆ ಹೆಚ್ಚು ಕಂದಾಯ ಹಾಕುವುದಕ್ಕೆ ಹೋಗಬಾರದು. ಯಾರಮೇಲೆ ತೆರಿಗೆಹಾಕಬೇಕು, ಯಾರಮೇಲೆ ಹಾಕಬಾರದು ಎಂಬುದನ್ನು ಯೋಚನೆಮಾಡಿ, ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು, ತೆರಿಗೆಗಳನ್ನು ಹೊರಬಲ್ಲವರ ಮೇಲೆ ಮಾತ್ರ ಹಾಕಬೇಕೇ ವಿನಾ ಸಿಕ್ಕಿದಹಾಗೆ ಕಂದಾಯ ಹಾಕುವುದಕ್ಕೆ ಹೋಗಬಾರದು. ಹಿಂದೆ ಯುದ್ಧಕ್ಕೆ ಪೂರ್ವದಲ್ಲಿ ಧಾರಣೆವಾಸಿಗಳು ಕಡಿಮೆಯಿದ್ದು, ಅಂದರೆ ಬತ್ತ, ರಾಗಿ, ಜೋಳ ಮುಂತಾದ ಧಾನ್ಯಗಳ ಬೆಲೆ ಪಲ್ಲಕ್ಕೆ ಮೂರು-ಮೂರೂವರೆ ರೂಪಾಯಿ ಇದ್ದಕಾಲದಲ್ಲಿ ಸರ್ಕಾರದವರು ಬೆಳೆದವರಿಗೆ ಯಾವ ಸಹಾಯವನ್ನೂ ಮಾಡಲಿಲ್ಲ. ಅವರು ಸಾಲ ಸೋಲಗಳನ್ನು ಮಾಡಿಕೊಂಡು ಕಷ್ಟಪಟ್ಟರು. ಯುದ್ಧ ಪ್ರಾರಂಭವಾಯಿತು. ಆಮೇಲೆ ಬೆಲೆಗಳು ದಿನದಿನಕ್ಕೆ ಹೆಚ್ಚುತ್ತಾ ಹೋದವು. ಅವರಿಗೆ ಹೆಚ್ಚು ಕಾಸು ಸಿಕ್ಕುವ ಕಾಲದಲ್ಲಿ ಸರ್ಕಾರದವರು ಕಂಟ್ರೋಲ್ ಜಾರಿಗೆ ತಂದು ರೈತರಿಗೆ ಹೆಚ್ಚು ಹಣ ದೊರೆಯಲು ಅಡ್ಡಿಯಾದರು. ಈ ಹೊತ್ತು ಧಾರಣೆವಾಸಿಗಳು ಇಳಿಯುತ್ತಾ ರೈತರು ಕೆಳಕ್ಕಿಳಿಯುತ್ತಿರುವಾಗ, ಅವರು ಕೊಳ್ಳತಕ್ಕ ಪದಾರ್ಥಗಳ ಬೆಲೆಗಳು

ಹೆಚ್ಚಾಗಿಯೇ ಇರುವಾಗ ಅವರು ಹೆಚ್ಚು ಕಂದಾಯ ಕೊಡಲು ಶಕ್ತರೆ ? ಅವರಮೇಲೆ ಹೆಚ್ಚು ಕಂದಾಯದ ಹೊರೆಯನ್ನು ಹೇರುವುದು ಸೂಕ್ತವೆ ಎಂಬುದನ್ನು ಯೋಚನೆಮಾಡಬೇಕು. ರೈತನಮೇಲೆ ಕಂದಾಯ ವನ್ನು ಹೇರುವುದಕ್ಕೆ ಹೋಗದೆ ಅನುಕೂಲಸ್ಥರ ಮೇಲೆ, ಹೆಚ್ಚಿನ ಆದಾಯ ಬರುವ್ರದರ ಮೇಲೆ, ಅಥವಾ ಹೆಚ್ಚು ಹಣವನ್ನಿಟ್ಟುಕೊಂಡು ಅದನ್ನು ಏನು ಮಾಡುವು ದಕ್ಕೂ ತೋಚದೆ ಇರುವವರ ಮೇಲೆ ಕಂದಾಯ ಹಾಕುವುದು ರಾಜನೀತಿ ಎಂದು ನಾನು ಭಾವಿಸು ತ್ತೇನೆ. ಅಲ್ಲದೆ ಈಗ ಸರ್ಕಾರದ ಖರ್ಚುಗಳನ್ನು ನೋಡಿದರೆ, ಅನೇಕ ಬಾಬುಗಳನ್ನು ರಿಟ್ರೆಂಚ್‌ಮಾಡ ಬೇಕೆಂಬ ಕಾಲದಲ್ಲಿದ್ದೇವೆ. ಹೀಗೆ ಖರ್ಚು ಕಡಮೆ ಮಾಡುವ ಕಾಲದಲ್ಲಿ, ಯಾವ ಬಾಬುಗಳಲ್ಲಿ ಖರ್ಚು ಕಡಮೆ ಮಾಡಬಹುದು, ಯಾವ ಯಾವುದರಮೇಲೆ ತೆರಿಗೆ ಹಾಕಬೇಕೆಂಬುದರ ಬಗ್ಗೆ ಒಂದು ಸಮಿತಿಯನ್ನು ರಚನೆಮಾಡಿ ಆ ಸಮಿತಿ ಪರಿಶೀಲನೆಮಾಡಿ ಸಲಹೆ ಮಾಡಿದನಂತರ ಅದರ ಅಭಿಪ್ರಾಯದ ಮೇಲೆ ತೆರಿಗೆ ಗಳನ್ನು ಹಾಕುವುದಕ್ಕೆ ಹೋಗುವುದು ಸೂಕ್ತವೆಂದು ಭಾವಿಸುತ್ತೇನೆ.

ಸ್ವಾಮಿ, ಈಗ ಮೈಸೂರು ಸಂಸ್ಥಾನವನ್ನು ಹತ್ತು ಜಿಲ್ಲೆಗಳಾಗಿ ವಿಭಾಗ ಮಾಡಿದ್ದೀರಿ. ಇದನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲವೆ ? ಇಷ್ಟು ಏಕಿರಬೇಕು ಎಂಬುದನ್ನು ಯೋಚನೆಮಾಡಿ ನೋಡೋಣ. ಈಗ ಚಿಕ್ಕಮಗಳೂರು ಒಂದು ಜಿಲ್ಲೆ ಎಂದು ಮಾಡಿದ್ದಾರೆ. ಇದನ್ನು ತೆಗೆಯುವುದಕ್ಕಾಗುವುದಿಲ್ಲವೆ, ಬೇರೆ ಜಿಲ್ಲೆಗೆ ಇದನ್ನು ಸೇರಿಸುವುದಕ್ಕಾಗುವುದಿಲ್ಲವೆ ಎಂಬುದನ್ನು ಯೋಚನೆಮಾಡಬೇಕು. ಹೀಗೆ ಹೇಳುವುದರಲ್ಲಿ ನನ್ನ ಉದ್ದೇಶವಿಷ್ಟೆ; ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಜಿಲ್ಲೆ ಗಳನ್ನು ಕಡಿಮೆಮಾಡಿ ವೆಚ್ಚಗಳನ್ನು ಕಡಿಮೆಮಾಡು ವುದಕ್ಕೆ ಸಾಧ್ಯವೆ ಎಂಬುದನ್ನು ಯೋಚನೆಮಾಡಿ ಆ ಮೇಲೆ ಹೊಸ ತೆರಿಗೆಗಳನ್ನು ಎಲ್ಲಿ ಹಾಕುವುದು ಸಾಧುವೋ ಅಲ್ಲಿ ಮಾತ್ರ ಹಾಕಿ. ಮಹಾಸ್ವಾಮಿ ಯವರು ಅಪ್ಪಣೆಕೊಡಿಸಿರುವಹಾಗೆ, ಪಾಂಚವಾರ್ಷಿಕ ಯೋಜನೆಗೆ ಬೇಕಾದ ಹಣವನ್ನು ಕೂಡಿಸಿಕೊಂಡು ಮುಂದುವರಿಯಬೇಕೆಂಬ ಅಭಿಪ್ರಾಯವನ್ನು ತಿಳಿಸಿ, ಮಹಾಸ್ವಾಮಿಯವರಿಗೆ ಅವರ ಭಾಷಣಕ್ಕಾಗಿ ನನ್ನ ಕೃತಜ್ಞತೆಯನ್ನರ್ಪಿಸುತ್ತೇನೆ.

---

*The House adjourned for Lunch at Three of the Clock and reassembled at Thirty Minutes past Three of the Clock.*

---

[MR. SPEAKER in the Chair.]

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಮೊನ್ನೆ 19ನೇ ತಾರೀಖು ಶ್ರೀಮನ್ಮಹಾರಾಜ ರವರು ಮಾಡಿದ ಭಾಷಣದ ಮೇಲೆ ನಾನು ಕೆಲವು ವಿಚಾರಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಇಚ್ಛಿಸುತ್ತೇನೆ. ಶ್ರೀಮನ್ಮಹಾರಾಜರವರು ರಾಜ್ಯ ಗಳ ಪುನರ್‌ವಿಂಗಡಣೆ ವಿಚಾರದಲ್ಲಿ ಬಹಳ ಮುಗಂ ಆಗಿ ಭಾಷಣ ಮಾಡಿದ್ದಾರೆ. ಅದು ಆಶಾ ದಾಯಕವಾಗಿ ಇಲ್ಲ. ಸಾಮಾನ್ಯವಾಗಿ ಮೈಸೂರು ದೇಶದಲ್ಲೇ ಅಲ್ಲ, ಇಡೀ ಕರ್ಣಾಟಕದಲ್ಲಿ ಭಾಷಾ ವಾರು ಪ್ರಾಂತ್ಯ ಆಗಬೇಕು ಎಂದು ಬಹಳ ದಿವಸ ಗಳಿಂದ ಚಳವಳಿ ಇದೆ. ಇವತ್ತಲ್ಲ, ನಿನ್ನೆ ಅಲ್ಲ ಮೊನ್ನೆ ಅಲ್ಲ. ನಮ್ಮ ಜವಾಬ್ದಾರಿ ಸರ್ಕಾರ ಬರುವ ಮೊದಲು ಕೂಡ ಭಾಷಾವಾರು ಪ್ರಾಂತ ಆಗಬೇಕು ಎಂದು ತೀರ್ಮಾನ ಮಾಡಿದ್ದೆವು. ಈಗ ಭಾಷಾವಾರು ಪ್ರಾಂತ ಮಾಡುವುದು ಬಹಳ ಸೂಕ್ತವೆಂದು ಒತ್ತಿ ಹೇಳುತ್ತೇನೆ. ಏಕೆಂದರೆ ನಮ್ಮದು ಚಿಕ್ಕರಾಜ್ಯ. ಸಾಮಾನ್ಯವಾಗಿ ಬಳ್ಳಾರಿಸೇರಿ ಸುಮಾರು ಒಂದು ಕೋಟಿ ಜನಸಂಖ್ಯೆ ಇರತಕ್ಕಂಥ ರಾಜ್ಯವಾಗಿದೆ. ಹೀಗೆ ಒಂದು ಕೋಟಿ ಜನಸಂಖ್ಯೆ ಇರತಕ್ಕಂಥ ರಾಜ್ಯದಿಂದ ದೆಹಲಿ ಪಾರ್ಲಿಮೆಂಟಿಗೆ ಮೆಂಬರು ಗಳನ್ನು ಕಳುಹಿಸಬೇಕಾದರೆ ಸಾಮಾನ್ಯವಾಗಿ ಹತ್ತು-ಹನ್ನೆರಡು ಮೆಂಬರುಗಳು ಮಾತ್ರ ಹೋಗುತ್ತಾರೆ. ಬಾಕಿ ಪ್ರಾಂತದ 2 ಕೋಟಿ, $2\frac{1}{2}$ ಕೋಟಿ, 3 ಕೋಟಿ ಜನರಿರುವ ರಾಜ್ಯಗಳನ್ನು ನೋಡಿದರೆ 25-30 ಜನ ಮೆಂಬರುಗಳು ಡೆಲ್ಲಿ ಪಾರ್ಲಿಮೆಂಟಿಗೆ ಹೋಗು ತ್ತಾರೆ. ಆದರೆ ಯಾವ ರಾಜ್ಯದಿಂದ ಹೆಚ್ಚಾಗಿ ಜನ ಹೋಗುತ್ತಾರೋ, ಆ ರಾಜ್ಯಕ್ಕೆ ದೆಹಲಿ ಪಾರ್ಲಿ ಮೆಂಟಿನ ಸದಸ್ಯರುಗಳಾಗಿರತಕ್ಕಂತಹವರು ಗಮನ ಕೊಟ್ಟು ಅವರಿಗೆ ಹೆಚ್ಚಾಗಿ ಅನುಕೂಲ ಮಾಡಿಕೊಡು ತ್ತಾರೆ. ಈಗ ಮೈಸೂರು ದೇಶಕ್ಕೆ ಸ್ವಲ್ಪ ಹಣ ಕೊಟ್ಟಿರುತ್ತಾರೆ. ಆದರೆ ಕರ್ಣಾಟಕ ಭಾಷಾವಾರು ಪ್ರಾಂತವಾಗಿ ಸುಮಾರು 2 ಕೋಟಿ, $2\frac{1}{4}$ ಕೋಟಿ ಜನ ಜಾಸ್ತಿ ಆದರೆ ಆಗ ದೆಹಲಿ ಪಾರ್ಲಿಮೆಂಟಿನಲ್ಲಿ ಮೆಂಬರುಗಳು ಹೆಚ್ಚು ಒತ್ತಾಯ ಮಾಡಿ ನಮ್ಮ ಕರ್ಣಾಟಕಕ್ಕೆ ಹೆಚ್ಚಾಗಿ ಹಣ ಒದಗಿಸುತ್ತಾರೆಂದು ನನ್ನ ಭಾವನೆ. ಆದ್ದರಿಂದ ಕರ್ಣಾಟಕ ಪ್ರಾಂತ ಆಗ ಬೇಕಾದುದು ಬಹಳ ಮುಖ್ಯವಾಗಿದೆ. ಇಂಡಿಯಾ ದೇಶದಲ್ಲಿ ಎಲ್ಲಾ ಪ್ರಾಂತಗಳಲ್ಲೂ ಕೂಡ ಭಾಷಾ ವಾರು ಪ್ರಾಂತವಾಗಬೇಕು ಎಂದು ಅನೇಕ ಸಾರಿ ದೆಹಲಿ ಪಾರ್ಲಿಮೆಂಟಿನಲ್ಲಿಯೂ ಕೂಡ ಒತ್ತಾಯ ಮಾಡುತ್ತಿದ್ದಾರೆ. ದೆಹಲಿ ಪಾರ್ಲಿಮೆಂಟಿನವರು ಮತ್ತು ಕೇಂದ್ರ ಸರ್ಕಾರದವರು ಭಾಷಾವಾರು ಪ್ರಾಂತಗಳನ್ನು ಮಾಡಬೇಕೆಂದು ನಿರ್ಧರಿಸಲು ಒಂದು ಸಮಿತಿಯನ್ನು ಮಾಡಿದ್ದಾರೆ. ಸಮಿತಿಯ ವರು ಎಲ್ಲಾ ಕಡೆಗಳಲ್ಲೂ ಇಂಡಿಯಾ ದೇಶದ ಎಲ್ಲಾ ಪ್ರಾಂತಗಳಲ್ಲೂ ಸಂಚಾರಮಾಡಿ ಯಾವ ಯಾವ ಭಾಷಾವಾರು ಪ್ರಾಂತಗಳನ್ನು ಮಾಡಿದರೆ ಅನು ಕೂಲವಾಗುತ್ತದೆ ಎಂದು ಒಂದು ಸರ್ವೆ ಮಾಡಿ ಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಈಗ ಭಾಷಾವಾರು ಪ್ರಾಂತ ಮಾಡುವುದಕ್ಕೆ ಬಹಳ ಪ್ರಾಮುಖ್ಯವಾದ ಕಾಲ ಬಂದಿದೆ. ಈ ವಿಚಾರದಲ್ಲಿ ಅಸೆಂಬ್ಲಿ ಸದಸ್ಯರೆಲ್ಲರೂ ಒಮ್ಮತದಿಂದ ನಿರ್ಧಾರ ಮಾಡುವುದು ಬಹಳ ಒಳ್ಳೆಯದೆಂದು ನಾನು ಈ ಸಭೆ ಯಲ್ಲಿ ಪ್ರಾರ್ಥನೆಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಮೈಸೂರು ದೇಶದಲ್ಲಿ ಮೊನ್ನೆ ತಾನೆ ಹೊಸದಾಗಿ ವಿದ್ಯಾ ಸುಧಾರಣೆ ಜಾರಿಗೆ ಬಂದಿದೆ. ಅದು ಬಹಳ ಶ್ಲಾಘನೀಯವಾದುದು. ಸರ್ಕಾರದವರನ್ನೂ ಕೂಡ ಅಭಿನಂದಿಸಬೇಕಾಗಿದೆ. ಜನವರಿ 30ನೆಯ ತಾರೀಖಿನ ದಿನ ಅಂದರೆ ಸರ್ವೋ ದಯದ ದಿನ ಮತ್ತು ಮಹಾತ್ಮ ಗಾಂಧಿಯವರು ಕೈಲಾಸವಾಸಿಯಾದ ದಿನ. ಈ ವಿದ್ಯಾಸುಧಾರಣೆ ಗಳನ್ನು ಜಾರಿಗೆ ತಂದರು. ಸುಧಾರಣೆ ಜಾರಿಗೆ ಬಂದಮೇಲೆ ಅನೇಕ ವಿದ್ಯಾರ್ಥಿಗಳು ಅಂದರೆ ಹಳ್ಳಿ ಯಲ್ಲಿ ಓದತಕ್ಕಂಥ ಮತ್ತು ಟೌನಿನಲ್ಲಿ ಓದತಕ್ಕಂಥ ಪ್ರತಿಯೊಬ್ಬ ವಿದ್ಯಾರ್ಥಿಗೂ ಸುಧಾರಣೆಯಿಂದ ಅವರ ಜೀವನೋಪಾಯಕ್ಕೆ ಅನುಕೂಲವಾಗುತ್ತದೆ ಎನ್ನುವ ನಂಬಿಕೆ ನನಗಿದೆ. ಆದ್ದರಿಂದ ಸರ್ಕಾರದವರು

(ಶ್ರೀ ವೈ. ಎಂ. ಚಂದ್ರಶೇಖರಯ್ಯ.)

ಬಹಳ ಜಾಗರೂಕತೆಯಿಂದ ಸುಧಾರಣೆಯನ್ನು ಜಾರಿಗೆ ತರಬೇಕೆಂದು ಅವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಡಿಸ್ಟ್ರಿಕ್ಟ್ ಬೋರ್ಡ್, ತಾಲ್ಲೂಕು ಬೋರ್ಡ್ ವಿಚಾರದಲ್ಲಿ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಸರ್ಕಾರದವರು ಜಿಲ್ಲಾ ಬೋರ್ಡ್ ತೆಗೆದು ಹಾಕಿ ಬಹಳ ತಪ್ಪು ಕೆಲಸ ಮಾಡಿದ್ದಾರೆಂದು ಹೇಳಬಹುದು. ಏತಕ್ಕೆಂದರೆ ಈಗ ಜಿಲ್ಲೆಯೊಳಗೆ ಆಗುತ್ತಿರುವ ಕೆಲಸ ನೋಡಿದರೆ ಅಲ್ಲಿ ಅಷ್ಟು ಸಮರ್ಪಕವಾಗಿ ಕೆಲಸ ಕಾರ್ಯವಾಗುತ್ತಿಲ್ಲ. ಹಣ ವೇನೋ ಖರ್ಚಾಗುತ್ತಿದೆ. ಖರ್ಚಾದರೂ ಕೂಡ ಯಾವ ಯಾವ ಹಳ್ಳಿಗಳಿಗೆ ಏನೇನು ಅನುಕೂಲಗಳನ್ನು ಕಲ್ಪಿಸಿಕೊಡಬೇಕು, ಯಾವ ಕೆರೆ, ಕಟ್ಟೆ, ಭಾವಿ ತೋಡಿಸಿದರೆ ಯಾರಿಗೆ ಅನುಕೂಲವಾಗುತ್ತದೆ ಎಂಬ ಒಂದು ವ್ಯವಸ್ಥಿತ ರೀತಿಯಲ್ಲಿ ಹಣ ಖರ್ಚು ಮಾಡುತ್ತಾ ಇಲ್ಲ. ಹಣವನ್ನು ತಾಲ್ಲೂಕುವಾರಾಗಿ ಹಂಚುವ ವ್ಯವಸ್ಥೆ ಮಾಡಿಲ್ಲ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ಜಿಲ್ಲಾ ಬೋರ್ಡ್ ಎಲೆಕ್ಷನ್ ಮಾಡುವುದು ಸೂಕ್ತ. ಇದನ್ನು ಸರ್ಕಾರದವರು ಜಾಗ್ರತೆ ಮಾಡುತ್ತಾರೆಂದು ನಂಬಿಕೊಂಡಿದ್ದೇನೆ.

ತಾಲ್ಲೂಕು ಬೋರ್ಡನ್ನು ರಚನೆಮಾಡುವ ವಿಚಾರ ಪ್ರಸ್ತಾಪಮಾಡಿದರು. ಅವನ್ನು ಇಷ್ಟು ದಿವಸಗಳೊಳಗಾಗಿ ಮಾಡಿದ್ದರೆ ಬಹಳ ಚೆನ್ನಾಗಿತ್ತು. ತಾಲ್ಲೂಕು ಬೋರ್ಡುಗಳು ಇದ್ದರೆ, ಪ್ರತಿಯೊಂದು ಹೋಬಳಿಯಲ್ಲಿಯೂ 10-15 ಜನ ನೇಮಿತ ಸದಸ್ಯರು ತಾಲ್ಲೂಕಿನಲ್ಲಿರುತ್ತಾರೆ. ಅವರಿಗೆ ಆ ಹೋಬಳಿಯ ವಿಚಾರ ಚೆನ್ನಾಗಿ ಗೊತ್ತಿರುತ್ತದೆ. ಈಗ Land Revenue ಪೈಕಿ ಶೇಕಡ 12½ ಪಂಚಾಯಿತಿಗೂ ಶೇಕಡ 12½ ಜಿಲ್ಲಾ ಬೋರ್ಡಿಗೂ ಕೊಡಲು ಸರ್ಕಾರ ನಿರ್ಧಾರ ಮಾಡಿದ್ದಾರೆ. ಆ ಹಣವನ್ನು ತಾಲ್ಲೂಕು ಬೋರ್ಡಿಗೆ ನೇರವಾಗಿ ಕೊಟ್ಟರೆ ತಾಲ್ಲೂಕಿನಲ್ಲಿ ಹೆಚ್ಚು ಕೆಲಸವಾಗುವುದಕ್ಕೆ ಅನುಕೂಲ ಮಾಡಿಕೊಟ್ಟ ಹಾಗಾಗುತ್ತದೆ. ಮನೆ ಕಟ್ಟುವುದಕ್ಕೆ ತಳಹದಿ ಯಾವ ರೀತಿ ಭದ್ರವಾಗಿ ಹಾಕುತ್ತಾರೋ ಅದೇ ರೀತಿ ತಾಲ್ಲೂಕು ಬೋರ್ಡ್ ಚೆನ್ನಾಗಿ ಕೆಲಸಮಾಡಿದರೆ ಜಿಲ್ಲಾಬೋರ್ಡ್ ಮತ್ತು ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತದೆ. ತಾಲ್ಲೂಕು ಬೋರ್ಡ್ ಚೆನ್ನಾಗಿ ಕೆಲಸ ಮಾಡದಿದ್ದರೆ ಸರ್ಕಾರ ಎಷ್ಟು ಕೆಲಸ ಮಾಡುತ್ತಿದ್ದರೂ ಕೂಡ ಕೆಟ್ಟ ಹೆಸರು ತಪ್ಪುವುದಿಲ್ಲ. ಅದಕ್ಕೋಸ್ಕರವಾಗಿ ಬುದ್ಧಿವಂತರೂ, ವಿದ್ಯಾವಂತರೂ, ಜ್ಞಾನವಂತರೂ ತಾಲ್ಲೂಕು ಬೋರ್ಡ್‌ಗಳಲ್ಲಿರಬೇಕೆಂದೂ ಅವರು ಚೆನ್ನಾಗಿ ಕೆಲಸ ಮಾಡುವಂತಾಗಬೇಕೆಂದೂ ಸರ್ಕಾರದವರನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶೇಷಾದ್ರಿ ಕಮಿಟಿ ರಿಪೋರ್ಟ್ ವಿಚಾರದಲ್ಲಿ, ಕರ್ಣಾಟಕ ಭಾಷಾವಾರು ಪ್ರಾಂತ್ಯದ ವಿಚಾರದಲ್ಲಿ ಸರಿಯಾದ ಅಂಕಿ ಅಂಶಗಳು ಹೊರಗೆ ಬಂದಿಲ್ಲ ಎಂದು ಬೊಂಬಾಯಿ ಶಾಸನ ಸಭಾ ಸದಸ್ಯರಾದ ಶ್ರೀ ಕುಂಟೆಯವರು ಹೇಳಿರುವುದನ್ನು ನೋಡಿದೆ. ಅದು ಎಷ್ಟು ಮಟ್ಟಿಗೆ ನಿಜವೋ ಸುಳ್ಳೋ ಗೊತ್ತಿಲ್ಲ. ಭಾಷಾವಾರು ಪ್ರಾಂತ ಮಾಡುವುದು ಸೂಕ್ತವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಈಗ ಸರ್ಕಾರ ಜಮೀನಿನ ವಿಚಾರದಲ್ಲಿ ಕೈಹಾಕಿದ್ದಾರೆ. ಬೆಂಗಳೂರು ನಗರದಲ್ಲಿ ಅನೇಕ ಶ್ರೀಮಂತರು ಇದ್ದಾರೆ. ಸಾವಿರಾರು ರೂಪಾಯಿ ಬಾಡಿಗೆ ಬರುವವರೂ ಇದ್ದಾರೆ. ಅಂಥವರನ್ನು ಬಿಟ್ಟು ಬರೀ ರೈತನ ಜಮೀನುಗಳ ಮೇಲೆ ಹೆಚ್ಚು ತೆರಿಗೆ ವಿಧಿಸುವುದನ್ನು ನೋಡಿದರೆ ಸರ್ಕಾರದವರು ಒಂದು ಕಣ್ಣಿಗೆ ಸುಣ್ಣ ಮತ್ತು ಇನ್ನೊಂದು ಕಣ್ಣಿಗೆ ಬೆಣ್ಣೆ ಹಚ್ಚುವ ರೀತಿಯಲ್ಲಿದೆ. ಆದ್ದರಿಂದ ಜಾಸ್ತಿಯಾಗಿ ಮನೆ ಬಾಡಿಗೆ ಬರತಕ್ಕಂಥವರ ವಿಚಾರದಲ್ಲಿಯೂ ಒಂದು ceiling limit ನಿಗದಿ ಮಾಡಬೇಕೆಂಬುದೇ ನನ್ನ ಪ್ರಾರ್ಥನೆ. ಈಗ ನಾವು ಅಧಿಕಾರಿಗಳಿಗೆ ಕೊಡತಕ್ಕ ಸಂಬಳವೂ ನಮ್ಮ ದೇಶಕ್ಕೆ ಜಾಸ್ತಿ ಎಂದು ಹೇಳುತ್ತೇನೆ. ಒಬ್ಬ ನೌಕರನಿಗೆ 50 ರೂಪಾಯಿ ಸಂಬಳ ಕೊಟ್ಟರೆ ಅವರ 10 ಭಾಗದಷ್ಟು ದೊಡ್ಡ ನೌಕರರಿಗೆ ಜಾಸ್ತಿ ಕೊಟ್ಟರೆ ಸಾಕು. ಅದಕ್ಕಿಂತಲೂ ಜಾಸ್ತಿ ಸಂಬಳ ಇರಕೂಡದು. ಹಾಗೆ ಜಾಸ್ತಿ ಇರುವುದು ನಮ್ಮ ದೇಶಕ್ಕೆ ಬಹಳ ಅನ್ಯಾಯ. ಆದ್ದರಿಂದ ಜಾಸ್ತಿ ಸಂಬಳ ಮೈಸೂರು ದೇಶದಲ್ಲಿ ಇರಬಾರದು ಎಂದು ನನ್ನ ಅಭಿಪ್ರಾಯ. I.A.S. ಮತ್ತು I.P.S. ನಮ್ಮ ದೇಶಕ್ಕೆ ಬಂಧಿರುವುದು ಸರಿಯಲ್ಲ. ಬಂದಿದ್ದು ಅನ್ಯಾಯ ಎಂದು ಭಾವಿಸುತ್ತೇನೆ. ರೈತರಮೇಲೆ ಹೊರೆ ಹಾಕಬೇಡಿ ಎಂದು ಕೇಳಿಕೊಳ್ಳುತ್ತೇನೆ. ಅವರು ಕಷ್ಟಪಡುತ್ತಿದ್ದಾರೆ. ಯುದ್ಧ ಬಂದ ಮೇಲೆ ಅವರು ಬೆಳೆದದ್ದಕ್ಕೆ ಸ್ವಲ್ಪ ಧಾರಣೆ ಬಂತು. ಅದೂ ಈಗ ಕಡಮೆಯಾಗುತ್ತಿದೆ. ಆದ್ದರಿಂದ ರೈತರ ಮೇಲೆ ಹೆಚ್ಚಿಗೆ ಕಂದಾಯ ಹಾಕಕೂಡದು. ಶ್ರೀಮನ್ಮಹಾರಾಜರವರೂ ಕೂಡ ಹೆಚ್ಚಾಗಿ ಕೆಲಸ ಕಾರ್ಯಗಳನ್ನು ಮಾಡಬೇಕಾದರೆ ತೆರಿಗೆಗಳನ್ನು ಹಾಕಬೇಕೆಂದು ಸೂಚನೆ ಮಾಡಿದ್ದಾರೆ. ಆದರೆ ತೆರಿಗೆಗಳು ಯಾವುವೂ ರೈತನಮೇಲೆ ಬೀಳದಂತೆ ನೋಡಿಕೊಳ್ಳಬೇಕೆಂದು ನನ್ನ ಪ್ರಾರ್ಥನೆ. ಈ ಸಂದರ್ಭದಲ್ಲಿ ರೆವಿನ್ಯೂ ಮಿನಿಸ್ಟರ್ ಹೋದ Assembly ಒಳಗೆ ಧಾನ್ಯ ಇಳುವರಿ ವಿಚಾರದಲ್ಲಿ ಒಂದು ವಿಚಾರ ಹೇಳಿದರು. ಹಾಗೆ ಮಾಡಿದರೆ ಅದರಿಂದ ಶ್ಯಾನುಭೋಗರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು ನಿಗದಿ ಮಾಡುವುದಕ್ಕೆ ಶ್ಯಾನುಭೋಗರಿಗೆ ಬಿಡದೆ ಸರ್ಕಾರದವರು ನೇರವಾಗಿ ಒಂದು ದೊಡ್ಡ ಸಂಸಾರಕ್ಕೆ ಎಷ್ಟು ಎಕರೆ ಇರಬೇಕು ಎಂದು ತೀರ್ಮಾನ ಮಾಡಬೇಕು. ಆದರೆ ಇದು ಕಾಫಿ estate ಮತ್ತು ಏಲಕ್ಕಿ estate ಮತ್ತು ಗೋಮಾಳ ಇವಕ್ಕೆ ಅನ್ವಯಿಸಬಾರದು. ಹಾಗೆ ಕಾಫಿ ಮತ್ತು ಏಲಕ್ಕಿ ತೋಟಗಳಿಗೆ ಒಂದು ಸೀಲಿಂಗ್ ಲಿಮಿಟ್ ಹಾಕಿ, ಅವನ್ನು ರೈತರಿಂದ ಕಿತ್ತುಕೊಳ್ಳುವುದಾದರೆ, ರೈತರು ಕಾಫಿ ಮತ್ತು ಏಲಕ್ಕಿ ಬೆಳೆಯುವುದೇ ಇಲ್ಲ. ಆದ್ದರಿಂದ ಇಂಥ ಜಮೀನುಗಳನ್ನು ಬಿಟ್ಟು ಬೇರೆ ಜಮೀನುಗಳಿಗೆ ceiling limit ಹಾಕುವುದು ಸೂಕ್ತವೆಂದು ಹೇಳುತ್ತೇನೆ.

ಈ ವಿದ್ಯಾಭ್ಯಾಸ ಸುಧಾರಣೆಯ ವಿಚಾರದಲ್ಲಿ ನಾನು ಮೊದಲೇ ಹೇಳಿದ ರೀತಿಯಲ್ಲಿ ಸರ್ಕಾರದವರು ಬಹಳ ಆಸಕ್ತಿಯಿಂದ ಸರ್ವೋದಯ ದಿನಾಚರಣೆಯನ್ನು ನಡೆಸಿದರು. ಇದನ್ನು ಕೈಗೊಂಡಿದ್ದು ಬಹಳ ಸೂಕ್ತವಾಗಿದೆ. ಆದರೆ, ತಾವು ಬೆಂಗಳೂರು ಸಿಟಿ, ಮೈಸೂರು ಸಿಟಿಗಳಲ್ಲೇ ಅಲ್ಲದೆ ಎಲ್ಲಾ ತಾಲ್ಲೂಕುಗಳಲ್ಲೂ ಇದು ಆಚರಣೆಗೆ ಬರುವಂತೆ ಮಾಡಬೇಕು. ಕೊನೆಗೆ ಪ್ರತಿಯೊಂದು ಗ್ರಾಮದಲ್ಲೂ, ಹಳ್ಳಿಯಲ್ಲೂ ಇದು ಜಾರಿಗೆ ಬರಲೆಂದು ನಾವೆಲ್ಲರೂ ಬಯಸುತ್ತೇವೆ. ಇನ್ನೇನೂ ಹೆಚ್ಚಿಗೆ ಹೇಳಲು ನಾನು ಬಯಸುವುದಿಲ್ಲ. ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕೆ ನಾನು ಅಧ್ಯಕ್ಷರನ್ನು ವಂದಿಸಿ ಶ್ರೀಮನ್ಮಹಾರಾಜರವರು ಅರ್ಪಣೆ ಕೊಡಿಸಿದ ಭಾಷಣವನ್ನು ಸ್ವಾಗತಿಸುತ್ತೇನೆ.

ಶ್ರೀ ಶಿವನಂಜೇಗೌಡ (ಮೈಸೂರು ತಾಲ್ಲೂಕು).—ಅಧ್ಯಕ್ಷರೇ, ನಮ್ಮ ಶ್ರೀಮನ್ಮಹಾರಾಜರವರು ನೂತನವಾಗಿ ಕೊಟ್ಟಿರತಕ್ಕ ಸಂದೇಶದ ಸಂಬಂಧದಲ್ಲಿ ಬಹಳ ಗಮನಾರ್ಹವಾದ ಒಂದೆರಡು ಮಾತುಗಳನ್ನು ನಾನು ಪ್ರಸ್ತಾಪಿಸಲು ನಿಂತಿದ್ದೇನೆ. ಪುನರ್ವಿಂಗಡಣೆಯ ಸಂಬಂಧದಲ್ಲಿ ಬಹಳವಾಗಿ ಎಲ್ಲರೂ ಯೋಚನೆಮಾಡತಕ್ಕಂಥ ಒಂದು ಅಂಶವನ್ನು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ್ದಾರೆ. ಪುನರ್ವ್ಯವಸ್ಥೆಯ ಏರ್ಪಾಡನ್ನು ಕೈಕೊಳ್ಳಬೇಕಾದರೆ ಅದಕ್ಕೆ ಸಂಬಂಧಪಟ್ಟ ಜನಗಳ ಹಿತಸಾಧನೆಯೇ ಒಂದು ಮುಖ್ಯ ಗುರಿಯಾಗಿರಬೇಕು. ಇದು ನಮ್ಮ ದೇಶದ ಹಿತವನ್ನು ಸಾಧಿಸುವಂತಿರಬೇಕು. ಸ್ವಾತಂತ್ರ್ಯ ಸಂಗ್ರಾಮವನ್ನು ಜಯಿಸಿದನಂತರ ದೇಶದಲ್ಲಿ ಎಲ್ಲೆಲ್ಲಿ ಅನಾವೃಷ್ಟಿ ಇದೆಯೋ, ಯಾವ ಯಾವ ಪ್ರದೇಶ ಹಿಂದೆ ಬಿದ್ದಿದೆಯೋ, ಅದನ್ನು ಏಳಿಗೆಗೆ ತರುವುದಕ್ಕೆ ಏನೇನು ಕೆಲಸಕಾರ್ಯಗಳನ್ನು ಮಾಡಬೇಕೋ ಅವಕ್ಕೆಲ್ಲಾ ಮುಂಚೆ ದುಡ್ಡನ್ನೊದಗಿಸಿ, ಹಳ್ಳಿಯಲ್ಲವನ್ನೂ ದಿಲ್ಲಿಯಾಗಿ ಮಾಡಬೇಕೆಂದು ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದುದನ್ನು ಸಾಧಿಸುವುದಕ್ಕೆ ಈ ಸರ್ಕಾರ ಮತ್ತು ಸದಸ್ಯರುಗಳೆಲ್ಲರೂ ಒಟ್ಟುಗೂಡಿ ಕೆಲಸಮಾಡಿ ಸಫಲತೆಯನ್ನು ಹೊಂದಬೇಕಾದರೆ, ಈಗ ಎಲ್ಲರೂ ಸಾಮಾನ್ಯವಾಗಿ ಹೇಳುವಂಥ ಅಕ್ಕ ಪಕ್ಕ ಎಂಬ ಎರಡು ಶಬ್ದಗಳ ಯೋಚನೆ ಬಿಡಬೇಕು. ಅದನ್ನು ಬಿಟ್ಟರೇನೇ ಈ ನಮ್ಮ ದೇಶ ಸರ್ವತೋಮುಖವಾಗಿ ಬೆಳವಣಿಗೆಗೆ ಬರುವ ಕಾರ್ಯಸಾಧನೆಯಾಗಬಹುದಾಗಿದೆ. ಏಕೆಂದರೆ, 'ಹಾಸಿಗೆಯಿದ್ದಷ್ಟು ಕಾಲುಚಾಚು' ಎಂಬ ನಾಣ್ಣುಡಿಯನ್ನು ನಾವು ಜ್ಞಾಪಕಕ್ಕೆ ತಂದುಕೊಳ್ಳುವುದು ಸಮಯೋಚಿತವಾಗಿದೆ. ಹಾಸಿಗೆಯನ್ನು ಮೀರಿ ಕಾಲುಚಾಚುವುದು ಪ್ರಯೋಜನಕಾರಿಯಲ್ಲವೆಂದು ನಮ್ಮ ಹಿರಿಯರು ಹೇಳುವುದರಲ್ಲಿ ಸತ್ಯಾಂಶವಿದೆ. ಹಿಂದೆಯೇ, ಒಂದು ವರ್ಷದಲ್ಲಿ, ನಾನು ಇದೇ ವಿಷಯದಲ್ಲಿ ಒಂದು ರೀತಿಯಲ್ಲಿ ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ದೊಡ್ಡದಾಗಿ ಮನೆಯನ್ನು ಕಟ್ಟಿ ರಿಪೇರಿಮಾಡುವ ಚೈತನ್ಯವಿಲ್ಲದೆ ಒಂದು ಕಡೆ ಗೋಡೆ ಬಿದ್ದುಹೋಗುವುದು, ಇನ್ನೊಂದು ಕಡೆ ಹೆಂಚು ಬಿದ್ದುಹೋಗುವುದು, ಮತ್ತೊಂದುಕಡೆ ತೊಲೆ ಮುರಿದುಹೋಗುವುದು, ಇದು ಬಿಟ್ಟು, ಇರುವ ಚಿಕ್ಕ ಮನೆಯನ್ನೇ ರಿಪೇರಿಮಾಡಿಕೊಂಡಿರುವುದು ಸೂಕ್ತ. ಆದ್ದರಿಂದ ಅಕ್ಕಪಕ್ಕಗಳ ರಾಜ್ಯಗಳು ಬರಲಿ ಎನ್ನುವ ಯೋಚನೆಯನ್ನು ಬಿಟ್ಟು, ಇರತಕ್ಕ ರಾಜ್ಯವನ್ನು ಸುರಕ್ಷಿತವಾಗಿ ನೋಡಿಕೊಂಡು, ಈ ಜನರ ಏಳಿಗೆಯನ್ನು ಸಾಧಿಸಬೇಕಾದರೆ, ಇನ್ನೂ ಹತ್ತಿಪ್ಪತ್ತು ವರುಷಗಳು ಬೇಕು. ಆದ್ದರಿಂದ ಈಗ ಕರ್ಣಾಟಕ ಏಕೀಕರಣವೆಂದು ಹೇಳಿ ನಮ್ಮ ಕೈ ನಿಲುಕುವವರೆಗೂ ಕೈ ನೀಡೋಣವೆಂದು ಹೊರಟರೆ, 'ಅಟ್ಟಕ್ಕೆ ಹಾರದವನು ಬೆಟ್ಟಕ್ಕೆ ಹಾರಿದ' ಎಂದು ಹೇಳಿದಹಾಗಾಗುತ್ತದೆ. ಅಟ್ಟಕ್ಕೆ ಏರಲೇ ಸಾಧ್ಯವಿಲ್ಲದಿರುವಾಗ ಬೆಟ್ಟಕ್ಕೆ ಏರುವುದು ಎಷ್ಟು ಸಂಕಟಕರವಾಗಿರುತ್ತದೆಂಬುದನ್ನು ಹೇಳಬೇಕಾಗಿಲ್ಲ. ಆದ್ದರಿಂದ ಈ ವಿಚಾರವನ್ನು ಎಲ್ಲರೂ ಬಹಳ ಕೂಲಂಕಷವಾಗಿ ಯೋಚನೆಮಾಡಬೇಕಾಗಿದೆ. ಇವೆಲ್ಲಾ ಹೇಗೆ ಬಂತೆಂಬುದು ಎಲ್ಲರಿಗೂ ತಿಳಿದೇ ಇದೆ. ಕೆಲವು ದೊಡ್ಡ ದೊಡ್ಡ ತಲೆಗಳು ಸೇರಿ ಮನಸೇಚ್ಛೆ ಏನೇನೋ ಹೇಳಿಬಿಟ್ಟು ಈಗ ನಮಗೆಲ್ಲಾ ಕಂಟಕಪ್ರಾಯವಾಗಿ ಬಂದಿದೆ. ಇದೆಲ್ಲಾ ನಮ್ಮ ದುರದೃಷ್ಟ, ಅವರೆಲ್ಲರನ್ನೂ ಮೊದಲು ನಾವು ಏನೋ ಎಂದು ಚುನಾವಣೆ ಮಾಡಿ ಕಳುಹಿಸಿದ್ದೇ ಈಗ ದೊಡ್ಡ ಕಂಟಕಪ್ರಾಯವಾಯಿತು! ಈಗ ದೇಶದಲ್ಲಿ ಎಲ್ಲರೂ ಸಮಾನ ಹಕ್ಕುಳ್ಳವರೆಂಬುದನ್ನು ಮರೆಯಬಾರದು. ನಮ್ಮ ಈ ಸಭೆಯಲ್ಲಿರುವವರಿಗೆ ಯಾವ ಹಕ್ಕಿದೆಯೋ ದೇಶದಲ್ಲಿರತಕ್ಕವರೆಲ್ಲರಿಗೂ ಅದೇ ಹಕ್ಕಿದೆ. ಏಕೆಂದರೆ ಮೊದಲು ಪ್ರಭುತ್ವ ಎಲ್ಲೋ ಒಂದು ಕಡೆ ಅಡಗಿತ್ತು. ಈಗ ಹಾಗಿಲ್ಲ; 21 ವರುಷ ತುಂಬಿದಮೇಲೆ ಎಲ್ಲರೂ ಪ್ರಭುಗಳೇ ಆಗಿರುವಾಗ, 'ನಾವೇ ಪ್ರಭುತ್ವ ನಡೆಸುತ್ತೇವೆ' ಎಂದು ದಪ್ಪ ದಪ್ಪ ತಲೆಗಳು ಹೇಳಿದರೆ ಪ್ರಯೋಜನವಿಲ್ಲ. ಆದ್ದರಿಂದ ಮೊದಲು ಮುಖ್ಯವಾಗಿ ನಾವಿರುವ ದೇಶವನ್ನು ಉದ್ಧಾರಮಾಡಿ, ಈ ಜನರಲ್ಲಿ ನೆಮ್ಮದಿ ತಲೆದೋರುವಂತೆ ಮಾಡಿ ದೇಶದ ಪ್ರಗತಿಯನ್ನು ಅವರು ಸಾಧಿಸಿದ್ದಾರೆಂಬ ಕೀರ್ತಿಯನ್ನು ಈ ಸರ್ಕಾರವೂ ಮತ್ತು ಈ ಸದಸ್ಯರೂ ಪಡೆಯಬೇಕೆಂದು ಹೇಳಿ, ಶ್ರೀಮನ್ಮಹಾರಾಜರವರು ಪುನರ್ವಿಂಗಡಣೆಯ ಸಂಬಂಧದಲ್ಲಿ ಹೇಳಿರುವುದಕ್ಕೆ ನನ್ನ ಈ ಅಭಿಪ್ರಾಯವನ್ನು ಸೂಚಿಸಿ ಅದನ್ನು ಇಷ್ಟಕ್ಕೇ ಬಿಡುತ್ತೇನೆ.

ನಾನು ಇನ್ನೊಂದು ವಿಚಾರ ಹೇಳಬೇಕೆಂದಿದ್ದೇನೆ: ಇಲ್ಲಿ 'ತೆರಿಗೆ' ಎಂದು ಹೇಳಿದೆಯಲ್ಲಾ ಅದು ಒಂದು ಬಹಳ ತೊಡಕಾದ ಪ್ರಶ್ನೆ. ಏಕೆಂದರೆ, ದುಡ್ಡಿಲ್ಲದೆ ಯಾವ ಸರ್ಕಾರವೂ ನಡೆಯುವುದಿಲ್ಲ. ಆದ್ದರಿಂದ ತೆರಿಗೆ ಹಾಕಲೇಬೇಕು ಎಂಬುದನ್ನು ದೇಶವೇ ಮನಗಂಡಿದೆ. ಆದರೆ, ದುಡ್ಡೆಲ್ಲಿದೆ? ಹೇಗೆ ತೆರಿಗೆ ಹಾಕಬೇಕು? ಎಂಬುದನ್ನು ಸ್ವಲ್ಪ ಯೋಚನೆಮಾಡಬೇಕು. ಇದನ್ನು ಈಗಾಗಲೇ ಕೆಲವು ಸ್ನೇಹಿತರು ಹೇಳಿದ್ದಾರೆ. ನಮ್ಮ ದೇಶದಲ್ಲಿ ಅನೇಕರು 20-30 ಮನೆಗಳನ್ನಿಟ್ಟುಕೊಂಡಿರುವವರೂ, ಬ್ಯಾಂಕುಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನಿಟ್ಟುಕೊಂಡಿರುವವರೂ ಇದ್ದಾರೆ. ನಮ್ಮ ಸರ್ಕಾರ ಅವರ ಕಡೆಗೆ ಹೆಚ್ಚಿಗೆ ಗಮನ ಕೊಟ್ಟಿಲ್ಲ. ಈಗಲೂ ಅವರ ಕಡೆ ಗಮನಕೊಡದೆ ಬಡ ರೈತನಮೇಲೆ ಏನಾದರೂ ಕಂದಾಯ ಹಾಕಿಯಾರೋ ಎಂಬ ಶಂಕೆ ನನಗುಂಟಾಗಿದೆ. ದುಡ್ಡನ್ನು ಬರಮಾಡಿಕೊಳ್ಳಲಿಕ್ಕೆ ಇನ್ನೊಂದು ಸೂಚನೆ ಕೊಡುತ್ತೇನೆ. ನಮ್ಮ ದೇಶದಲ್ಲಿ ರೀಸರ್ವೆ ಆಗಿ 30 ವರುಷಗಳ ಮೇಲಾಗಿದೆ. ಈಗೀಗ ರೀಸರ್ವೆ ಮಾಡುತ್ತೇವೆಂದು ಕೈಕೊಂಡಿದ್ದಾರೆ. ಇದನ್ನು ಜಾಗ್ರತೆ ಒಂದೆರಡು ವರುಷದಲ್ಲೇ ಮಾಡಿ ಮುಗಿಸುವುದಾದರೆ ಕೋಟ್ಯಾಂತರ ರೂಪಾಯಿ ಹೆಚ್ಚಿಗೆ ಉತ್ಪತ್ತಿ ಬರುತ್ತದೆ. ಇದನ್ನು ಜಾಗ್ರತೆ ಮಾಡುವುದು ಸರ್ಕಾರದವರ ಕರ್ತವ್ಯ. ಎಷ್ಟೋ ಜನ ಸರ್ಕಾರಿ ಜಮೀನನ್ನು ಒತ್ತುವರಿಮಾಡಿಕೊಂಡು ಈಗ ಅದಕ್ಕೆ ಏನೂ ಪರಿಹಾರ ಕೊಡದೆ ಅನುಭವಿಸುತ್ತಿದ್ದಾರೆ. ಅದರಿಂದಲೇ ಲಕ್ಷಾಂತರ ರೂಪಾಯಿಗಳು ಬರುವುದರಲ್ಲಿ ಸಂಶಯವಿಲ್ಲ. ಈ ಪ್ರಕಾರ, ನೇರವಾಗಿ ಯಾವ ತೆರಿಗೆಯೂ ವಿಧಿಸದೆ, ಪರೋಕ್ಷವಾಗಿ ತರೀ, ಖುಷ್ಕಿ ಜಮೀನುಗಳನ್ನು ಪುನಃ ಅಳತೆ ಮಾಡುವುದರಿಂದಲೇ ಅನೇಕ ಕೋಟಿ ರೂಪಾಯಿಗಳು ಬರುತ್ತವೆಂದು ಹೇಳಬಹುದು. ಇನ್ನು, ಹತ್ತು-ಇಪ್ಪತ್ತು ಮನೆಗಳನ್ನು ಕಟ್ಟಿಕೊಂಡಿರುವವರು, ಬ್ಯಾಂಕುಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನಿಟ್ಟು ಕೊಂಡಿರುವ ಸಾಹುಕಾರರುಗಳಿಂದಲೂ ಸರ್ಕಾರಿ ಉನ್ನತಾಧಿಕಾರಿಗಳಿಂದಲೂ ಹೆಚ್ಚಿಗೆ ತೆರಿಗೆ ಬರುವಂತೆ ಮಾಡಿದರೆ ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಬೇಕಾದಷ್ಟು ಹಣ ಒದಗಿಸಬಹುದು. ಏನೇ ಆದರೂ, ಬಡ ಜನರಾದ, ಹಳ್ಳಿಗಾಡಿನ ರೈತ ಬಾಂಧವರಮೇಲೆ ಕೈ ಮಾಡಬಾರದು. ಅವರಿಗೆ ಹೆಚ್ಚಿಗೆ ಕಂದಾಯ ಹಾಕಬಾರದು. ಇದನ್ನು ಮುಖ್ಯವಾಗಿ ನಮ್ಮ ಸರ್ಕಾರ ಗಮನದಲ್ಲಿಟ್ಟುಕೊಂಡು ತಕ್ಕ ವ್ಯವಸ್ಥೆ ಮಾಡಬೇಕು. ನಮ್ಮ ಮಾನ್ಯ ಸದಸ್ಯರುಗಳು ಈ ಬಗ್ಗೆ ಸಲಹೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಯಾರುಯಾರು ಶ್ರೀಮಂತರಿದ್ದಾರೋ

(ಶ್ರೀ ಶಿವನಂಜೇಗೌಡ.)

ಅವರಿಂದೇನು ಪಡೆಯಬಹುದಾಗಿದೆಯೋ ಅದನ್ನು ಪಡೆಯುವ ಯೋಚನೆಮಾಡಿ. ಅಂದಮಾತ್ರಕ್ಕೇ ಪುಣ್ಯವಂತರನ್ನೆಲ್ಲಾ, ಅವರು ಬೆಳೆಯದಂತೆ ಮೊಟಕುಮಾಡಬೇಕೆಂದು ನಾನು ಹೇಳುವುದಿಲ್ಲ. ಒಂದಾನೊಂದು ಕಾಲಕ್ಕೆ ಅವರಿಂದಲೂ ಸಹಾಯ ನಮಗೆ ದೊರತೇ ದೊರೆಯುತ್ತದೆ. ಸದ್ಯಕ್ಕೆ ಅವರಿಂದ ಸ್ವಲ್ಪ ಹೆಚ್ಚಿಗೆ ಕಂದಾಯ ಪಡೆಯಬೇಕೆಂದು ನನ್ನ ಅಭಿಮತ.

ಇನ್ನೊಂದು ವಿಚಾರ. ಭೂಸುಧಾರಣೆಯ ವಿಚಾರದಲ್ಲಿ ಇಲ್ಲಿ ಹೇಳಿರುವುದು ನನಗೆ ಅರ್ಥವೇ ಆಗಿಲ್ಲ. ಹೆಚ್ಚು ಹೆಚ್ಚಿಗೆ ಜಮೀನಿರತಕ್ಕ, ಸಾವಿರಾರು ಎಕರೆಗಳನ್ನೊಳಗೊಂಡಿರುವ ಇನಾಂತಿ ಮುಂತಾದುವುಗಳೆಲ್ಲಾ ಹೋಗಿ, ರೈತನಾಗಿರುವವನೇ, ಅಥವಾ ಉಳುವವನೇ ಒಡೆಯನಾಗಿರಬೇಕೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ನಾನೂ ಒಪ್ಪುತ್ತೇನೆ. ಆದರೆ, ಹೀಗೆ ಮಾಡುವುದರಲ್ಲಿ ಒಂದಂಶವನ್ನು ಮರೆಯಬಾರದು. ಎಷ್ಟೋ ಜನರು ಮನೆಯಲ್ಲಿ ಗಂಡ ಸತ್ತು ವಿಧವೆಯರಾಗಿಯೋ, ಅಥವಾ ಮಕ್ಕಳೆಲ್ಲಾ ಮೈನರುಗಳಾಗಿಯೋ ಇದ್ದು ಜಮೀನುಗಳನ್ನು ತಾವೇ ಮಾಡಲಾಗದೆ ಷಿಕ್ಮಿದಾರರಿಗೆ ಕೊಟ್ಟಿದ್ದರೆ, ಅಂಥ ಸಂದರ್ಭದಲ್ಲೂ ಉಳುವವನಿಗೆ ಕೊಡಬೇಕೆಂದು ಹೇಳುವುದನ್ನು ನಾನು ಒಪ್ಪುವುದಿಲ್ಲ. ಇದನ್ನು ಸೂಕ್ತ ರೀತಿಯಲ್ಲಿ ಮಾರ್ಪಾಡು ಮಾಡಬೇಕು. ಏಕೆಂದರೆ, ಅದನ್ನು ಸರಿಮಾಡದಿದ್ದರೆ, ಮುಂದೆ ಮೈನರ್ ಮಕ್ಕಳು ಮೆಜಾರಿಟಿ ಬಂದು ಕೆಲಸ ಮಾಡುತ್ತೇವೆ ಎನ್ನುವಾಗ ಅವರಿಗೆ ಅನ್ಯಾಯಮಾಡಿದಂತಾಗುತ್ತದೆ. ಇಷ್ಟನ್ನು ಹೇಳಿ ಶ್ರೀಮನ್ಮಹಾರಾಜರವರ ಕೊಟ್ಟ ಭಾಷಣವನ್ನು ಸ್ವಾಗತಿಸುತ್ತೇನೆ.

**Sr B. T. KEMPARAJ** (Bangalore South-Scheduled Castes).—Mr. Speaker Sir, I welcome the Motion of Address of Thanks, placed before the House by our friend Sri Huchmasthy Gowda. As far as the speech made by the Rajpramukh regarding the Re-organisation of States by the Boundary Commission is concerned, our friends have already said much. Therefore it may suffice to say that that question may exhaustively be discussed when the Report of the Fact Finding Committee comes before this House. Anyhow Sir, His Highness's address has pointed out a very important problem that draws the attention of every citizen—not only of the Mysore State but of India. As we already know, there are three kinds of States: A, B and C. The State should take some from one or the other for the purpose of administration and also for the convenience of the working of the Five-Year Plan and other problems.

As far as Educational Reforms are concerned, it is really a good thing and it is a matter for gratification that these reforms have been inaugurated on the 30th January 1955. Though the Reforms have been given effect to, we do not find the reforms in actual practice. Only the change of some books and promotion of students from lower classes to the next higher classes have taken place without examination. But what is contemplated under this reform is not strictly carried into effect. When the students are going to schools under this new scheme, the Government should have thought of giving them all the facilities and other equipments. To give an illustration, it is stated in the reforms scheme that the students should be trained in the art of spinning the thread, and with this object the schools have been supplied with Thaklies, but there is no provision made for the supply of cotton. So, when you give them Thaklies and when there is no cotton supplied, how can we be satisfied with this reform which is intended to make provision for these students to learn hand-work and other kinds of work as they study, in order to enable them to earn? Therefore, when this reform was introduced, the Government should have thought of giving them adequate facilities to make the students attend to the work which they have specifically mentioned in the Report. Therefore, I think that Government will make it a point to specify, as some of my friends have already mentioned, the necessary text-books, the necessary equipment for undertaking the working of the scheme in the proper way.

4 P.M.

As far as land reforms are concerned, we have already passed one Bill which is in the stage of receiving the consent of the President for the last $1\frac{1}{2}$ years. I cannot understand as to why such an inordinate delay is caused in getting this Bill approved by the President. The Government might be thinking of introducing the Bill and getting the approval of this House but not pursuing the matter to a final stage. Regarding the other Bills that are contemplated to be introduced in this House, when each Bill is taken into consideration, there will be room for us to discuss it at length.

As far as the K.G.F. Gold Reviewing Committee Report is concerned, when that Report is placed before this House, there will be scope for us to express our opinion.

Regarding District Boards and Taluk Development Committees, suffice it to say that the Bill is coming before this House after a good deal of controversial differences of opinion. As far as Taluk Development Committees are concerned, there is a good deal of differences of opinion expressed by some of our friends. Only one point which I can say here is, to have elections directly both to Taluk Development Committees and District Boards will be a very difficult task. Therefore, it is essential that there should be a Taluk Development Committee at the Taluk level to look after the Development works of the Taluk concerned.

As far as the Five-Year Plan is concerned, much has been said by our friends. Coming to the working of this Plan, it is said that it is the desire of not only the State Government but also of the Central Government to see that proper attention, care and caution is paid to the all round development of the village population. They will take this factor seriously into consideration. It is essential to think and also to feel how far it will be possible to tackle all these problems. Some of our friends who have already spoken, have given their opinion to the effect that there should not be fresh taxation and it should not be thought of. There should be development from all sides; more particularly the village should develop in almost all directions. There are two things for our consideration. One is the need, the necessity and other problems of the village population should be attended to. Secondly, no fresh taxation measure should be thought of. Therefore, the question that arises here is, how can it be possible to meet the exigencies and demands of the village population when there is no room to think of fresh taxation. Therefore, it is necessary and also a very important problem for us to think awhile and take a definite decision as to the levy of fresh taxation.

As far as the land reform is concerned, I may say only about one thing, that is, the ceiling limit. Regarding the ceiling limit, I can find that there is great apprehension in the minds of some of our Hon'ble friends. I connot understand why they should feel like that. As we can see from the Tenancy Bill introduced last time, no tiller is supposed to be made the owner of the soil. There is only a guarantee to be given for a specified period to a tenant so that he may not be evicted under any circumstances. Regarding the ceiling limit, that is a question which we have to consider in future.

Specially the Mysore Weights and Measures (Amendment) Bill is a very important measure which the Government should have brought earlier because there is a good deal of confusion in the system of weights and measures that is existing at present in the State. The ryots have been put to very great hardship while they bring their articles or produce for sale in the market. I personally see how the middlemen exploit the ryots. Therefore, it is necessary to bring this measure as early as possible.

With these words, I support the Motion of Address of Thanks brought by our friend before this House.

ಶ್ರೀ ಪಿ. ಆರ್. ರಾಮಯ್ಯ (ಬಸವನಗುಡಿ).—ಸ್ವಾಮಿ, ಈಗ ಸಭೆಯ ಮುಂದೆ ಇರುವ ವಂದನಾ ನಿರ್ಣಯವನ್ನು ಅನುಮೋದಿಸುತ್ತ ನಾನು ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ.

ಈ ಸ್ಟೇಟ್ಸ್ ರೀಆರ್ಗನೈಸೇಷನ್ ಸಮಿತಿಯ ವಿಷಯದಲ್ಲಿ ನಮ್ಮ ಮೈಸೂರು ದೇಶದ ಪಾತ್ರವೇನೆಂಬುದನ್ನು ನಿರ್ಧರಿಸತಕ್ಕ ವಿಚಾರದಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕಂಥ ಮಾತುಗಳ ಬಗ್ಗೆ ಸದಸ್ಯರು ವಿಧವಿಧವಾಗಿ ಅರ್ಥಮಾಡಿಕೊಂಡಿರುವ ಹಾಗೆ ಕಾಣುತ್ತಿದೆ. ಅವರು ತಮ್ಮ ಭಾಷಣದಲ್ಲಿ—

> "Increased prosperity and well-being are the only justifications for disturbing the *status quo*."

ಎಂದು ಅಪ್ಪಣೆ ಕೊಡಿಸಿದ್ದಾರೆ. ಇದರ ಅಭಿಪ್ರಾಯ ಏನೆಂದರೆ, 'increased prosperity and well-being' ಎಂಬತಕ್ಕಂಥಾದ್ದು ಕೇವಲ ನಮ್ಮ ಒಂದು ಮೈಸೂರು ದೇಶದ ಜನರಿಗೆ ಮಾತ್ರ ಅನ್ವಯಿಸಿರತಕ್ಕದ್ದಾಗಿಲ್ಲ. ಇದು ಇನ್ನೂ ಹೊರಗಡೆಯಲ್ಲಿರತಕ್ಕವರಿಗೂ ಹೆಚ್ಚಿಗೆ ಅನ್ವಯಿಸತಕ್ಕದ್ದಾಗಿದೆ. . . .

ಒಬ್ಬ ಸದಸ್ಯರು.—ಅವರು ಹೇಳಿರುವುದು 'ಸರ್ವೇ ಜನಾಃ ಸುಖಿನೋಭವಂತು' ಎಂಬುದಾಗಿದೆ.

ಶ್ರೀ ಪಿ. ಆರ್. ರಾಮಯ್ಯ.—ಹೌದು; ಅದೇ ತತ್ವ. ಆದರೆ ನಾವು ಇದನ್ನು ವಿಮರ್ಶೆಮಾಡುವಾಗ ಹೀಗೆ ನಮ್ಮ ಸಂಸ್ಥಾನವನ್ನು ವಿಸ್ತಾರ ಮಾಡಿದರೆ ಇದರಿಂದ ಜನರಿಗೆ ಜೀವನದ ಸೌಕರ್ಯ ಇನ್ನೂ ಹೆಚ್ಚಾಗುತ್ತದೆಯೇ, ಇಲ್ಲವೇ ಎಂಬುದನ್ನು ನಾವು ಅಂಕಿ ಅಂಶಗಳ ಸಮೇತ ನೋಡಿ ಅನುಮೋದಿಸಬೇಕಾಗಿದೆ. ಇದರ ಬಗ್ಗೆ ಆ ಅಂಕಿ ಅಂಶಗಳ ಸಮಿತಿಯವರು ಸರ್ಕಾರದವರಿಗೆ ಕೆಲವು ಶಿಫಾರ್ಸುಗಳನ್ನು ಮಾಡಿದ್ದಾರೆ. ಆ ಶಿಫಾರ್ಸುಗಳ ಬಗ್ಗೆ ಒಪ್ಪಿಸಿರುವ ವರದಿಯ ಬಗ್ಗೆ ಚರ್ಚೆ ನಡೆಸಲು ನಮಗೊಂದು ಅವಕಾಶವನ್ನು ಸರ್ಕಾರದವರು ಒದಗಿಸಿದ್ದಾರೆ. ಆ ಅಂಶಗಳನ್ನು ನಾವು ಚರ್ಚೆ ಮಾಡುವಾಗ ಈ ವಿಶೇಷ ಅಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗಿರುತ್ತದೆ. ಆದರೆ ನಾವು ಇಲ್ಲಿ ವಿಮರ್ಶೆ ಮಾಡತಕ್ಕಂಥ ವಿಚಾರಗಳ ಪರಿಣಾಮ ಕೇವಲ ನಮ್ಮ ಒಂದು ದೇಶದ ಜನರಮೇಲೆ ಪರಿಣಾಮ ಹೊಂದತಕ್ಕವುಗಳಾಗಿರದೆ ಮತ್ತು ಇದನ್ನು ನಿರ್ಧರಿಸುವ ಜವಾಬ್ದಾರಿ ಸಹಿತ ನಮ್ಮ ಮೈಸೂರಿಗೇ ಸೇರದೆ ಇತರ ಪ್ರಜಾ ವರ್ಗದ ಮೇಲೂ ಇದರ ಪರಿಣಾಮ ಮತ್ತು ಜವಾಬ್ದಾರಿಗಳು ಬಿದ್ದಿರುತ್ತವೆಂಬುದನ್ನು ನಾವು ಪರಿಗಣನೆ ಮಾಡಬೇಕಾಗಿದೆ. ನಾವು ಈ ವಿಚಾರಗಳನ್ನು ಆ ಒಂದು ವಿಶಾಲ ದೃಷ್ಟಿಯಿಂದ ನೋಡಬೇಕಾಗಿದೆ. ಹಾಗೆ ಮಾಡದೆ ನಾವು ಈ ವಿಚಾರವನ್ನು ನಮ್ಮ ಮೂಗಿನ ನೇರಕ್ಕೆ ನಾವು ನೋಡಿದರೆ ಇದು ಸರಿಯಾಗಿರುವುದಿಲ್ಲ. ಸ್ಟೇಟ್ಸ್ ರೀಆರ್ಗನೈಜೇಷನ್ ಸಮಿತಿಯವರು ಯಾವ ಒಂದು ವಿಶಾಲ ಭಾವನೆಯಿಂದ ಈ ಪ್ರಶ್ನೆಯನ್ನು ನೋಡಿಕೊಂಡು ಬಂದಿದ್ದಾರೋ ಅಂಥ ಒಂದು ವಿಶಾಲ ಭಾವನೆಯನ್ನಿಟ್ಟುಕೊಂಡು ನಾವು ಈ ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ. ಈ ವಿಷಯದಲ್ಲಿ ಕೂಲಂಕಷವಾಗಿ ಚರ್ಚೆಮಾಡಲು ಈ ಸಭೆಗೆ ಅವಕಾಶ ಸಿಕ್ಕಿರುತ್ತದೆ. ಆದರೆ ಈ ವಿಷಯದಲ್ಲಿ ವಿಮರ್ಶೆ ನಡೆಸತಕ್ಕ ಬಗ್ಗೆ ಸ್ವಲ್ಪ ಮಟ್ಟಿಗೆ ಈಗಾಗಲೇ ದೃಷ್ಟಿಕೋಣ ಬದಲಾವಣೆಯಾಗಿದೆ. ಕೇವಲ ಒಂದು ಭಾಷಾವಾರು ದೃಷ್ಟಿಯಿಂದಲೇ ಪ್ರಾಂತ್ಯಗಳನ್ನು ಪುನರ್ವಿಂಗಡಣೆ ಮಾಡುವುದು ಅಷ್ಟು ಸರಿಯಾದುದಲ್ಲ, ಇದರಿಂದ ನಮ್ಮ ದೇಶದ ಕ್ಷೇಮ ಸಾಧನೆಯಾಗುವುದಿಲ್ಲ ಎನ್ನತಕ್ಕಂಥ ಒಂದು ವಾದ ನಡೆಯುತ್ತಿರುವುದಾಗಿ ಕಂಡುಬಂದಿದೆ. ಈ ಸಂಬಂಧವಾಗಿ ನಮಗೆಲ್ಲಾ ಈ ಹಿಂದೆ ಇದ್ದ ಭಾವನೆಗೂ, ಈಗ ಹೊಸದಾಗಿ ಬದಲಾವಣೆಯಾಗಿ ಬಂದಿರತಕ್ಕಂಥ ಭಾವನೆಗೂ ಇರುವಂಥ ವ್ಯತ್ಯಾಸವನ್ನು ನಾವು ಮುಖ್ಯವಾಗಿ ಗಮನಿಸಬೇಕಾಗಿದೆ. ನಮ್ಮ ದೇಶದಲ್ಲಿ ಒಂದು ಭಾಷೆಯಿಲ್ಲ, ಅನೇಕ ಭಾಷೆಗಳಿವೆ. ಆದರೆ ನಾವು ಈ ನಮ್ಮ ಸಮಸ್ಯೆಯನ್ನು ಪರಿಹರಿಸಿಕೊಳ್ಳಬೇಕಾಗಿದ್ದರೆ ಈ ಭಾಷೆಯ ಬಗ್ಗೆ ನಾವೇನೂ ಅಷ್ಟು ಭಯಪಡಬೇಕಾಗಿಲ್ಲ. ಸ್ಟೇಟ್ಸ್ ರೀಆರ್ಗನೈಜೇಷನ್ ಸಮಿತಿಯವರು ಈ ವಿಷಯಗಳನ್ನೆಲ್ಲಾ ವಿಮರ್ಶೆಮಾಡಿ ನೋಡಿ, ಅವರು ಕೆಲ ಕೆಲವು ಭಾಗಗಳು ನಮ್ಮ ಮೈಸೂರಿಗೆ ಸೇರಬೇಕಾಗಿರುತ್ತವೆಂದು ಹೇಳಿದರೆ ನಾವು ಅದಕ್ಕೇನೂ ಭಯಪಡಬೇಕಾಗಿಲ್ಲ. ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರತಕ್ಕಂಥ ಈ ಭಾಷಣದಲ್ಲಿಯೂ ಅದೇ ಅಭಿಪ್ರಾಯ ಕಂಡುಬರುತ್ತಿದೆ. ಇದರಲ್ಲಿ ಮುಖ್ಯವಾಗಿ ಜನರೆಲ್ಲರೂ ಹೆಚ್ಚು ಸುಖ ಸಂತೋಷದಿಂದ ಇರುವ ಹಾಗೆ ಆಗಬೇಕು ಅನ್ನುವುದು ಕಂಡು ಬರುತ್ತದೆ. ಆದರೆ ನಾವು ಒಂದು ಅಂಶವನ್ನು ಮುಖ್ಯವಾಗಿ ಆಲೋಚನೆ ಮಾಡಬೇಕಾಗಿದೆ. ನಾವು ಎಷ್ಟೇ ಈ ಭಾಷೆಯ ವಿಚಾರವಾಗಿ ಅಷ್ಟು ಒತ್ತಾಯ ಕೊಡಕೂಡದೆಂದು ಹೇಳಿದರೂ ನಾವು ಈ ಡೆಮೊಕ್ರೆಟಿಕ್ ಆಡಳಿತದ ವಿಚಾರವಾಗಿ ಮಾತನಾಡುವಾಗ ಅದರಲ್ಲಿ ಈ ಭಾಷೆಯ ವಿಚಾರ ಇದ್ದೇ ಇರುತ್ತದೆಂಬುದು ಕಂಡು ಬರುತ್ತದ. ಭಾಷೆಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟುಕೊಂಡು ಬಂದರೆ ಆದರಿಂದ ದೇಶದಲ್ಲಿ ಐಕಮತ್ಯ ಕೂಡ ಉಂಟಾಗುತ್ತದೆ. ಈ ರೀತಿಯಾಗಿ ಒಂದು ಡೆಮೊಕ್ರೆಟಿಕ್ ಆಡಳಿತವನ್ನು ನಾವು ನಡೆಸುತ್ತಿರಬೇಕಾದರೆ ಆಗ ಅದರ ಹಿಂದೆಯೇ ಈ ಭಾಷೆಯ ವಿಚಾರವೂ ಬಂದೇ ಬರುತ್ತದೆ. ನಮ್ಮ ಅಕ್ಕಪಕ್ಕದ ಪ್ರಾಂತ್ಯಗಳವರು ನಮ್ಮ ದೇಶಕ್ಕೆ ಸೇರಿಕೊಳ್ಳಲು ಹಾತೊರೆಯುತ್ತಿದ್ದಾರೆ. ನಾವು ಅವರ ಹಾರೈಕೆ ಆಕಾಂಕ್ಷೆಗಳನ್ನು ಈಡೇರಿಸಬೇಕಾಗಿದೆ· ಅದಕ್ಕಾಗಿ ನಾವು ಅವರನ್ನು ಸ್ವಾಗತಿಸಬೇಕಾಗಿದೆ.

ಆದರೆ ಇನ್ನು ಈ ಪ್ರಶ್ನೆಯನ್ನು ಡೆವಲಪ್‌ಮೆಂಟ್ ವಿಚಾರಗಳ ಬಗ್ಗೆ ತುಲನೆಮಾಡಿ ನೋಡಬೇಕಾಗಿದೆ. ನಾವು ಹೊರಗಡೆಯವರಿಗಿಂತಲೂ ಅನೇಕ ವಿಷಯಗಳಲ್ಲಿ ಮುಂದುವರಿದಿದ್ದೇವೆ, ಅವರು ಹಿಂದೆ ಬಿದ್ದಿದ್ದಾರೆ. ಹಾಗೆ ಹಿಂದೆ ಬಿದ್ದಿರತಕ್ಕವನ್ನು ಮುಂದೆ ತರಲು ಆಲೋಚನೆ ಮಾಡುವಾಗ ನಾವು ಸ್ವಲ್ಪ ಹಿಂದೆ ಸರಿಯಬೇಕು, ಇಲ್ಲವಾದರೆ ಅದರಿಂದ ಒಂದು ಆಕ್ಷೇಪಣೆ ಬರಬಹುದು ಎಂಬುದಾಗಿ ಕೆಲವರ ಭಾವನೆ ಇರಬಹುದು. ಹಾಗೆ ನೋಡಿದರೆ ನಮ್ಮ ಭಾರತವೇ ಇನ್ನೂ ಸರಿಯಾಗಿ ಅಭಿವೃದ್ಧಿ ಹೊಂದಿಲ್ಲ, ಎಂದರೆ, ಇದು ಇನ್ನೂ ಚೆನ್ನಾಗಿ ಅಭಿವೃದ್ಧಿ ಹೊಂದದೆ ಇರತಕ್ಕಂಥ ದೇಶ ಎಂಬುದಾಗಿ ಹೇಳಿರತಕ್ಕದ್ದು ಇಡೀ ಭಾರತಕ್ಕೇ ಅನ್ವಯಿಸತಕ್ಕಂಥ ಪದವಾಗಿದೆ. ನಮ್ಮ ದೇಶದಲ್ಲಿ ಇನ್ನೂ ಅನೇಕ ಕಾರ್ಖಾನೆಗಳು ಏರ್ಪಾಡಾಗಬೇಕಾಗಿದೆ. ನಿರುದ್ಯೋಗವನ್ನು ಹೋಗಲಾಡಿಸಬೇಕು, ಹೀಗೆ ಇನ್ನೂ ಅನೇಕ ಬಾಬುಗಳಲ್ಲಿ ಇದೇ ಭಾರತವೇ ಹಿಂದೆ ಬಿದ್ದಿದೆ. ಅಖಿಲ ಪ್ರಪಂಚದಲ್ಲಿ ನಮ್ಮ ದೇಶ ಇನ್ನೂ ಅಂಥ ದೊಡ್ಡ ಸ್ಥಾನ ಗಳಿಸಿಲ್ಲ. ಬೇರೆ ದೇಶಗಳವರಂತೆ ನಾವೂ ಮುಂದುವರಿಯಬೇಕಾದರೆ ನಮಗೆ ಈ ಪಂಚವಾರ್ಷಿಕ ಯೋಜನೆಗಳು ಒಂದು ಎರಡು ಅಲ್ಲ ಇನ್ನೂ ಒಂದು ಬೇಕಾಗಬಹುದು. ಆದುದರಿಂದ ನಮ್ಮ ಮೈಸೂರು ಯಾವುದೋ ಒಂದು ಉನ್ನತವಾದ ಸ್ಥಿತಿಗೆ ಬಂದಿದೆ ಎಂದು ನಾವು ಸಂತೋಷಪಟ್ಟುಕೊಳ್ಳುವ ಹಾಗಿಲ್ಲ. ಭಾರತದ ಸ್ಥಿತಿಗೂ ಮೈಸೂರಿನ ಸ್ಥಿತಿಗೂ ವ್ಯತ್ಯಾಸ ಹೆಚ್ಚಾಗಿಲ್ಲ. ಆದುದರಿಂದ ಇನ್ನೂ ಹೆಚ್ಚು ಜನರು ಬಂದು ಇಲ್ಲಿಗೆ ಸೇರಿದರೆ ನಮ್ಮ ಸ್ಥಿತಿ ಕಡಮೆಯಾಗುತ್ತದೆ, ಆಯತಪ್ಪುತ್ತದೆ ಎಂದು ನಾವು ಸಂಶಯಪಡಬೇಕಾಗಿಲ್ಲ. ವಿಶಾಲ ದೃಷ್ಟಿಯಿಂದ ಇಡೀ ಭಾರತದ ದೃಷ್ಟಿಯಿಂದ ಇತರರಿಗೂ ನಮಗೂ ಅನುಕೂಲವಾಗುವುದನ್ನು ನೋಡಬೇಕು. ಆರ್ಥಿಕ ಪರಿಸ್ಥಿತಿಯಲ್ಲಿ *status quo* ಎನ್ನುವುದು ಇಲ್ಲ. ಹಾಗೆಯೇ ರಾಜಕೀಯ ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿಯೂ *status quo* ಎನ್ನುವುದು ಇಲ್ಲವೆಂದು ನನ್ನ ಅಭಿಪ್ರಾಯ. ಯಾವಾಗಲೂ ಹಿಂದಿದ್ದರೂ ಮುಂದೆ ಹೋಗುತ್ತದೆ ಅಥವಾ ಹಿಂದೆ ಹೋಗುತ್ತಿರುತ್ತದೆ. ಆದುದರಿಂದ *status quo* ಎನ್ನುವುದು ಸರಿಯಲ್ಲ. ಈ ದೃಷ್ಟಿಯಿಂದ ನಾವು ಈ ಸಮಸ್ಯೆಯನ್ನು ಬಗೆಹರಿಸಬೇಕಾಗಿಲ್ಲ, ವಿಶಾಲ ದೃಷ್ಟಿಯಿಂದ ಬಗೆಹರಿಸಬೇಕೆಂದು ನನ್ನ ವಿನಂತಿ.

ಇನ್ನೂ ಅನೇಕ ವಿಷಯಗಳಿವೆ. ಅವುಗಳಲ್ಲಿ ವಿದ್ಯಾಭ್ಯಾಸದ ವಿಷಯವನ್ನು ಪ್ರಸ್ತಾಪಿಸಬೇಕಾಗಿದೆ. ಇದು ದೊಡ್ಡ ವಿಷಯ. ಹೊಸ ಮಂತ್ರಿಮಂಡಲ ಬಂದಮೇಲೆ ಇದಕ್ಕೆ ವಿಶೇಷ ಗಮನಕೊಟ್ಟು ಇದಕ್ಕೊಂದು ಸಮಿತಿಯನ್ನೇರ್ಪಾಡು ಮಾಡಿದರು. ಆ

ಸಮಿತಿಯವರು ಕೆಲವು ಶಿಫಾರಸುಗಳನ್ನು ಮಾಡಿದರು. ಈ ಸುಧಾರಣೆಗಳನ್ನು ಸರ್ವೋದಯದ ದಿವಸ ಜಾರಿಗೆ ತಂದಿರುವುದು ಬಹಳ ಸಂತೋಷದ ವಿಷಯ. ಸರ್ವೋದಯದ ದಿವಸ ಈ ಸುಧಾರಣೆಗಳನ್ನು ಜಾರಿಗೆ ತಂದಿದ್ದರಿಂದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಯಾವ ಒಂದು ಭಾವನೆ ಉಂಟಾಗುತ್ತದೆ ಎಂಬುದನ್ನ ಗಮನಿಸಿದರೆ, ಇದು ಬಹಳ ದೊಡ್ಡ ಸುಧಾರಣೆ ಎಂಬುದು ಮನದಟ್ಟಾಗುತ್ತದೆ. ಇದಕ್ಕಾಗಿ ಸರ್ಕಾರವನ್ನು ಹೃತ್ಪೂರ್ವಕವಾಗಿ ವಂದಿಸಬೇಕಾಗಿದೆ. ಸ್ವತಂತ್ರ ಭಾರತದ ನಿರ್ಮಾಣದಲ್ಲಿ ಮಹಾತ್ಮಾಗಾಂಧಿಯವರ ಪಾತ್ರ ದೊಡ್ಡದು. ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಾವು ನಡೆಯಬೇಕು. ಇದಕ್ಕೆ ನಾವಿನ್ನೂ ಸಮರ್ಥರಾಗಿಲ್ಲ. ವಿದ್ಯಾಭ್ಯಾಸದಲ್ಲಿಯೂ ಅವರ ಮಾರ್ಗವನ್ನನುಸರಿಸಬೇಕು. ಸಕ್ರಿಯಾ ವಿದ್ಯಾಭ್ಯಾಸ ಅಥವಾ ಮೂಲ ಶಿಕ್ಷಣ ಕ್ರಮದಲ್ಲಿ ನಮ್ಮ ವಿದ್ಯಾಭ್ಯಾಸವನ್ನು ಸುಧಾರಣೆಗೆ ತರಬೇಕೆಂದು ಸರ್ಕಾರದವರು ಪ್ರಯತ್ನಪಡುತ್ತಿರುವುದು ಬಹಳ ಸ್ತೋತ್ರಾರ್ಹವಾದುದು. ಆದರೆ ಈ ಕಾರ್ಯದಲ್ಲಿ ಯಶಸ್ವಿಯಾಗಿದ್ದಾರೆಂದು ಹೇಳುವಹಾಗಿಲ್ಲ. ಇದು ಒಂದು ದಿವಸದಲ್ಲಿ ಆಗುವ ಕಾರ್ಯವಲ್ಲ. ಜಾರಿಗೆ ತರಬೇಕು; ಇನ್ನೂ ಹತ್ತಾರು ವರ್ಷ ಪ್ರಯತ್ನಪಟ್ಟರೂ ಅವರ ಬೇಸಿಕ್ ಎಜ್ಯುಕೇಷನ್ ಆದರ್ಶವನ್ನು ಆಚರಣೆಗೆ ತರುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಪ್ರಯತ್ನ ನಡೆಯುತ್ತಿದೆ, ಇದು ಒಳ್ಳೆಯ ಪ್ರಯತ್ನ. ಸರ್ವೋದಯದ ದಿವಸ ಈ ಪ್ರಯತ್ನವನ್ನು ಪ್ರಾರಂಭ ಮಾಡಿರುವುದು ಒಳ್ಳೆಯದು, ಇದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಇತರ ಸರ್ಕಾರಗಳೂ ಕೂಡ ವಿದ್ಯಾಭ್ಯಾಸದ ವಿಷಯದಲ್ಲಿ ಬಹಳ ಗಮನ ಕೊಡುತ್ತಿದ್ದಾರೆ. ಕೆಲವು ಕಡೆ ಮಾತನಾಡಿದುದನ್ನು ನೋಡಿದರೆ, ಅದರಲ್ಲಿಯೂ ಆವಡಿಯಲ್ಲಿ ಮಾತನಾಡುತ್ತಿದ್ದುದನ್ನು ನೋಡಿದ್ದರಲ್ಲಿ, ಸರ್ವೋದಯದ ದಿವಸ ಜಾರಿಗೆ ತಂದ ವಿಷಯದಲ್ಲಿ ಅನೇಕರು ಬಹಳ ಸಂತೋಷಪಟ್ಟಿದ್ದಾರೆ. ಇನ್ನೇನಿಲ್ಲದಿದ್ದರೂ ಇದರಿಂದ ಹೊಸ ಭಾವನೆ, ಹೊಸ ಸ್ಫೂರ್ತಿ ಬರುತ್ತದೆ, ಸರ್ವೋದಯದ ಒಳ್ಳೆಯ ಆದರ್ಶ ಜನರ ಮನಸ್ಸಿನ ಮುಂದೆ ಬರುತ್ತದೆ ಎಂದು ಹೇಳಿದ್ದಾರೆ. ಒಂದು ವಿಷಯವನ್ನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರಬೇಕಾಗಿದೆ. 1946 ನೆಯ ಇಸವಿಯಲ್ಲಿ ಮಹಾತ್ಮಾ ಗಾಂಧಿಯವರು ಮದರಾಸಿಗೆ ಬಂದಿದ್ದರು. ಆಗ ದಕ್ಷಿಣ ಭಾರತ ಹಿಂದೀಪ್ರಚಾರ ಸಮಿತಿಯ ರಜತ ಮಹೋತ್ಸವ ಮತ್ತು ಬೇಸಿಕ್ ಎಜ್ಯುಕೇಷನ್ ಸಮ್ಮೇಳನ ನಡೆಯಿತು. ಅಲ್ಲಿ ಮೂಲ ಶಿಕ್ಷಣದ ಉದ್ದೇಶವೇನೆಂದು ಒಬ್ಬರು ಪ್ರಶ್ನೆಮಾಡಿದರು. ಅದಕ್ಕೆ ಉತ್ತರವಾಗಿ ಮಹಾತ್ಮಾ ಗಾಂಧಿಯವರು ಹೇಳಿದ ಮಾತು ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ಇಂದಿಗೂ ಉಳಿದಿದೆ; ಈಗಲೂ ಕಿವಿಯಲ್ಲಿ ಧ್ವನಿಗೊಡುತ್ತಿದೆ. ಎಲ್ಲರನ್ನೂ ಸ್ಥಿತಪ್ರಜ್ಞರನ್ನಾಗಿ ಮಾಡಬೇಕೆಂಬುದು ಅದರ ಉದ್ದೇಶವೆಂದು ಹೇಳಿದರು. ಸ್ಥಿತಪ್ರಜ್ಞನ ಲಕ್ಷಣಗಳನ್ನು ಭಗವದ್ಗೀತೆಯ ಎರಡನೆಯ ಅಧ್ಯಾಯದಲ್ಲಿ ಹೇಳಿದೆ. ಮಹಾತ್ಮಾ ಗಾಂಧಿಯವರೂ ಹಾಗೆಯೇ ಪ್ರಯತ್ನಮಾಡಿದರು. ಮೂಲ ಶಿಕ್ಷಣದ ಉದ್ದೇಶ ಮನುಷ್ಯನು ಕಾಡುಮೃಗದ ಹಾಗೆ ವರ್ತಿಸದೆ, ಸ್ವಾರ್ಥಿಯಾಗಿ ವರ್ತಿಸದೆ, ಪರೋಪಕಾರಿಯಾಗಿ ಸಂಯಮಶೀಲನಾಗಿ ವರ್ತಿಸಲು ಏನುಬೇಕೋ ಅದು ಸಿಕ್ಕುತ್ತದೆ. ಈ ಮೂಲ ಶಿಕ್ಷಣದಲ್ಲಿ. ಆದುದರಿಂದ ಇದನ್ನು ಆಚರಣೆಗೆ ತಂದು ಮನುಷ್ಯನನ್ನು ಸ್ಥಿತಪ್ರಜ್ಞನಾಗಿ ಮಾಡಬೇಕೆಂದು ಮಹಾತ್ಮಾ ಗಾಂಧೀಯವರು ಹೇಳಿದುದು ನನಗೆ ಜ್ಞಾಪಕಕ್ಕೆ ಬರುತ್ತದೆ. ಮೂಲಶಿಕ್ಷಣದ ಕರ್ತರು ಮಹಾತ್ಮಾ ಗಾಂಧಿಯವರಾದುದರಿಂದ ಇದನ್ನು ಸರ್ವೋದಯದ ದಿವಸ ಜಾರಿಗೆ ತಂದಿರುವುದು ಶ್ಲಾಘನೀಯವಾದುದು.

ಇನ್ನೊಂದು ವಿಷಯ. ಸ್ವಾತಂತ್ರ್ಯ ಬಂದಮೇಲೆ ನಮ್ಮ ದೇಶದಲ್ಲಿ ಹೊಸ ಸಮಾಜವನ್ನು ಸೃಷ್ಟಿಸಬೇಕೆಂದು ನಾವು ತೊಡಗಿದ್ದೇವೆ. ಈ ಸಮಾಜ ಯಾವ ರೀತಿ ಇರಬೇಕು, ಇದರ ಅಡಿಪಾಯ ಯಾವ ರೀತಿ ಇರಬೇಕು, ಇದು ಯಾವ ರೀತಿ ಬೆಳೆಯಬೇಕು ಎಂಬ ಬಗ್ಗೆ ಸಂಪೂರ್ಣ ಚಿತ್ರ ನಮ್ಮ ಕಣ್ಣ ಮುಂದೆ ಬಂದಿಲ್ಲ. ಇಂಗ್ಲೀಷಿನಲ್ಲಿ 'the picture is not complete' ಎಂದು ಹೇಳಬಹುದು. ನಾವು ಮಾಡತಕ್ಕ ಸುಧಾರಣೆಗಳ ಮುಖ್ಯ ಉದ್ದೇಶವೇನೆಂದರೆ, ನಮ್ಮ ದೇಶದಲ್ಲಿ ಬಡತನವೆನ್ನುವುದು ನಿರ್ಮೂಲವಾಗಬೇಕು, ಐಶ್ವರ್ಯವಂತರಿಗೂ ಬಡವರಿಗೂ ಇರುವ ವ್ಯತ್ಯಾಸ ಆದಷ್ಟು ಕಡಮೆಯಾಗಬೇಕು ಎನ್ನುವುದು. ಆರ್ಥಿಕ ಸಮತೆ ಬರಬೇಕೆಂಬ ಉದ್ದೇಶದಿಂದ ನಮ್ಮ ಸಮಾಜವನ್ನು ನಾವು ಪುನರ್ವ್ಯವಸ್ಥೆಗೊಳಿಸುತ್ತಿದ್ದೇವೆ. ಇದರಲ್ಲಿ ಅನೇಕ ತಾತ್ವಿಕ ವಿಷಯಗಳು ಅಡಗಿವೆ. ಬಹುಶಃ ನಮ್ಮಲ್ಲಿ ಅನೇಕರು ಈ ತಾತ್ವಿಕ ವಿಷಯಗಳ ಕಡೆಗೆ ಗಮನಕೊಟ್ಟಿಲ್ಲ. ತಾತ್ಕಾಲಿಕವಾಗಿ ಆಗತಕ್ಕ ಸುಧಾರಣೆಗಳನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತೇವೆ. ಮುಂದೆ ಏನು ಸಾಧಿಸಬೇಕೆಂದಿದ್ದೇವೆಂಬ ಕಡೆ ಗಮನಕೊಟ್ಟರೆ ನಮ್ಮ ಮನಸ್ಸು ಬೆಳಕಿನ ಕಡೆ ಹೋಗುವುದಕ್ಕವಕಾಶವಾಗುತ್ತದೆ. ಬಡತನವನ್ನು ಹೋಗಲಾಡಿಸುವುದಕ್ಕಾಗಿ ಈಗ ನಾವು ಮಾಡುತ್ತಿರುವುದು, ಸಾಮಾನ್ಯವಾಗಿ ಬುಲ್‌ಡೋಜರ್ ರೀತಿ ಮಾಡುತ್ತಿದ್ದೇವೆ. ಮೇಲಿರುವ ಗುಡ್ಡಗಳನ್ನು ತೆಗೆದು ಸಮಮಾಡಬೇಕೆಂದು ಹೊರಟಿದ್ದೇವೆ. ಬುಲ್‌ಡೋಜರ್ ರೀತಿ ಒಂದು ಭೌತಿಕ ರೀತಿಗೆ ಸರಿಹೋಗುತ್ತದೆ. ಆದರೆ ಆಧ್ಯಾತ್ಮಿಕ ರೀತಿಯಲ್ಲಿ ಸಾಂಸ್ಕೃತಿಕವಾಗಿ ಈ ಬುಲ್‌ಡೋಜರ್ ಕ್ರಮ ಸರಿಯೆ ಎಂಬುದನ್ನು ನೋಡಬೇಕು. ಹೊಸ ಸುಧಾರಣೆಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಒಂದು ವಿಷಯವನ್ನು ಗಮನಿಸಬೇಕು. ಸಾವಿರಾರು ವರ್ಷಗಳಿಂದ ನಮ್ಮ ದೇಶದಲ್ಲಿ ಒಂದು ಆಧ್ಯಾತ್ಮಿಕ ಭಾವನೆಯನ್ನು ಕಾಪಾಡಿಕೊಂಡು ಬರುತ್ತಿದ್ದೇವೆ. ಈ ಸುಧಾರಣೆಯಲ್ಲಿ ಇದರ ಬೆಳವಣಿಗೆಗೆ ಅವಕಾಶಕೊಟ್ಟಿದ್ದೇವೆಯೆ, ಮನುಷ್ಯ ಬರಿಯ ಅನ್ನ ತಿಂದರೆ ಸಾಕೆ, ಬೇರೆ ಇನ್ನಾವ ಕಡೆಗೂ ಗಮನಕೊಡುತ್ತಿಲ್ಲವೆ, ಅವನ ಆಲೋಚನೆ, ಬುದ್ಧಿ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆಯೆ ಎಂಬುದನ್ನು ನೋಡಬೇಕು. ಯಾವಾಗಲೂ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಆದರೆ ಹೀಗೆ ಮಾಡುವುದರಲ್ಲಿ ಒಬ್ಬ ಮನುಷ್ಯ ತನ್ನ ಆತ್ಮವನ್ನುಳಿಸಿಕೊಂಡು, ಸಂಸ್ಕೃತಿಯನ್ನು ಬೆಳೆಸಿಕೊಂಡು ಅಭಿವೃದ್ಧಿ ಹೊಂದಬೇಕಾದರೆ ಯಾವ ಏರ್ಪಾಡು ಬೇಕೆಂಬುದನ್ನು ಯೋಚನೆ ಮಾಡುತ್ತಿಲ್ಲ. ಅನ್ನ, ಬಟ್ಟೆ ಕೊಟ್ಟುಬಿಟ್ಟರೆ. ಎಲ್ಲವೂ ಆಯಿತೆಂದು ಅನೇಕರು ತಿಳಿದುಕೊಂಡಿದ್ದಾರೆ. ಆದುದರಿಂದ ನಾವು ಸುಧಾರಣೆ ವಿಷಯದಲ್ಲಿ ಆಲೋಚನೆ ಮಾಡತಕ್ಕ ಕಾಲದಲ್ಲಿ ಇವೆಲ್ಲವನ್ನೂ ಸ್ವಲ್ಪಮಟ್ಟಿಗೆ ವಿಚಾರ ಮಾಡಬೇಕು.

ಅಲ್ಲದೆ, ನಾವು ನಮ್ಮ ಪ್ರಗತಿಗೆ ಆಧಾರವಾದ ಮಧ್ಯಮ ತರಗತಿಯ ಜನರನ್ನು ತುಳಿಯುತ್ತಿದ್ದೇವೆ. ದೇಶಕ್ಕೆ ಸ್ವಾತಂತ್ರ್ಯ ತಂದವರು ಮಧ್ಯಮ ತರ

(ಶ್ರೀ ಪಿ. ಆರ್. ರಾಮಯ್ಯ.)

ಗತಿಯ ಜನರು. ನಮ್ಮ ದೇಶದಲ್ಲಿ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದಿರುವವರು ಈ ಮಧ್ಯಮ ತರಗತಿಯವರು ಅಥವಾ middle classes. ಎಲ್ಲ ಕ್ಷೇತ್ರಗಳಲ್ಲಿಯೂ ಪ್ರಗತಿಯನ್ನು ತಂದಿರುವವರು ಈ ಮಧ್ಯಮ ತರಗತಿಯವರು. ಇವರ ವಿಷಯದಲ್ಲಿ ನಾವು ಉದಾಸೀನರಾಗಿ ಇವರ ಅಭಿವೃದ್ಧಿಯ ಕಡೆಗೆ ಗಮನ ಕೊಡದೆ ಇದ್ದೇವೆ. ಮೇಲಿನವರನ್ನು ಕೆಳಗೆ ತರುವುದಕ್ಕೆ ಮತ್ತು ಕೆಳಗಿರುವವರನ್ನು ಮೇಲೆ ತರುವ ಭರದಲ್ಲಿ ಇವರನ್ನು ಬಹಳ ಮಟ್ಟಿಗೆ ಉದಾಸೀನ ಮಾಡುತ್ತಿದ್ದೇವೆ. ಇದು ನಮ್ಮ ಸರ್ಕಾರದ ನೀತಿಯಲ್ಲಿಯೂ ಕಾಣುತ್ತದೆ. ಈ ಹೊತ್ತು ನಮ್ಮ ದೇಶದಲ್ಲಿ ಉಪಾಧ್ಯಾಯರ ಮತ್ತು ಗುಮಾಸ್ತರುಗಳ ಮತ್ತು ಇತರ ನಾನ್-ಗೆಜೆಟೆಡ್ ನೌಕರರ ಕೋರಿಕೆಗಳನ್ನು ಎಷ್ಟುಮಟ್ಟಿಗೆ ಈಡೇರಿಸಿದ್ದೇವೆಂಬುದನ್ನು ಗಮನಿಸಬೇಕು. ಸರ್ಕಾರಕ್ಕೆ ಒಂದು ರೀತಿಯ ಕಂಭದ ಹಾಗಿರುವವರು ಈ ನಾನ್-ಗೆಜೆಟೆಡ್ ನೌಕರರು. ವಿದ್ಯಾಭ್ಯಾಸದ ಸೌಧಕ್ಕೆ ಅಡಿಪಾಯವಾಗಿರುವವರು ಮತ್ತು ಮಕ್ಕಳಿಗೆಲ್ಲಾ ಒಳ್ಳೆಯ ಶಿಕ್ಷಣವನ್ನು ಕೊಡುವವರು ಉಪಾಧ್ಯಾಯರುಗಳು. ಇವರ ಸ್ಥಿತಿಯನ್ನು ಎಷು ಮಟ್ಟಿಗೆ ಉತ್ತಮಪಡಿಸಿದ್ದೇವೆಂಬುದನ್ನು ಯೋಚನೆಮಾಡಬೇಕು. ನಾವು ಬಂದು ಮೂರು ವರ್ಷವಾಯಿತು ; ಇವರಿಗೆ ಒಂದು ರೂಪಾಯಿ ಸಂಬಳವನ್ನು ಹೆಚ್ಚಿಸಿದ್ದೇವೆಯೆ ? ಸರ್ಕಾರದ ಆಡಳಿತ ಸರಿಯಾದ ರೀತಿಯಲ್ಲಿ ನಡೆಯುವುದಕ್ಕೆ ಸಹಾಯ ಮಾಡುವವರು ನಾನ್-ಗೆಜೆಟೆಡ್ ನೌಕರರು. ಇವರ ಸ್ಥಿತಿಗತಿಗಳನ್ನು ಎಷ್ಟುಮಟ್ಟಿಗೆ ಗಮನಿಸಿದ್ದೇವೆ, ಇವರ ಕಷ್ಟಗಳನ್ನು ಎಷ್ಟುಮಟ್ಟಿಗೆ ನಿವಾರಣೆಮಾಡಿದ್ದೇವೆಂಬುದನ್ನು ಯೋಚನೆಮಾಡಬೇಕು. ಹೀಗೆಯೇ ರೈತರಲ್ಲಿಯೂ ವ್ಯವಸಾಯದ ಕೂಲಿಗಾರರು ಮತ್ತು ಜಮೀನ್ದಾರರು ಎಂದು ವಿಂಗಡ ಮಾಡಿದ್ದೇವೆಯೇ ಹೊರತು ಮಧ್ಯಮ ವರ್ಗದವರನ್ನು ರಕ್ಷಣೆಮಾಡಲು ಪ್ರಯತ್ನಮಾಡಿಲ್ಲ. ಹೀಗೆ ಮಧ್ಯಮ ತರಗತಿಯ ಯೋಗಕ್ಷೇಮವನ್ನು ಸರಿಯಾಗಿ ನೋಡದೇ ಹೋದರೆ ನಮ್ಮ ಸಂಸ್ಕೃತಿ ಸಂಪೂರ್ಣವಾಗಿ ನಾಶ ಹೊಂದುತ್ತದೆ. ಇಂಗ್ಲೆಂಡ್ ಅಮೇರಿಕಾ ಮುಂತಾದ ದೇಶಗಳಲ್ಲಿ ಮಧ್ಯಮ ತರಗತಿಯವರನ್ನು ಎಷ್ಟುಮಟ್ಟಿಗೆ ಗೌರವಿಸುತ್ತಿದ್ದಾರೆ, ಇವರನ್ನು ಮುಂದೆ ತರುವುದಕ್ಕೆ ಎಷ್ಟರ ಮಟ್ಟಿಗೆ ಪ್ರಯತ್ನ ಮಾಡುತ್ತಿದ್ದಾರೆಂಬುದನ್ನು ನಾವು ಗುಮನಿಸುತ್ತಿಲ್ಲ. ಇಂಥಾ ಮುಖ್ಯ ವಿಷಯಗಳನ್ನು ಯೋಚನೆಮಾಡದೆ ಯಾವುದೋ ಒಂದು ರೀತಿಯ ಆರ್ಥಿಕ ಸಿದ್ಧಾಂತಗಳಿಗೊಳಗಾಗಿ ಸುಧಾರಣೆಗಳನ್ನು ತರುತ್ತಿದ್ದೇವೆ. ಆಧ್ಯಾತ್ಮಿಕವಾಗಿ, ಹಿಂದೆ ಸಾವಿರಾರು ವರ್ಷಗಳಿಂದ ನಮ್ಮ ಪೂರ್ವಿಕರು ಏನು ಆಸ್ತಿಯನ್ನು ಇಟ್ಟಿದ್ದಾರೋ ಅದನ್ನು ಕಾಪಾಡಿಕೊಂಡು ಬರುವುದಕ್ಕೆ ಪ್ರಯತ್ನ ಮಾಡಬೇಕು. ಆದುದರಿಂದ ಮಧ್ಯಮ ವರ್ಗದವರ ರಕ್ಷಣೆ ಬಹು ಮುಖ್ಯ. ಇವರ ಜೀವನ ಮಟ್ಟವನ್ನು ನೋಡಿ ಇವರ ವರಮಾನಗಳಲ್ಲಿ ಒಂದು ನಿಗದಿ ಇಟ್ಟುಕೊಳ್ಳಬೇಕು. ಇಷ್ಟಕ್ಕೆ ಕಡಮೆ ಇರಬಾರದು, ಇಷ್ಟಕ್ಕೆ ಹೆಚ್ಚೂ ಇರಬಾರದೆಂದು ನಿಗದಿ ಮಾಡುವುದರಲ್ಲಿ, ಒಂದು ಕನಿಷ್ಠ ಪರಿಮಿತಿಯನ್ನು ನಿಗದಿಮಾಡುವುದರಲ್ಲಿ, ಕೊನೆಯ ಪಕ್ಷ ಒಬ್ಬ ಮನುಷ್ಯನಿಗೆ ತಿಂಗಳಿಗೆ ನೂರು ರೂಪಾಯಿ ಬೇಕಾಗುತ್ತದೆ. ಶ್ರೀ ಚಂದ್ರಶೇಖರಯ್ಯನವರು ಹೇಳಿದಹಾಗೆ, ನಮ್ಮ ಉಪಾಧ್ಯಾಯರು ಮತ್ತು ಇತರ ನೌಕರರಿಗೆ ಕನಿಷ್ಠಪಕ್ಷ ನೂರು ರೂಪಾಯಿ ವರಮಾನ ತಿಂಗಳಿಗೆ ಬರುವ ಹಾಗೆ ಮಾಡಬೇಕು. ಹೀಗೆ ಮಾಡಿದರೆ ಒಳ್ಳೆಯದು. ಮಧ್ಯಮ ತರಗತಿಯವರಿಗೆ ಈಗ ಇಷ್ಟು ವರಮಾನ ಕೂಡ ದೊರೆಯುತ್ತಿಲ್ಲ. ಈ ವಿಷಯಕ್ಕೆ ಹೆಚ್ಚು ಗಮನ ಕೊಡಬೇಕು ; ಮಧ್ಯಮ ತರಗತಿಯನ್ನು ರಕ್ಷಣೆ ಮಾಡಬೇಕು. ಇದು ಬಿಟ್ಟು ಬುಲ್‌ಡೋಜರ್ ತತ್ವದಮೇಲೆ ಹೋದರೆ, ಅದು ಸರಿಹೋಗುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

ಶ್ರೀ ಡಿ. ದೇವರಾಜ್‌ಅರಸ್ (ಹುಣಸೂರು).—ಸ್ವಾಮಿ, ಈಗ ಸಭೆ ಮುಂದೆ ಮಂಡಿಸಿರತಕ್ಕಂಥ ನಿರ್ಣಯವನ್ನು ಸಮರ್ಥಿಸಿ ಕೆಲವು ಮಾತುಗಳನ್ನು ಆಡಲು ಅಪೇಕ್ಷಿಸುತ್ತೇನೆ. ಶ್ರೀಮನ್‌ಮಹಾರಾಜರವರ ಭಾಷಣದಲ್ಲಿ ಮೊದಲನೆದಾಗಿ States re-organisation ವಿಚಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಅವರ ಭಾಷಣದಲ್ಲಿ ಅದಕ್ಕೆ ಪ್ರಥಮಸ್ಥಾನವನ್ನು ಕೊಟ್ಟಿರತಕ್ಕಂಥ ಉದ್ದೇಶ ಅದರ ಪ್ರಾಮುಖ್ಯತೆಯನ್ನೇ ಅರಿತು ಮಾಡಿರುವುದು ಆಗಿದೆ. ಈ ಭಾಷಾವಾರು ಪ್ರಾಂತಗಳ ಪ್ರಶ್ನೆ ದೇಶದ ಮುಂದೆ ಇರತಕ್ಕಂಥ ದೊಡ್ಡ ಪ್ರಶ್ನೆ ಎಂಬುದು ತಮಗೆಲ್ಲಾ ಗೊತ್ತಿದೆ. ಈ ವಿಚಾರದಲ್ಲಿ ಶ್ರೀಮನ್‌ಮಹಾರಾಜರವರು ಸಮತೂಕವಾದಂತಹ ಕೆಲವು ಮಾತುಗಳನ್ನು ಆಡಿದ್ದಾರೆ. ಈಗತಾನೆ ಮಾತನಾಡಿದಂಥ ಮಾನ್ಯ ಸ್ನೇಹಿತರಾದ ಶ್ರೀಮಾನ್ ರಾಮಯ್ಯನವರು ಇಲ್ಲಿ ಒಂದೆರಡು ಪದಗಳಮೇಲೆ ಟೀಕೆಮಾಡಿ ಮಾತನಾಡಿದ್ದಾರೆ. ಅದರಲ್ಲಿ ಹೀಗೆ ಹೇಳಿದೆ :

"The aim of any re-organisation could only be the good of the people concerned. Increased prosperity and well-being are the only justifications for disturbing the *status quo*."

*Status quo* maintain ಮಾಡತಕ್ಕಂಥ ಒಂದು ಮನೋಭಾವ ಬಹಳ ಸಂಕುಚಿತವಾದುದು, ಇದನ್ನು ವಿಶಾಲ ದೃಷ್ಟಿಯಿಂದ ನೋಡಬೇಕೆಂದು ಈಗತಾನೆ ಶ್ರೀಮಾನ್ ರಾಮಯ್ಯನವರು ವಾದಮಾಡಿದರು. ರಾಜಪ್ರಮುಖರ ಭಾಷಣದಲ್ಲಿ ಈಗಿರತಕ್ಕಂತಹ ಸಂಸ್ಥಾನಗಳ ವಿಂಗಡನೆ ಆಗಬೇಕಾದರೆ, ಅವುಗಳ ಎಲ್ಲೆಗಳು ಏರು ಪೇರು ಆಗಬೇಕಾದರೆ, ಆಯಾ ಸಂಸ್ಥಾನಗಳಲ್ಲಿರತಕ್ಕಂಥ ಪ್ರಜೆಗಳ ಸೌಕರ್ಯ ಮತ್ತು ಅವರ ಹಿತದೃಷ್ಟಿಯನ್ನು ಪ್ರಾಮುಖ್ಯವಾಗಿಟ್ಟುಕೊಂಡು ಮಾಡಬೇಕಾಗುತ್ತದೆ, ಎಂದು ಹೇಳಿದ್ದಾರೆ. ಇದು ಸಂಕುಚಿತಭಾವ ಎಂದು ಅವರು ಯಾವರೀತಿ ಅಭಿಪ್ರಾಯಪಟ್ಟು ಹೇಳಿದರೋ ನನಗಂತೂ ಅರ್ಥವಾಗುವುದಿಲ್ಲ. ಒಂದುವೇಳೆ ಅವರ ವಾದವನ್ನೇ ನಾವು ಒಪ್ಪುವುದಾದರೆ ಮೈಸೂರು ಅಸೆಂಬ್ಲಿ ಎಂದು ಹೆಸರು ಇಟ್ಟುಕೊಂಡು ನಾವು ನೂರುಜನ ಪ್ರತಿನಿಧಿಗಳು ಇಲ್ಲಿ ಏತಕ್ಕೆ ಇರಬೇಕು ಎಂಬ ಪ್ರಶ್ನೆಗೆ ನಮ್ಮ ಸ್ನೇಹಿತರು ಉತ್ತರ ಕೊಡಲಿ. ಅದೂ ಒಂದು ಸಂಕುಚಿತಭಾವನೆಯಲ್ಲವೇ ? ಇಂಡಿಯಾ ದೇಶಕ್ಕೆಲ್ಲಾ ಪಾರ್ಲಿಮೆಂಟ್ ಇದೆ. ನಾವೆಲ್ಲರೂ ಪಾರ್ಲಿಮೆಂಟಿನಲ್ಲಿ ನಡೆಸತಕ್ಕಂಥ ಕಾರ್ಯ ಕ್ರಮಗಳನ್ನು ಅನುಸರಿಸಿಹೋಗುವುದರಲ್ಲಿ ಅಭ್ಯಂತರವೇನು ? ಈಗ 25-30 ಸ್ಟೇಟುಗಳು ಏತಕ್ಕೆ ಇರಬೇಕು ? ಅದನ್ನು ಕೂಡ ನಮ್ಮ ಮಾನ್ಯ ಸ್ನೇಹಿತರು ಯೋಚನೆ ಮಾಡಬೇಕು. ಒಂದುವೇಳೆ ಈಗ ವಿಂಗಡನೆಮಾಡಿಕೊಂಡಿರತಕ್ಕಂಥದು ಸಂಕುಚಿತ ಮನೋಭಾವದಿಂದ ಆಗಿದೆಯೆಂದು ಒಪ್ಪಿಕೊಳ್ಳವು

ದಾದರೆ ಅದು ನಮ್ಮ ಸಂಕುಚಿತ ಮನೋಭಾವವೆಂದು ಎಣಿಸಬಹುದು. ಹಾಗೆ ಸುಮ್ಮನೆ ಒಂದು ಮಾನಸ್ಸಂತೋಷಕ್ಕಾಗಿ ಮಾತನಾಡುವುದಾದರೆ ಆ ವಿಷಯ ಬೇರೆ. ಈ ಭಾಷಾವಾರು ಪ್ರಾಂತದ ವಿಚಾರ ಹೆಚ್ಚಿಗೆ ಈ ಸಂದರ್ಭದಲ್ಲಿ ಚರ್ಚೆಮಾಡಬೇಕಾದುದು ಅವಶ್ಯಕವಿಲ್ಲವೆಂದು ನಾನು ತಿಳಿದಿದ್ದೇನೆ. ಏತಕ್ಕೆಂದರೆ ನಮ್ಮ ಮುಂದೆ ಶೇಷಾದ್ರಿ ಸಮಿತಿ ವರದಿ ಇದೆ. ಅದು ಈ ಸಭೆಯಲ್ಲಿ ಚರ್ಚೆಮಾಡುವುದಕ್ಕೆ ನಮ್ಮ ಮುಂದೆ ಬರುತ್ತದೆ. ಆ ಸಮಯದಲ್ಲಿ ನಾನು ಹೆಚ್ಚಾಗಿ ಮಾತನಾಡಲು ಇಚ್ಛೆಪಡುತ್ತೇನೆ. ಶ್ರೀಮನ್ಮಹಾರಾಜರವರು ಆಡಿರತಕ್ಕಂತ ಮಾತುಗಳು ಬಹಳ ದೀರ್ಘವಾಗಿ ಆಲೋಚನೆ ಮಾಡಿ ಹೇಳಿದವು ಮತ್ತು ನಮ್ಮ ಈ ಸಭೆಯು ಮೆಚ್ಚುವುದಕ್ಕೆ ಅರ್ಹವಾದಂಥವು ಎಂದು ಇಷ್ಟುಮಾತ್ರ ಹೇಳುತ್ತೇನೆ.

ಇನ್ನೊಂದು ಮುಖ್ಯ ವಿಚಾರ. ಲ್ಯಾಂಡ್ ರಿಫಾರಂಸ್ ವಿಚಾರದಲ್ಲಿ ಸರಕಾರದವರು ಕೆಲವು ಪ್ರಗತಿದಾಯಕವಾದಂಥ ಮಸೂದೆಗಳನ್ನು ತಂದಿದ್ದಾರೆ, ಅವನ್ನು ಇನ್ನೂ ಮುಂದುವರಿಸುತ್ತಾರೆ ಎಂದು ಹೇಳಿ ಅಪ್ಪಣೆ ಕೊಡಿಸಿದ್ದಾರೆ. ಈಗ ಸರ್ಕಾರದವರು ನಮ್ಮ ದೇಶದ ಮುಂದೆ ಇಟ್ಟಿರತಕ್ಕಂಥಾದ್ದು ಮಸೂದೆಗಳಿಂದಲೇ ಇವಷ್ಟರಿಂದ ನಮ್ಮ ದೇಶದಲ್ಲಿ ಭೂಸುಧಾರಣೆಯನ್ನು ನಾವು ಎಷ್ಟುಮಟ್ಟದಲ್ಲಿ ಮಾಡಬೇಕೋ ಅಷ್ಟು ಮಟ್ಟದಲ್ಲಿ ಮಾಡಿದಂತೆ ಆಗಲಿಲ್ಲ ಎಂದು ಹೇಳಿ ನಾನು ಅಭಿಪ್ರಾಯಪಡುತ್ತೇನೆ. ಈ ಭೂಮಿಯ ವಿಚಾರದಲ್ಲಿ ಒಂದು ಸೀಲಿಂಗ್ ಲಿಮಿಟ್ ವಿಧಾಯಕಮಾಡಿ ಇಷ್ಟು ಎಕರೆಮೇಲೆ ಯಾರಿಗೂ ಇರಕೂಡದು ಎಂಬ ರೀತಿ ಸರ್ಕಾರದಿಂದ ಒಂದು ಮಸೂದೆಯನ್ನು ಮಾಡಬೇಕಾಗುತ್ತದೆ ಎಂದು ಆಗಿಂದಾಗ್ಗೆ ಈ ಸಭೆಯಲ್ಲಿ ಒತ್ತಾಯಗಳು ಬಂದಿವೆ. ನಾನೇನೋ ಈ ಅಧಿವೇಶನದಲ್ಲಿ ಈ ರೀತಿಯಾದ ಒಂದು ಮಸೂದೆ ಬರಬಹುದು ಎಂದು ಭಾವಿಸಿದ್ದೆ. ಆದರೆ ಈ ರೀತಿಯಾದ ಮಸೂದೆ ಬರುವಹಾಗೆ ಕಾಣುವುದಿಲ್ಲ.

(*Disturbance*)

**Mr. SPEAKER.**—The Hon'ble Member may be allowed to make his speech.

ಶ್ರೀ ಡಿ. ದೇವರಾಜ್ ಅರಸ್.—ನಮ್ಮ ಮಾನ್ಯ ಸ್ನೇಹಿತರು ಕೆಲವರು ಅಪ್ಪಣೆ ಕೊಡಿಸಿದರು, ಭೂಸುಧಾರಣೆ ಮಾಡುವ ಜೊತೆಗೆ ಇನ್ನೂ ಅನೇಕ ರೀತಿಯಾದ ಸುಧಾರಣೆ ಆಗಬೇಕು ಎಂದು. ಇನ್ನೊಂದು ಕಡೆ ನಮ್ಮ ಸ್ನೇಹಿತರಾದ ಶ್ರೀಮಾನ್ ರಾಮಯ್ಯನವರು "ಬರೀ ಒಂದು ತಾತ್ವಿಕವಾಗಿ ಯೋಚನೆ ಮಾಡಿ ನಾವು ಇಂತಹ ಸುಧಾರಣೆಗಳನ್ನು ಬೇಗ ಬೇಗ ತರುವುದರಿಂದ ಸ್ವಲ್ಪ ತೊಂದರೆ ಆದರೂ ಆಗಬಹುದು. ನಮ್ಮ ದೇಶದ ಸಂಸ್ಕೃತಿಗೆ ಅಡ್ಡಿ ಉಂಟಾಗಬಹುದು, ಅದು ಕೊನೆಗೆ ನಶಿಸಿಹೋಗಬಹುದು" ಎಂದು ಆಕ್ಷೇಪಣೆಮಾಡುತ್ತಿದ್ದಾರೆ. ಇಂತಹ ಮೂಲಭೂತವಾದ ವಿಚಾರಗಳನ್ನು ಯೋಚನೆ ಮಾಡಬೇಕಾದರೆ ಮೊದಲು ಅದರಲ್ಲಿ ಅಡಗಿರತಕ್ಕಂತ ತತ್ತ್ವಗಳನ್ನು ನಾವು ಕೂಲಂಕಷವಾಗಿ ಯೋಚಿಸಿ ಮುಂದುವರಿಸಬೇಕಾಗಿದೆ. ಹಾಗಲ್ಲದೆ ಎಲ್ಲಿಯೋ ಒಂದು ದೇಶದಲ್ಲಿ ಈ ರೀತಿಮಾಡಿದ್ದಾರೆ, ಅದಕ್ಕೋಸ್ಕರವಾಗಿ ನಾವೂ ಈ ರೀತಿಯಾದ ಸುಧಾರಣೆಗಳನ್ನು ಮಾಡುತ್ತೇವೆ ಎಂಬುದಾಗಿ ಖಂಡಿತವಾಗಿಯೂ ಇದನ್ನು ಮಾಡಕೂಡದು. ಇದರಲ್ಲಿ ಅಡಗಿರತಕ್ಕಂಥ ಮೂಲ ತತ್ವಗಳು ಏನೆಂಬುದನ್ನು ತಿಳಿಯದೆ ಈ ಸುಧಾರಣೆಗಳು ಆಗಬೇಕೆಂದು ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ಕೂಗು ಎದ್ದಿದೆ. ಮನುಷ್ಯರಿಗೆ ಬರೀ ಅನ್ನ ಇದ್ದರೆ ಸಾಲದು. ಒಂದು ಆಧ್ಯಾತ್ಮಿಕವಾದ ಅಂದರೆ "Spiritual side of man" ಎಂದು ಏನು ಹೇಳುತ್ತಾರೆ, ಆ ತರಹ ಒಂದು ಬೆಳವಣಿಗೆಗೆ ಕೂಡ ಅವಕಾಶ ಇರಬೇಕು. ಬರೀ ಅನ್ನದ ಕೂಗು ಮಾತ್ರ ನಾವು ದೇಶದ ಮುಂದಿಟ್ಟರೆ ಸಾಲದು ಎಂದು ಹೇಳಿದರು. ಅದು ನಿಜವಾದ ಮಾತು. ಆದರೆ ಅನ್ನ ಕೊಡದೆ ನಾವು ಅವರಿಗೆ ವೇದವನ್ನೂ ತತ್ತ್ವವನ್ನೂ ಭಗವದ್ಗೀತೆಯನ್ನೂ ಹೇಳುವುದಕ್ಕಾಗುವುದಿಲ್ಲ. ಒಂದು ಕಡೆ ನಾನು ಓದಿದ್ದು ಜ್ಞಾಪಕವಿದೆ, ಮಹಾತ್ಮಾ ಗಾಂಧಿಯವರು ಹೇಳಿದ್ದಾರೆ, "God dare not appear before the poor, except in the form of bread." ದೇವರೂ ಕೂಡ ಬಡವರ ಮುಂದೆ ಬರಬೇಕಾದರೆ ಹೆದರುತ್ತಾನೆ. ಮೊದಲು ಅನ್ನದ ರೂಪದಲ್ಲಿ ಬರಬೇಕು. ಹಾಗಿರುವಾಗ ನಾವು ತತ್ತ್ವಬೋಧೆಗಳನ್ನು ಪ್ರಾಮುಖ್ಯವಾಗಿಡಲು ಸಾಧ್ಯವಿಲ್ಲ. ಅನ್ನ ಸಮಸ್ಯೆಯನ್ನು ಮೊದಲು ಬಗೆ ಹರಿಸಿ. ಇದಕ್ಕೆ ಒಂದು ಎಲ್ಲೆ ಇದೆ. ರಾಕ್ಷಸನೋಪಾದಿಯಲ್ಲಿ ತಿನ್ನುವುದಕ್ಕೆ ಅವಕಾಶ ಇಲ್ಲದೆ ಹೋದರೂ ಶರೀರಕ್ಕೆ ಬೇಕಾಗುವಷ್ಟು ಆಹಾರ ಪದಾರ್ಥಗಳು ಪ್ರತಿಯೊಬ್ಬ ಮನುಷ್ಯನಿಗೂ ಒದಗುವಂತೆ ಮಾಡಬೇಕಾದ್ದು ಸರಕಾರದ ಮತ್ತು ಸಮಾಜದ ಜವಾಬ್ದಾರಿ ಇರುವುದರಿಂದ ಈ ಕೆಲಸವನ್ನು ಮೊದಲು ಮಾಡಿಯೇ ತೀರಬೇಕು. ಮತ್ತೊಂದು ಮುಖ್ಯ ವಿಚಾರ ಏನು ಎಂದರೆ, ನಾವು ಸ್ವರಾಜ್ಯಕ್ಕೋಸ್ಕರ ಹೋರಾಟ ಮಾಡಿದಾಗ ಅದರ ಜೊತೆಯಲ್ಲಿ ಪ್ರಜಾ ಪ್ರಭುತ್ವಕ್ಕೂ ಕೂಡ ಹೋರಾಟ ನಡೆಸಿದೆವು. ಸ್ವರಾಜ್ಯವನ್ನೂ ಗಳಿಸಿದೆವು, ಪ್ರಜಾ ಪ್ರಭುತ್ವವನ್ನೂ ಕೂಡ ಸ್ಥಾಪನೆಮಾಡಿದೆವು. ಪ್ರಜಾ ಪ್ರಭುತ್ವವನ್ನು ಸ್ಥಾಪನೆ ಮಾಡಿದ ಮೇಲೆ ಅದರ ಅಂಗವಾಗಿ ಆಗಬೇಕಾದಂಥ ಸುಧಾರಣೆಗಳೆಲ್ಲ ಆಗಿಯೇ ತೀರಬೇಕು. ಪ್ರಜಾ ಪ್ರಭುತ್ವ ವಿಚಾರದಲ್ಲಿ ನಾನು ಸ್ವಲ್ಪ ವಿಶದವಾಗಿ ಪ್ರಸ್ತಾಪಮಾಡಿದರೆ ಈ ಸಭೆ ಮನ್ನಿಸಬೇಕು ಎಂದು ಪ್ರಾರ್ಥಿಸುತ್ತೇನೆ. ಹಿಂದೆ ಪ್ರಭುತ್ವ ರಾಜರಲ್ಲಿ ಕೇಂದ್ರೀಕೃತವಾಗಿತ್ತು. ಈಗ ಪ್ರತಿಯೊಬ್ಬ ಪ್ರಜೆಗೂ ಹಂಚಿ ಬಂದಿದೆ. ಇದು ಪ್ರಜಾ ಪ್ರಭುತ್ವದ ಮೂಲತತ್ತ್ವ, ಮತ್ತು ಮುಖ್ಯ ಲಕ್ಷಣ. ಯಾವ ಕಾಲದಲ್ಲಿ ಪ್ರಭುತ್ವ ಎನ್ನುವುದು ರಾಜರಲ್ಲಿ ಕೇಂದ್ರೀಕೃತವಾಗಿತ್ತೋ ಆ ಕಾಲದಲ್ಲಿ ದೇಶದ ಇಡೀ ಸ್ವತ್ತೂ ಕೂಡ ರಾಜರದೇ ಆಗಿತ್ತು. ಈಗ ಪ್ರಭುತ್ವ ಹೇಗೆ ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಗೂ ಸೇರಿದುದು ಎಂದು ಹೇಳುತ್ತಿದ್ದೇವೋ ಹಾಗೆಯೇ ದೇಶದ ಸ್ವತ್ತೂ ಕೂಡ ಪ್ರತಿಯೊಬ್ಬ ಪ್ರಜೆಗೂ ಸೇರಿದ್ದಾಗಿದೆ. ನಾವು ಪ್ರಜಾಪ್ರಭುತ್ವವನ್ನು ಸ್ಥಾಪನೆ ಮಾಡತಕ್ಕಂಥ ಕಾಲದಲ್ಲಿ ಅಥವಾ ಅದರ ಅಡಿಯಲ್ಲಿ ಕೆಲಸಕಾರ್ಯಗಳು ನಡೆಯುತ್ತಾ ಇರುವಾಗ ಒಂದು ವಿಚಾರವನ್ನು ಮುಂದೆ ಇಟ್ಟುಕೊಂಡು ಹೇಗೆ ವಾದ ಮಾಡುತ್ತೇವೋ ಅದಕ್ಕೆ ಲಗತ್ತಿಸಿರತಕ್ಕಂಥ ಈ ಮತ್ತೊಂದು ತತ್ವವನ್ನು ಪ್ರತಿಪಾದನೆ ಮಾಡುವಾಗ, ಜಾರಿಗೆ ತರುವಾಗ ನಾನಾ ವಿಧವಾದ ಮಾರ್ಗಗಳನ್ನು ಹಿಡಿಯುತ್ತಿದ್ದೇವೆ. Sovereignty ಹೇಗೆ ಪ್ರತಿಯೊಬ್ಬ ಪ್ರಜೆಗೂ ಹಂಚಿಕೆಯಾಗಿದೆಯೋ ಹಾಗೆಯೇ ದೇಶದಲ್ಲಿರತಕ್ಕ ಎಲ್ಲಾ ಸ್ವತ್ತುಗಳೂ ಕೂಡ ಪ್ರಜೆಗಳಲ್ಲಿ ಸಮನಾಗಿ ಹಂಚಿಕೆ ಆಗಿಯೇ ತೀರಬೇಕು. ಇದರಲ್ಲಿ ಒಂದನ್ನು ಬಿಟ್ಟು ಇನ್ನೊಂದು ಇರಲಾರದು. ಒಂದು ವೇಳೆ ಇದನ್ನು ಬೇರ್ಪಡಿಸುವುದಾದರೆ ಅಥವಾ ಇದೇ ರೀತಿ ಇರಬೇಕೆಂದು ಮಾಡುವುದಾದರೆ ದೇಶದಲ್ಲಿ ಅಶಾಂತಿ ಮತ್ತು ಘರ್ಷಣೆ ಖಂಡಿತ

(ಶ್ರೀ ಡಿ. ದೇವರಾಜ ಅರಸ್.)

ವಾಗಿಯೂ ತಪ್ಪುವುದಿಲ್ಲ. ಈ ಸಿದ್ಧಾಂತ ಈ ರೀತಿ ಇದೆಯೆಂದು ನಾವು ತಿಳಿವಳಿಕೆಗೆ ತೆಗೆದುಕೊಂಡರೆ ಬಾಕಿ ಸುಧಾರಣೆಗಳು ಯಾವ ರೀತಿ ಆಗಬೇಕು ಎಂಬುದನ್ನು ತಿಳಿದುಕೊಳ್ಳುವುದರಲ್ಲಿ ಹೆಚ್ಚಿಗೆ ಕಷ್ಟವಿರುವುದಿಲ್ಲ. ಶ್ರೀ ಚಂದ್ರಶೇಖರಯ್ಯನವರು ಅಪ್ಪಣೆಕೊಡಿಸಿದರು, "ಭೂ ಸುಧಾರಣೆ ಆಗಬಹುದು. ಅದೇ ರೀತಿ ಬಾಕಿ ಸುಧಾರಣೆಗಳನ್ನೂ ಏತಕ್ಕೆ ತರಬಾರದು? ಚರ ಆಸ್ತಿ ಬಿಟ್ಟರೆ ಸ್ಥಿರ ಆಸ್ತಿ ಇದೆ. ಸಂಬಳ ರೂಪದಲ್ಲಿ ಹೆಚ್ಚಿಗೆ ದುಡ್ಡು ಹೋಗುತ್ತಿದೆ. ಇದೆಲ್ಲವನ್ನೂ ಕೂಡ ಹತೋಟಿಗೆ ತರಬಾರದು" ಎಂದು ನಮ್ಮ ಇಂಡಿಯಾ ದೇಶದಲ್ಲಿ ಈ ಭೂ ಸುಧಾರಣೆ ವಿಚಾರವಾಗಿ ಅನೇಕ ಕಡೆ ಪ್ರಸ್ತಾಪ ಮಾಡುತ್ತಿದ್ದಾರೆ. ದೊಡ್ಡ ದೊಡ್ಡ ಮಹನೀಯರು ಇದನ್ನು ಪ್ರಸ್ತಾಪಮಾಡುವಾಗ ಮೊದಲನ ಹಂತವಾಗಲಿ ಆಮೇಲೆ ಬಾಕಿಯುದನ್ನು ಮಾಡೋಣ ಎಂದು ಹೇಳುತ್ತಿದ್ದಾರೆ. ನನ್ನ ಸ್ವಂತ ಅಭಿಪ್ರಾಯದಲ್ಲಿ ಈ ಭೂ ಸುಧಾರಣೆ ಜೊತೆಗೆ ಎಲ್ಲಾ ಆಸ್ತಿಗಳ ಹಂಚಿಕೆಯೂ ಕೂಡ ಆಗಿಯೇ ತೀರಬೇಕು ಎಂದು ಹೇಳುತ್ತೇನೆ.

ಇದು ಮೊದಲು ಆಗಲಿ, ಆಮೇಲೆ ಅದನ್ನು ನೋಡೋಣ, ಎನ್ನುವ ವಾದ ಅಷ್ಟು ಚೆನ್ನಾಗಿಲ್ಲ; ಅದರಿಂದ ಉಪಯೋಗವೂ ಕೂಡ ಆಗುವುದಿಲ್ಲ. ಬಹುಶಃ ಇಂಥ ವಾದಕ್ಕೆ ಮುಖ್ಯ ಕಾರಣವೇನಿದೆಯೆಂದರೆ, ಭೂಸುಧಾರಣೆಯ ವಿಚಾರವಾಗಿ ಈಗ ಹೆಚ್ಚಾಗಿ ಮಾತಾಡುವವರು, ಅದನ್ನು ಮಾಡಬೇಕೆನ್ನತಕ್ಕವರೆಲ್ಲರೂ ಭೂಮಿಯ ರೂಪದಲ್ಲಿ ಅವರಿಗೆ ಆಸ್ತಿ ಕಡಮೆ ಇರಬಹುದೊ ಏನೋ! ಅವರ ಆಸ್ತಿಯೆಲ್ಲಾ ಬೇರೆ ರೂಪದಲ್ಲಿದ್ದು, ಈಗ ಸದ್ಯಕ್ಕೆ ಭೂಸುಧಾರಣೆಯ ಕಡೆಗೆ ಈ ಕೂಗನ್ನು ತಿರುಗಿಸಿಬಿಟ್ಟರೆ, 'ಬೀಸುವ ದೊಣ್ಣೆ ತಪ್ಪಿಸಿದರೆ ಸಾವಿರ ವರುಷ ಆಯಸ್ಸು' ಎನ್ನುವಂತೆ ತಾವೂ ಕಾಲತಳ್ಳಬಹುದು ಮುಂದೆ ಮತ್ತೆ ಈ ಪ್ರಶ್ನೆಬಂದಾಗ ನೋಡೋಣ ಅಲ್ಲಿಯವರೆಗೂ ಸುಖವಾಗಿ ಅನುಭವಿಸಿಕೊಂಡಿರಬಹುದು. ಸದ್ಯಕ್ಕೆ ಭೂಮಿಯ ವಿಷಯದಲ್ಲಿ ಮಾಡಿಬಿಟ್ಟರೆ ತಮಗೆ ಕಷ್ಟ ತಪ್ಪುತ್ತದೆ ಎಂದು ಅವರು ಭಾವಿಸಿದ್ದರೆ ಅದು ತಪ್ಪು. ಅಂಥ ಭಾವನೆಗಳಿಗೆ ವ್ಯತಿರಿಕ್ತವಾಗಿ ನಡೆದೇ ನಡೆಯುತ್ತದೆ. ಆದ್ದರಿಂದ ಭೂಸುಧಾರಣೆಯ ಜೊತೆಯಲ್ಲಿ ಇತರ ಸುಧಾರಣೆಗಳನ್ನೂ ಮಾಡುವುದು ನ್ಯಾಯವಾದ ಮಾರ್ಗ. ಒಂದುವೇಳೆ ಹಾಗೆ ತಾವು ಮಾಡದೇ ಮುಂದುವರಿಸಿದರೆ, ಅಥವಾ ಇದನ್ನು ಮುಂಚೆಮಾಡಿ ಅದನ್ನು ಆಮೇಲೆ ಮಾಡುತ್ತೇವೆಂದು ಹೇಳಿದರೆ, ಭೂಮಿಯನ್ನು ಹೊಂದಿರುವ ವರ್ಗಕ್ಕೂ, ಭೂಮಿಯಿಲ್ಲದೆ ಇತರ ವಿಧವಾದ ಆಸ್ತಿಗಳನ್ನು ಹೊಂದಿರುವ ವರ್ಗಕ್ಕೂ ಘರ್ಷಣೆ ಖಂಡಿತವಾಗಿಯೂ ಆಗಿಯೇ ಆಗುತ್ತದೆ. ನಾವು ಸಾಧಾರಣವಾಗಿ ಭೂಸುಧಾರಣೆಯ ವಿಚಾರವಾಗಿ ಮಾತನಾಡುವಾಗ ಪ್ರಪ್ರಥಮವಾಗಿ ರಷ್ಯಾದೇಶದ, ಚೈನಾದೇಶದ ಉದಾಹರಣೆಯನ್ನು ಮುಂದಿಟ್ಟು ಮಾತನಾಡುತ್ತೇವೆ. ಈ ಎಲ್ಲಾ ದೇಶಗಳ ವಿಚಾರ ಮಾತನಾಡುವಾಗ ಒಂದು ವಿಚಾರ ನಾವು ಮರೆಯಬಾರದು. ರಷ್ಯಾ ದೇಶದಲ್ಲಾಗಲಿ, ಇತರ ದೇಶಗಳಲ್ಲೇ ಆಗಲಿ, ಭೂಸುಧಾರಣೆಯನ್ನು ಈಗ ಮಾಡಿದ್ದೇವೆ, ಇತರ ವಿಚಾರಗಳನ್ನು 1970ನೆಯ ಇಸವಿಗೆ ಮಾಡುತ್ತೇವೆಂದು ಹೇಳಿಲ್ಲ! ಅವರು ಎಲ್ಲವನ್ನೂ ಒಮ್ಮೆಯೇ comprehensive ಆಗಿ ಮಾಡಿದ್ದಾರೆ. ಹಿಂದೆಯಿದ್ದ economic structureನಲ್ಲಿ ಪ್ರತಿಯೊಂದು ಬಾಬಿನಲ್ಲೂ ಎಲ್ಲಾ ಸುಧಾರಣೆಗಳನ್ನೂ ಒಮ್ಮೆಲೇ ಮಾಡಿದ್ದಾರೆ. ಅದನ್ನು ನಾವು ಮರೆತು, ನಾವು ಇಂದು piecemeal ಆಗಿ, ಸದ್ಯಕ್ಕೆ ಭೂಸುಧಾರಣೆ ಮಾಡುವುದು, ಇನ್ನೊಂದು ಸಾರಿ ಸಂಬಳ ಕಡಮೆ ಮಾಡುವುದು, ಇನ್ನೊಂದು ಸಾರಿ ತೆರಿಗೆಗಳನ್ನು ಹೆಚ್ಚು-ಕಡಮೆ ಮಾಡುವುದು—ಆಮೇಲೆ Public sectorನಲ್ಲಿ ಕೈಗಾರಿಕೋದ್ಯಮಿಗಳು ಯಾವಯಾವುದಿರಬೇಕು, Private sectorನಲ್ಲಿ ಯಾವಯಾವುದಿರಬೇಕೆಂದು ಗೊತ್ತುಮಾಡುವುದು—ಈ ರೀತಿ ಬಿಡಿಸಿ ಬಿಡಿಸಿ ಯೋಚನೆ ಮಾಡುತ್ತಿದ್ದೇವೆ. ನನ್ನ ಅಭಿಪ್ರಾಯದಲ್ಲಿ ಇದು ಸೂಕ್ತವಲ್ಲ. ಇದರಿಂದ ನಾವೇನು ಗುರಿಯನ್ನು ಸಾಧಿಸಬೇಕೆಂದಿದ್ದೇವೋ ಅದನ್ನು ಸಾಧನೆಮಾಡಿದಂತಾಗದು. Economic Structureನ್ನು ನಾವು ಯೋಚನೆ ಮಾಡುವಾಗ ಭೂ-ಆಸ್ತಿಯೇ ಬೇರೆ, ಬೇರೆ ಆಸ್ತಿಗಳೇ ಬೇರೆ ಎಂದಲ್ಲ. ಹಣಕಾಸೇ ಬೇರೆ, ಮನೆಯೇ ಬೇರೆ ಆಗುವುದಿಲ್ಲ. ವ್ಯಾಪಾರ, ಕೃಷಿ, ಇತರ ಕಸುಬುಗಳು—ಇವೆಲ್ಲಕ್ಕೂ ಒಂದಕ್ಕೊಂದಕ್ಕೇ ಜೋಡಣೆಯಿರುವಾಗ, ನಾವು ಬಿಡಿಸಿ ಬಿಡಿಸಿ ಬಗೆಹರಿಸುವುದಕ್ಕೆ ಪ್ರಯತ್ನಪಡುವುದು ಜಾಣತನವಲ್ಲ. Comprehensive ಆಗಿ ಎಲ್ಲವನ್ನೂ ಯೋಚನೆಮಾಡಿ, ಭೂಸುಧಾರಣೆಯನ್ನು ಯಾವರೀತಿ ಮಾಡಬೇಕೆಂದು ಹೇಳುತ್ತೀರೋ ಅದೇ ರೀತಿ ಬೇರೆ ಸಂಪತ್ತುಗಳನ್ನೂ ಕೂಡ ಪರಿಗಣಿಸಿ ಅವುಗಳ ಸುಧಾರಣೆಯನ್ನೂ ಸಂಗಡಲೇ ಯೋಚನೆ ಮಾಡಬೇಕೆಂದು ನಾನು ಸರ್ಕಾರದವರಿಗೆ ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ.

ಇನ್ನೊಂದು ವಿಚಾರ ಪ್ರಸ್ತಾಪಮಾಡಿ ನನ್ನ ಮಾತು ಮುಗಿಸುತ್ತೇನೆ. ಡಿಸ್ಟ್ರಿಕ್ಟ್ ಬೋರ್ಡುಗಳ ಮತ್ತು ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳ ವಿಚಾರವನ್ನು ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ಇದನ್ನು ನೋಡಿದಮೇಲೆ 'Wisdom has at last dawned on the Government' ಎಂದು ನನಗನ್ನಿಸುತ್ತದೆ. ಕನ್ನಡದಲ್ಲಿ ಇದಕ್ಕೆ ಗಾದೆಯನ್ನು ಹೇಳುವುದಾದರೆ, 'ಕಡೆಗೆ ಹಾಕಿದ್ದ ಕರೀ ಕಂಬಳಿಯೇ ಬೇಕಾಯಿತು ಮಳೆಗಾಲಕ್ಕೆ' ಎಂಬಂತಾಯಿತು ಇವರ ನಿರ್ಧಾರ. ಡಿಸ್ಟ್ರಿಕ್ಟ್ ಬೋರ್ಡ್ ಇರಬೇಕೇ, ಹೋಗಬೇಕೇ ಎನ್ನುವುದನ್ನು ತೀರ್ಮಾನ ಮಾಡಲಿಕ್ಕೆ, ರಾಮ ! ರಾಮ ! ಮೂರು ವರ್ಷ ಆಯಿತು ! ಅದನ್ನೇ ಹೇಳಿದ್ದೇ ಹೇಳಿದ್ದೇ ! ಮೀಟಿಂಗ್ ಮಾಡಿದ್ದೇ ಮಾಡಿದ್ದೇ ! ಕೊನೆಗೆ ಡಿಸ್ಟ್ರಿಕ್ಟ್ ಬೋರ್ಡ್‌ಗಳಿರುವುದೇ ಸರಿ, ಅದನ್ನೇ continue ಮಾಡೋಣ ಎಂದು ಹೇಳಿದ್ದಾರೆ. ಈಗಲಾದರೂ, ಆ ತಿಳಿವಳಿಕೆ ಬಂತಲ್ಲಾ ಎಂದು ಸಂತೋಷಪಡುತ್ತೇನೆ. ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳನ್ನು Revive ಮಾಡಬೇಕು, ಅವುಗಳನ್ನೇ ಮುಂದಿಟ್ಟುಕೊಂಡು ಕೆಲಸ ಮಾಡಬೇಕೆಂಬ ಮಾತನ್ನೂ ಕೂಡ ಇಲ್ಲಿ ಸೇರಿಸಿದ್ದಾರೆ. ಇವರ ಜೊತೆಗೆ, ಡೆವಲಪ್‌ಮೆಂಟ್ ಕಮಿಟಿಗಳಿಗೆ ಚುನಾವಣೆಗಳನ್ನು ನಡೆಸುವುದು ಸೂಕ್ತವಲ್ಲ, ನಾಮಿನೇಷನ್ನನ್ನೇ ಮಾಡಬೇಕೆಂದೂ ಒಂದು ಸಲಹೆ ಇಲ್ಲದೆ. ಇದನ್ನು ನಾನೂ ಒಪ್ಪುತ್ತೇನೆ. ಬಹುಶಃ ಈ ಸಭೆಯಲ್ಲಿಯೂ ಆ ಮಾತಿಗೆ ಹೆಚ್ಚು ಮಾನ್ಯತೆ ಸಿಕ್ಕಬಹುದೆಂದು ನಾನು ಭಾವಿಸುತ್ತೇನೆ. ಏಕೆಂದರೆ, ಈಗ ತಾನೆ ಪಂಚಾಯಿತಿಗಳಿಗಾಗಿ ಎಲ್ಲಾ ಊರಿನಲ್ಲೂ ನಡೆದಂಥ ಪಂಚಾಯಿತಿಗಳನ್ನು ಮಾನ್ಯಸದಸ್ಯರೆಲ್ಲರೂ ಕೇಳಿರಬಹುದು, ನೋಡಿಯೂ ಇರಬಹುದು; ಅನುಭವಿಸಿಯೂ ಇರಬಹುದು. ಈ ಪಂಚಾಯಿತಿ ಚುನಾವಣೆಗಳಲ್ಲಿ ನಮ್ಮ ದೇಶದ ಚರಿತ್ರೆಯಲ್ಲಿ ಹಿಂದೆ ಎಲ್ಲಿಯೂ ಇಲ್ಲದಂಥ

ಪಾರ್ಟಿ-ವೈಷಮ್ಯಗಳು ಉದ್ಭವಿಸಿದವು ಎಂದು ಹೇಳಿದರೆ ಅದನ್ನು ಉತ್ಪ್ರೇಕ್ಷೆಯೆಂದು ಭಾವಿಸಬಾರದು. ಏನೇ ಆಗಲಿ, ಈ ಡೆವಲಪ್‌ಮೆಂಟ್ ಕಮಿಟಿಗಳಿಗೆ ಚುನಾವಣೆಗಳು ಬೇಡವೆಂದು ತೀರ್ಮಾನ ತೆಗೆದುಕೊಂಡಿರುವುದು ಬಹಳ ಜಾಣ್ಮೆಯ ತೀರ್ಮಾನ. ಹಿಂದೆ, ಈ ಕಮಿಟಿಗಳ ಕೆಲಸ ಅಷ್ಟು ಸಮರ್ಪಕವಾಗಿ ನಡೆಯಲಿಲ್ಲವೆಂದು ಈ ಸಭೆಯಲ್ಲಿ ಅನೇಕ ಟೀಕೆ ಟಿಪ್ಪಣಿಗಳು ಬಂದಿದ್ದುವು, ಆದರೂ ಇದೇ ಕಮಿಟಿಗಳನ್ನು ಮುಂದುವರಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರಲ್ಲಾ ಎಂದು ಕೇಳಬಹುದು. ಒಂದು ಎಚ್ಚರಿಕೆಯ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಏನೆಂದರೆ, ಹಿಂದೆ, ತಾಲ್ಲೂಕ್ ಡೆವಲಪ್‌ಮೆಂಟ್ ಕಮಿಟಿಗಳಿಂದ ಕೆಲಸ ಸರಿಯಾಗಿ ನಡೆಯದಿರುವುದಕ್ಕೆ ಕಾರಣ, ನಾಮಿನೇಷನ್ ಮಾಡುವ ಕಾಲದಲ್ಲಿ ಆಯಾ ತಾಲ್ಲೂಕುಗಳಲ್ಲಿ ಶ್ರದ್ಧೆಯಿಂದ ಕೆಲಸಮಾಡುವವರನ್ನು ಹಾಕದೆ ಹೋದದ್ದರಿಂದ ಕೆಲಸ ಸರಿಯಾಗಿ ನಡೆಯಲಿಲ್ಲ. ಕೆಲವುಕಡೆ ನೋಡಿದರೆ, ನಿಜವಾಗಿಯೂ ಕೆಲಸ ಚೆನ್ನಾಗಿ ನಡೆದಿದೆ. ಎಲ್ಲೆಲ್ಲಿ ಕಮಿಟಿಯ ಸದಸ್ಯರು ಶ್ರದ್ಧೆಯಿಂದ, ಆಸಕ್ತಿಯಿಂದ, ಸ್ವಾರ್ಥರಹಿತರಾಗಿ ಹಾಗೂ ಪ್ರತಿಷ್ಠೆಯನ್ನು ಬಿಟ್ಟು ಕೆಲಸಮಾಡಿವರೋ ಅಲ್ಲೆಲ್ಲಾ ಕೆಲಸ ಚೆನ್ನಾಗಿಯೇ ನಡೆದಿದೆ. ಹಾಗಿಲ್ಲದೆ, ಎಲ್ಲಿ ಸದಸ್ಯರು, ತಾನೊಬ್ಬ ಕಮಿಟಿಯ ಸದಸ್ಯ, ಅಮಲ್ದಾರರಿಗಿಂತ ತಾನು ಹೆಚ್ಚು, ತನ್ನ ಮಾತನ್ನು ಶೇಕ್‌ದಾರನು ಕೇಳಬೇಕೇ ಅಥವಾ ತಾನು ಅಮಲ್ದಾರರ ಮಾತು ಕೇಳಬೇಕೇ ಎಂದು ತಮ್ಮ ತಮ್ಮ ಪ್ರತಿಷ್ಠೆಗಳನ್ನು ನೋಡಿಕೊಂಡು ಹೋದರೋ ಅಲ್ಲಿ ಕೆಲಸ ನಡೆದಿಲ್ಲ. ಹಾಗಿಲ್ಲದೆ, ತಮ್ಮ ಪ್ರತಿಷ್ಠೆಗಳನ್ನು ಕಡಿಮೆ ಮಾಡಿಕೊಂಡು, ಮುಖ್ಯವಾಗಿ ಅಭಿವೃದ್ಧಿ ಕಾರ್ಯಗಳು ನಡೆಯಲಿ ಎಂಬ ಮನಸ್ಸಿನಿಂದ ಕೆಲಸ ಮಾಡುವ ಜನರು ಇಂಥ ಕಮಿಟಿಗಳಿಗೆ ಹೋಗುವಂತೆ ಮಾಡಬೇಕೆಂದು ಹೇಳುತ್ತೇನೆ. ಇನ್ನೂ ಒಂದು ವಿಚಾರ ಹೇಳುವುದಾದರೆ, ಪಾರ್ಟಿಪಂಗಡಗಳಮೇಲೆ ಈ ಕಮಿಟಿಗಳಿಗೆ ಸದಸ್ಯತ್ವವನ್ನು ಕೊಡುವುದು ಸೂಕ್ತವಲ್ಲ. ಈ ಕಮಿಟಿಗಳು ನಿಜವಾಗಿಯೂ ಯಾವ ಘನೋದ್ದೇಶದಿಂದ ಏರ್ಪಾಡಾಗಿದೆಯೋ ಆ ಉದ್ದೇಶ ಸಫಲವಾಗಬೇಕಾದರೆ, ಈ ಕಮಿಟಿಗೆ ಸದಸ್ಯರನ್ನು ಚುನಾಯಿಸುವಲ್ಲಿ, ಅವರು ಯಾವ ಪಾರ್ಟಿಗೇ ಸೇರಿರಲಿ, ಒಳ್ಳೆಯವರೂ, ದಕ್ಷರೂ, ಯೋಗ್ಯರೂ, ಮತ್ತು ದೇಶದ ಅಭಿವೃದ್ಧಿಯ ಕಡೆಗೆ ಗಮನವಿರುವವರಾಗಿದ್ದರೆ ಸರಿ, ಅವರಿಗೆ ಸದಸ್ಯತ್ವ ಕೊಟ್ಟರೆ ನಮ್ಮ ಉದ್ದೇಶ ಸಾರ್ಥಕವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಟ್ಟು ಶ್ರೀಮನ್ಮಹಾರಾಜರವರ ಭಾಷಣಕ್ಕೆ ಸಂಪೂರ್ಣ ಸ್ವಾಗತವನ್ನು ಬಯಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now adjourn to meet at Twelve of the Clock to-morrow.

---

*The House adjourned at Fifty-five Minutes past Four of the Clock to meet again at Twelve of the Clock on Tuesday, the 22nd February 1955.*

---